ಸಂಪುಟ: 06 ಸಂಚಿಕೆ: 10 ಪುಟಗಳು: 08 ಬುಧವಾರ 25 ಮಾರ್ಚ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನೀರು ತಾನು ಹರಿಯುವಾಗ ಎದುರಿಗೆ ಬರುವ ಕಸಕಡ್ಡಿ, ಕಲ್ಲು ಹೊತ್ತುಕೊಂಡೆ ಹರಿದು ತನ್ನ ಗುರಿ ತಲುಪುತ್ತದೆ. ಜೀವನದಲ್ಲಿ ಎದುರಾಗುವ ಅವಮಾನ ತಿರಸ್ಕಾರ, ಕೊಂಕು ನುಡಿಗಳನ್ನು ಎದುರಿಸುತ್ತಾ ಸಾಧನೆಯ ಶಿಖರ ಮುಟ್ಟಬೇಕು

## ಗುತ್ತಿಗೆ ಪಡೆದಿದ್ದ ಅದಾನಿ ಕಂಪನಿಯಿಂದ 850 ಕೋಟಿ ಬಾಕಿ

• ಉದಯವಾಹಿನಿ, ಬೆಂಗಳೂರು

ಕಲಬುರಗಿ ಜಿಲ್ಲೆ ವಾಡಿಯ ಕಣ್ಣೂರು ಲೈಮ್ ಸ್ಟೋನ್ ಬ್ಲಾಕ್ ಗುತ್ತಿಗೆ ಪಡೆದಿದ್ದ ಅದಾನಿ ಒಡೆತನದ ಎಸಿಸಿ ಕಂಪನಿ ರಾಜಧನ ಹಾಗೂ ದಂಡದ ಮೊತ್ತ ಸೇರಿ 850 ಕೋಟಿ ಬಾಕಿ ಉಳಿಸಿಕೊಂಡಿದೆ. ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಆರತಿ ಕೃಷ್ಣ ಅವರ ಪ್ರಶ್ನೆಗೆ ಗಣಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪರವಾಗಿ ಉತ್ತರಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಈ ಮಾಹಿತಿ ನೀಡಿದರು. 'ಕಲಬುರಗಿ ಜಿಲ್ಲೆಯ ಇಂಗಳಗಿ ಹಾಗೂ ರಾವೂರ ಗ್ರಾಮಗಳ ವ್ಯಾಪ್ತಿಯಲ್ಲಿ ಎಸಿಸಿ ಕಂಪನಿಗೆ 471.03 ಹೆಕ್ಟೇರ್ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗೆ ನೀಡಲಾಗಿದೆ. ಈ ವರ್ಷದ ಜನವರಿಯಲ್ಲೇ ಗುತ್ತಿಗೆ ಅವಧಿ ಮುಗಿದಿದ್ದು, ಹೊಸದಾಗಿ ಅನುಮತಿ ನೀಡಿಲ್ಲ. ರಾಜಧನ ಮತ್ತು ದಂಡದ ಮೊತ್ತ ಪ್ರಶ್ನಿಸಿ ಕಂಪನಿ ಕಾನೂನು ಹೋರಾಟ ನಡೆಸುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಪಾವತಿಸಬೇಕಾದ ಮೊತ್ತ ಇತ್ಯರ್ಥವಾಗಿಲ್ಲ. ಅಲ್ಲಿಯವರೆಗೆ ಗಣಿಗಾರಿಕೆ ನಡೆಸಲು ಕೋರ್ಟ್ ಅವಕಾಶ ನೀಡಿದೆ' ಎಂದರು.

## ಶಾಲಾ ಮಾನ್ಯತೆ ಸಮಿತಿ ಅವಧಿಯನ್ನು 6 ತಿಂಗಳು ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ಖಾಸಗಿ ಹಾಗೂ ಅನುದಾನಿತ ಶಾಲೆಗಳ ಮಾನ್ಯತೆ ನವೀಕರಣ ನಿಯಮಗಳನ್ನು ಸಡಿಲಿಸಿ, ವಿನಾಯಿತಿ ನೀಡಲು ರಚಿಸಲಾಗಿದ್ದ ಪುಟ್ಟಣ್ಣ ಅಧ್ಯಕ್ಷತೆಯ ವಿಶೇಷ ಸದನ ಸಮಿತಿಯ ಅವಧಿಯನ್ನು ವಿಧಾನಪರಿಷತ್ ಮತ್ತೆ 6 ತಿಂಗಳು ವಿಸ್ತರಿಸಿತು. 2025–26ನೇ ಸಾಲಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಹೈಕೋರ್ಟ್ ಆದೇಶದಂತೆ ಶಾಲೆಗಳಿಗೆ ಅಗ್ನಿ, ಕಟ್ಟಡದ ಸುರಕ್ಷತೆ ಪ್ರಮಾಣಪತ್ರ ಹಾಗೂ ಭೂ ಪರಿವರ್ತನೆ ಕಡ್ಡಾಯಗೊಳಿಸಲಾಗಿತ್ತು. 'ಶಿಕ್ಷಣ ಇಲಾಖೆ ಶಾಲೆಗಳ ನವೀಕರಣಕ್ಕೆ 64 ಅಂಶಗಳನ್ನು ನಿಗದಿಪಡಿಸಿ, ದಾಖಲೆಗಳನ್ನು ಪಡೆಯುತ್ತಿದೆ. ಇದರಿಂದ, ಶಾಲೆಗಳ ನವೀಕರಣ ಪತ್ರಗಳನ್ನು ಪಡೆಯುವುದು ಕಷ್ಟವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ವಿಧಿಸುತ್ತಿರುವ ತೆರಿಗೆ ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಕೆಲ ಷರತ್ತುಗಳನ್ನು ಸಡಿಲಿಸಬೇಕು' ಎಂದು ಸದಸ್ಯರು ಮಾಡಿದ್ದ ಮನವಿ ಕುರಿತು ಹಿಂದಿನ ಕಲಾಪಗಳಲ್ಲಿ ಚರ್ಚೆ ನಡೆಸಲಾಗಿತ್ತು. ಬಳಿಕ ಕಠಿಣ ನಿಯಮಗಳನ್ನು ಸಡಿಲಿಸಲು ಸಮಿತಿ ರಚಿಸಲಾಗಿತ್ತು.

## ಗೃಹಲಕ್ಷ್ಮಿ ಹಣ ಲೂಟಿ ಆಗಿದ್ದರೆ ಇ.ಡಿ ದಾಳಿಯಾಗುತ್ತಿತ್ತು: ಸಚಿವೆ

• ಉದಯವಾಹಿನಿ, ಬೆಂಗಳೂರು

'ಗೃಹಲಕ್ಷ್ಮಿ ಯೋಜನೆಯಡಿ 5 ಸಾವಿರ ಕೋಟಿ ಹಣವನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡಿದೆಯೆಂದು ಬಿಜೆಪಿ ಮುಖಂಡರು ಆರೋಪಿಸಿದರು. ಯೋಜನೆಯ ಹಣ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಮೋದಿ ಸರ್ಕಾರದ ಜಾರಿ ನಿರ್ದೇಶನಾಲಯ (ಇ.ಡಿ) ನನ್ನ ಮನೆ ಬಾಗಿಲಿಗೆ ಬಂದು ನಿಲ್ಲುತ್ತಿತ್ತು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

'ಆರ್ಥಿಕ ಇಲಾಖೆಯಿಂದ ಅನುಮೋದನೆ ಸಿಗದ ಕಾರಣ, 2025ರ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆ ಆಗಿರಲಿಲ್ಲ.

ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ, ಸಾಮಾಜಿಕ ಜಾಲತಾಣದಲ್ಲಿ 5 ಸಾವಿರ ಕೋಟಿಯ ಕಳ್ಳಿ ಎಂದು ಬಿಜೆಪಿಯವರು ನನ್ನನ್ನು ಜರಿದರು. ಮಾತಿನ ಚಪಲದಿಂದ ವಾಸ್ತವ ತಿಳಿದುಕೊಳ್ಳದೆ ದೂರಿದರು. ಯೋಜನೆಯಡಿ ಕಳೆದ ತಿಂಗಳ ಹಣ ಬಿಡುಗಡೆಗೂ ಆರ್ಥಿಕ ಇಲಾಖೆ ಅನುಮೋದನೆ ದೊರೆತಿದೆ' ಎಂದರು.

## ಹಣಕಾಸು ಆಯೋಗದ ಅನುದಾನಕ್ಕೆ ಕರ್ನಾಟಕದ ಜಿ.ಪಂ, ತಾ.ಪಂ. ಅನರ್ಹ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು 15ನೇ ಹಣಕಾಸು ಆಯೋಗದ 2025 26ನೇ ಸಾಲಿನ ಅನುದಾನ ಪಡೆಯಲು ಅನರ್ಹವಾಗಿವೆ ಎಂದು ಕೇಂದ್ರ, ಪಂಚಾಯತ್ ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶೋತ್ತರ ಅವಧಿಯಲ್ಲಿ ಉಡುಪಿ– ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, 'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2021ರ ಫೆಬ್ರುವರಿಯಿಂದ ಚುನಾವಣೆ ನಡೆಸದಿರುವುದೇ ಇದಕ್ಕೆ ಕಾರಣ' ಎಂದಿದ್ದಾರೆ. 2020–21ರಿಂದ 2024–25ರ ವರೆಗಿನ ಹಣಕಾಸು ಆಯೋಗದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅನುದಾನದ ಎಲ್ಲಾ ಕಂತುಗಳನ್ನು ರಾಜ್ಯದ ಅರ್ಹ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಆದರೆ, 2025–26ನೇ ಸಾಲಿನ ಎರಡು ಕಂತುಗಳನ್ನು ರಾಜ್ಯಕ್ಕೆ ಕೊಟ್ಟಿಲ್ಲ. ಕೇಂದ್ರ, ಬಿಡುಗಡೆ ಮಾಡಿರುವ ಮೊತ್ತವನ್ನು ಸಕಾಲಕ್ಕೆ ಪಂಚಾಯಿತಿಗಳಿಗೆ ರಾಜ್ಯ ಸರ್ಕಾರ ವರ್ಗಾವಣೆ ಮಾಡಿರಲಿಲ್ಲ. ಜತೆಗೆ, ವಿಳಂಬದ ದಂಡವನ್ನೂ ಪಾವತಿಸಿರಲಿಲ್ಲ' ಎಂದು ಅವರು ಹೇಳಿದ್ದಾರೆ.

## ಮತಾಂತರವಾದ್ರೆ SC ಮೀಸಲು ಇಲ್ಲ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು

# ಮತಾಂತರ ಅತಂತ್ರ ಧರ್ಮ ಸಂಕಟ



**ಎಸ್‌ಸಿ ಮತ್ತು ಎಸ್‌ಟಿ ಕಾಯ್ದೆ ಅಡಿ ದಾಖಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ**

**ಹಿಂದು, ಬೌದ್ಧ ಅಥವಾ ಸಿಖ್ ಹೊರತುಪಡಿಸಿ ಇತರ ಧರ್ಮಗಳಿಗೆ ಮತಾಂತರದಿಂದ ಎಸ್‌ಸಿ ಸ್ಥಾನಮಾನ ನಷ್ಟ: ಸುಪ್ರೀಂ**

**ಹಿಂದೂ ದಲಿತರ ಮೀಸಲಾತಿ ಪಾಲಿಗೆ ಕತ್ತರಿ?**

### ಸರ್ಕಾರದ ನಡೆಯ ಮೇಲೆಯೂ ಪರಿಣಾಮ

ಕರ್ನಾಟಕದಲ್ಲಿ ಮೀಸಲಾತಿ ಶೇ.50ರ ಮಿತಿಗಿಂತ ಹೆಚ್ಚಿಸಿರುವ 2022ರ ಕಾಯ್ದೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಸುಪ್ರೀಂ ಈ ಹೊಸ ತೀರ್ಪು ಆ ಪ್ರಕರಣಗಳ ಮೇಲೆ ನೇರ ಪರಿಣಾಮ ಬೀರದಿದ್ದರೂ, ಜಾತಿ ಪ್ರಮಾಣ ಪತ್ರಗಳ ಪರಿಶೀಲನೆಯನ್ನು ಮತ್ತಷ್ಟು




ಬಿಗಿಗೊಳಿಸಲು ಸರ್ಕಾರಿ ಇಲಾಖೆಗಳಿಗೆ ದಾರಿ ಮಾಡಿ ಕೊಡಲಿದೆ. ಯಾರಾದರೂ ಮತಾಂತರಗೊಂಡಿದ್ದರೆ, ಆ ಘಟನೆಯ ಅಥವಾ ಕ್ಲೇಮ್ ಮಾಡುವ ಸಮಯದಲ್ಲಿ ಅವರ ಧರ್ಮ ಯಾವುದಿತ್ತು ಎಂಬುದನ್ನು ಅಧಿಕಾರಿಗಳು ಕಡ್ಡಾಯವಾಗಿ ಪರಿಶೀಲಿಸಬೇಕಾಗುತ್ತದೆ.

• ಉದಯವಾಹಿನಿ, ಹೊಸದಿಲ್ಲಿ

ಒಬ್ಬ ವ್ಯಕ್ತಿಯು ಒಮ್ಮೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಬಳಿಕ ಅದನ್ನೇ ಸಕ್ರಿಯವಾಗಿ ಅನುಸರಿಸಿದರೆ ಆತನನ್ನು/ಆಕೆಯನ್ನು ಪರಿಶಿಷ್ಟ ಜಾತಿ ಸಮುದಾಯದ ಸದಸ್ಯ ಎಂದು ಪರಿಗಣಿಸುವಂತಿಲ್ಲ ಎಂಬ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ಮಂಗಳವಾರ ಎತ್ತಿ ಹಿಡಿದಿದೆ.

ಹಿಂದು, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಇತರ ಧರ್ಮವನ್ನು ಆಚರಿಸುವ ಯಾವುದೇ ವ್ಯಕ್ತಿಯನ್ನು ಪರಿಶಿಷ್ಟ ಜಾತಿಯ ಸದಸ್ಯ ಎಂದು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಧರ್ಮಕ್ಕೆ ಮತಾಂತರವು ಪರಿಶಿಷ್ಟ ಜಾತಿ ಸ್ಥಾನಮಾನದ ತಕ್ಷಣದ ಮತ್ತು ಸಂಪೂರ್ಣ ನಷ್ಟಕ್ಕೆ ಕಾರಣವಾಗುತ್ತದೆ ಎಂದು ನ್ಯಾಯಾಲಯವು ಹೇಳಿತು.

### ಮೀಸಲಾತಿಯ ಲಾಭ ಸಿಗಲ್ಲ

ಇನ್ನು ಆರ್ಥಿಕವಾಗಿ ನೋಡುವುದಾದರೆ, ಕರ್ನಾಟಕದಲ್ಲಿರುವ ಶೇಕಡಾ 17 ರಷ್ಟು ಎಸ್‌ಸಿ ಮೀಸಲಾತಿಯ ಲಾಭ ಇವರಿಗೆ ಸಿಗುವುದಿಲ್ಲ. ಅವರು ಒಬಿಸಿ ಅಥವಾ ಸಾಮಾನ್ಯ ವರ್ಗಕ್ಕೆ ಶಿಫ್ಟ್ ಆಗಲಿವೆ. ಉದ್ಯೋಗದಲ್ಲಿ ಬಡ್ತಿ, ಸೀನಿಯಾರಿಟಿ ಕೂಡ ಇವರಿಗೆ ಈಗ ಸಿಗಲ್ಲ. ಇದರ ಜೊತೆ ನಗರದ ಕೊಳೆಗೇರಿಗಳಲ್ಲಿ ವಾಸಿಸುವ ಮತ್ತು ಸರ್ಕಾರಿ ಯೋಜನೆಗಳನ್ನೇ ನಂಬಿರುವ ಬಡ ದಲಿತ ಕುಟುಂಬಗಳಿಗೆ ದೊಡ್ಡ ಹೊಡೆತ ಬೀಳಲಿದೆ ಎನ್ನಲಾಗಿದೆ. ಇದರಿಂದ ಇವರೆಲ್ಲಾ ಘರ್ ವಾಪಸಿ ಮಾಡುವ ನಿರೀಕ್ಷೆ ಹೆಚ್ಚಾಗಿದೆ.

1950ರ ಸಂವಿಧಾನ (ಪರಿಶಿಷ್ಟ ಜಾತಿ) ಆದೇಶವು ಇದನ್ನು ಸ್ಪಷ್ಟಪಡಿಸಿದೆ ಮತ್ತು ಈ ಆದೇಶದಡಿಯ ನಿರ್ಬಂಧವು ಸ್ಪಷ್ಟವಾಗಿದ್ದು ಯಾವುದೇ ವಿನಾಯಿತಿಯನ್ನು ಅನುಮತಿಸುವುದಿಲ್ಲ. 1950ರ ಆದೇಶದ ಉಪ ನಿಬಂಧನೆ 3ರಲ್ಲಿ ನಿರ್ದಿಷ್ಟಪಡಿಸಿರದ ಇತರ ಯಾವುದೇ ಧರ್ಮಕ್ಕೆ ಮತಾಂತರಗೊಂಡರೆ, ಜನನವನ್ನು ಲೆಕ್ಕಿಸದೆ, ಪರಿಶಿಷ್ಟ ಜಾತಿ ಸ್ಥಾನಮಾನವನ್ನು ತಕ್ಷಣವೇ ಕಳೆದುಕೊಳ್ಳಬೇಕಾಗುತ್ತದೆ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿತು.

ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಪಾದ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ವ್ಯಕ್ತಿಯೋರ್ವರು ತನ್ನ ಮೇಲೆ ಹಲ್ಲೆ ನಡೆಸಿದ್ದ ಕೆಲವು ವ್ಯಕ್ತಿಗಳ ವಿರುದ್ಧ ಎಸ್‌ಸಿ–ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ದಾಖಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವು ಈ ತೀರ್ಪನ್ನು ಹೊರಡಿಸಿತ್ತು. ವ್ಯಕ್ತಿ ಎಸ್‌ಸಿ–ಎಸ್‌ಟಿ ಕಾಯ್ದೆಯಡಿ ರಕ್ಷಣೆಯನ್ನು ಕೋರಿದ್ದು ಇದನ್ನು ಪ್ರಶ್ನಿಸಿದ್ದ ಆರೋಪಿಗಳು ಪಾದ್ರಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಪಾದ್ರಿಯಾಗಿ ಆ ಧರ್ಮವನ್ನು ಸಕ್ರಿಯವಾಗಿ ಪಾಲಿಸುತ್ತಿರುವುದರಿಂದ ಈ ಕೋರಿಕೆಯು ಕಾನೂನುಬಾಹಿರವಾಗಿದೆ ಎಂದು ಪ್ರತಿಪಾದಿಸಿದ್ದರು. ಕ್ರೈಸ್ತ ಧರ್ಮದಲ್ಲಿ ಜಾತಿ ವ್ಯವಸ್ಥೆಯಿಲ್ಲ, ಹೀಗಾಗಿ ಎಸ್‌ಸಿ–ಎಸ್‌ಟಿ ಕಾಯ್ದೆಯ ನಿಬಂಧನೆಗಳ ವ್ಯಾಪ್ತಿಗೊಳಪಡುವುದಿಲ್ಲ ಎಂದು ಆಂಧ್ರಪ್ರದೇಶ ಉಚ್ಚ ನ್ಯಾಯಾಲಯವು ತನ್ನ ಏ.30,2025ರ ಆದೇಶದಲ್ಲಿ ಹೇಳಿತ್ತು ಮತ್ತು ಅರ್ಜಿದಾರರ ಆರೋಪಗಳನ್ನು ತಳ್ಳಿಹಾಕಿತ್ತು. ಇದನ್ನು ಪ್ರಶ್ನಿಸಿ ಪಾದ್ರಿ ವಿಶೇಷ ರಜೆ ಅರ್ಜಿಯನ್ನು ಸಲ್ಲಿಸಿದ್ದರು.

**ಕರ್ನಾಟಕದಲ್ಲಿಯೂ ಬೀರಲಿದೆ ಎಫೆಕ್ಟ್:** ಸುಪ್ರೀಂ ಕೋರ್ಟ್‌ನ 2015ರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಸುಮಾರು 12 ಸಾವಿರಕ್ಕೂ ಹೆಚ್ಚು ದಲಿತ ಕ್ರಿಶ್ಚಿಯನ್ನರಿದ್ದಾರೆ. ಈ ತೀರ್ಪಿನಿಂದಾಗಿ, ಮತಾಂತರಗೊಂಡವರು ಎಸ್‌ಸಿ/ಎಸ್‌ಟಿ ಕಾಯ್ದೆಯ ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ. ಇದು ಅವರ ಮೇಲಿನ ದೌರ್ಜನ್ಯ ಹೆಚ್ಚಾಗಲು ಕಾರಣವಾಗಬಹುದು ಎಂಬ ಆತಂಕವಿದೆ. ಅವರು ಈಗ ಧರ್ಮವನ್ನು ಆರಿಸಿಕೊಳ್ಳಬೇಕೋ ಅಥವಾ ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ಆರಿಸಿಕೊಳ್ಳಬೇಕೋ ಎಂಬ ಧರ್ಮಸಂಕಟಕ್ಕೆ ಸಿಲುಕಲಿದ್ದಾರೆ. ಇದು ಘರ್–ವಾಪಸಿ ಅಥವಾ ತಾವು ಮತಾಂತರಗೊಂಡಿರುವುದನ್ನು ಗೌಪ್ಯವಾಗಿಡಲು ಪ್ರಚೋದಿಸಬಹುದು.

### ಮತಾಂತರವಾದವರಿಗೆ ಮೀಸಲಾತಿ ಏಕೆ ಬೇಡ

ಅಸ್ಪೃಶ್ಯತೆ ಮತ್ತು ಜಾತಿ ಶೋಷಣೆ ಎಂಬುದು ಹಿಂದೂ ಧರ್ಮದ ವ್ಯವಸ್ಥೆಗೆ ಅಂಟಿಕೊಂಡಿರುವ ಪಿಡುಗು. ಆದರೆ, ಕ್ರಿಶ್ಚಿಯನ್ ಅಥವಾ ಇಸ್ಲಾಂ



ಧರ್ಮಕ್ಕೆ ಮತಾಂತರವಾದವರು ಈ ಜಾತಿ ಶೋಷಣೆಯಿಂದ ತಪ್ಪಿಸಿಕೊಳ್ಳಲು ಹೋಗಿರುತ್ತಾರೆ. ಆ ಧರ್ಮಗಳಲ್ಲಿ ಜಾತಿ ವ್ಯವಸ್ಥೆ ಇಲ್ಲ, ಅವು ವಿದೇಶಿ ಮೂಲದ ಧರ್ಮಗಳು. ಹೀಗಾಗಿ ಅಲ್ಲಿ ಅಸ್ಪೃಶ್ಯತೆ ಇದೆ ಎಂಬುದಕ್ಕೆ ಯಾವುದೇ ದಾಖಲೆಗಳಿಲ್ಲ. ಒಂದು ವೇಳೆ ಮತಾಂತರಗೊಂಡವರಿಗೂ ಎಸ್‌ಸಿ ಸ್ಥಾನಮಾನ ನೀಡಿದರೆ, ನಿಜವಾಗಿಯೂ ಇಂದಿಗೂ ಅಸ್ಪೃಶ್ಯತೆ ಅನುಭವಿಸುತ್ತಿರುವ ಹಿಂದೂ ದಲಿತರ ಮೀಸಲಾತಿ ಪಾಲಿಗೆ ಕತ್ತರಿ ಬೀಳುತ್ತದೆ.

1. ಹಿಂದೂ ಧರ್ಮದಿಂದ ಮತಾಂತರವಾದ್ರೆ SC ಸ್ಥಾನಮಾನ ರದ್ದು - ಸುಪ್ರೀಂ ಕೋರ್ಟ್ ತೀರ್ಪು.
2. ಕರ್ನಾಟಕದಲ್ಲಿಯೂ 12 ಸಾವಿರ ದಲಿತ ಕ್ರಿಶ್ಚಿಯನ್ನರಿಗೆ ಅನ್ವಯ.
3. ಕರ್ನಾಟಕದಲ್ಲಿರುವ ಶೇಕಡಾ 17 ರಷ್ಟು ಎಸ್‌ಸಿ ಮೀಸಲಾತಿಯ ಲಾಭ ದಲಿತ ಕ್ರಿಶ್ಚಿಯನ್ನರಿಗೆ ಕೈತಪ್ಪಲಿದೆ.



### ಮಹತ್ವದ ಆದೇಶ ನೀಡಿದ ಪೀಠ

ನ್ಯಾ. ಪ್ರಶಾಂತ್ ಕುಮಾರ್ ಮಿಶ್ರಾ ಪೀಠ ಈ ಆದೇಶವನ್ನು ನೀಡಿದೆ. ಹಿಂದೂ ಧರ್ಮ, ಸಿಖ್ ಧರ್ಮ ಅಥವಾ ಬೌದ್ಧ ಧರ್ಮವನ್ನು ಹೊರತುಪಡಿಸಿ ಬೇರೆ ಧರ್ಮವನ್ನು ಅನುಸರಿಸುವ ಯಾವುದೇ ವ್ಯಕ್ತಿಯನ್ನು ಪರಿಶಿಷ್ಟ ಸಮುದಾಯದ ವ್ಯಕ್ತಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಪೀಠವು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ.ಈ ಸಂಬಂದ ತೀರ್ಪು ಪ್ರಕಟಿಸಿದ ಸುಪ್ರೀಂಕೋರ್ಟ್‌ನ ಪೀಠ ಅರ್ಜಿದಾರರು ಕ್ರಿಶ್ಚಿಯನ್ ಧರ್ಮದಿಂದ ತಮ್ಮ ಮೂಲ ಧರ್ಮಕ್ಕೆ ಮರು ಮತಾಂತರಗೊಂಡಿಲ್ಲ ಅಥವಾ ಮಡಿಕಾ ಸಮುದಾಯಕ್ಕೆ ಹಿಂದಿರುಗಿಲ್ಲ. ಅರ್ಜಿದಾರರು ಕ್ರಿಶ್ಚಿಯನ್ ಸಮುದಾಯದಲ್ಲಿ ಮುಂದುವರೆದಿದ್ದು, ಕಳೆದೊಂದು ದಶಕದಿಂದ ಪಾದ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ತಮ್ಮ ಗ್ರಾಮದ ಮನೆಯಲ್ಲಿ ಪ್ರತಿ ನಿಯಮಿತ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ ಎಂಬುದನ್ನು ಗಮನಿಸಿದೆ. ವ್ಯಕ್ತಿಯೊಬ್ಬ ತನ್ನ ಮೂಲ ಧರ್ಮವನ್ನು ಬಿಟ್ಟು ಬೇರೆ ಯಾವುದೇ ಧರ್ಮಕ್ಕೆ ಮತಾಂತರಗೊಂಡರೆ ಅವರು ಮೊದಲಿದ್ದ ಪರಿಶಿಷ್ಟ ಜಾತಿ ಅಥವಾ ಪಂಗಡದ ಸ್ಥಾನಮಾನ ಕಳೆದುಕೊಳ್ಳುತ್ತಾರೆ ಎಂದು ನ್ಯಾಯಾಲಯ ಇದೇ ವೇಳೆ ಸ್ಪಷ್ಟಪಡಿಸಿದೆ.

## ಬಿಸಿ ಬಿಸಿ ಚರ್ಚೆಗೆ ಗ್ರಾಸವಾದ ಶಿವಲಿಂಗೇಗೌಡರ ಆಂಗ್ಲ ಭಾಷಾ ಮೋಹ!

• ಉದಯವಾಹಿನಿ, ಬೆಂಗಳೂರು

ವಿಧಾನಸಭೆಯಲ್ಲಿ ಕನ್ನಡ ಹಾಗೂ ಆಂಗ್ಲ ಭಾಷೆ ವಿಚಾರವಾಗಿ ಜಟಾಪಟಿ ನಡೆಯಿತು. ಈ ನಡುವೆ ಇಂಗ್ಲಿಷ್ ಶಾಲೆಗಳು ಬೇಕೇ ಬೇಕು ಎಂದು ಕಾಂಗ್ರೆಸ್ ಸದಸ್ಯ ಶಿವಲಿಂಗೇಗೌಡ ಪಟ್ಟು ಹಿಡಿದ ಪ್ರಸಂಗ ನಡೆಯಿತು. 2026ನೇ ಸಾಲಿನ ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ವಿಧೇಯಕ ಅಂಗೀಕಾರ ಸಂದರ್ಭದಲ್ಲಿ ಕನ್ನಡ ಹಾಗೂ ಆಂಗ್ಲ ಭಾಷಾ ಶಿಕ್ಷಣದ ಬಗ್ಗೆ ಸ್ವಾರಸ್ಯಕರ ಚರ್ಚೆ ನಡೆಯಿತು.

**ಸದನ ಸ್ವಾರಸ್ಯ**



ಸರ್ಕಾರಿ ಶಾಲೆ ಮಕ್ಕಳು ಸಹ ಇಂಗ್ಲಿಷ್ ಓದಬೇಕು ಎಂದು ಶಿವಲಿಂಗೇಗೌಡ ಹಠ ಮಾಡಿದರು. ಈ ವೇಳೆ ಬಸವರಾಜ ರಾಯರೆಡ್ಡಿ ಮತ್ತು ಶಿವಲಿಂಗೇ ಗೌಡರ ನಡುವೆ ವಾಗ್ವಾದವೇ ನಡೆಯಿತು. ಇಂಗ್ಲಿಷ್ ಬರೋರು ಮಾತ್ರ ಮೇಧಾವಿಗಳಲ್ಲ ಎಂದು ರಾಯರೆಡ್ಡಿ ಕನ್ನಡದ ಪರವಾಗಿ ಮಾತನಾಡಿದರು.ನಾವೆಲ್ಲಾ ಪಿಯುಸಿ ತನಕ ಕನ್ನಡ ಓದಿದ್ದೇವೆ ಎಂದು ಸಮರ್ಥಿಸಿಕೊಂಡರು.

ರಾಯರೆಡ್ಡಿ ವಾದಕ್ಕೆ ತಿರುಗೇಟು ನೀಡಿದ ಶಿವಲಿಂಗೇಗೌಡ, ಹಳ್ಳಿ ಮಕ್ಕಳು, ಆರ್ಥಿಕ ಶಕ್ತಿ ಇಲ್ಲದ ಮಕ್ಕಳು ಇಂಗ್ಲಿಷ್ ಓದಬೇಕು. ಪ್ರಪಂಚ ವೈಜ್ಞಾನಿಕವಾಗಿ ಬೆಳೆದಿದೆ ಎಂದು ಇಂಗ್ಲಿಷ್ ಶಿಕ್ಷಣದ ಮಹತ್ವವನ್ನು ಸದನಕ್ಕೆ ತಿಳಿಸಿದರು.

ಆಡಳಿತ ಪಕ್ಷದ ಇಬ್ಬರು ಸದಸ್ಯರ ಮಾತಿನ ಚಕಮಕಿಗೆ ಬಿಜೆಪಿ ಸದಸ್ಯರು ಹಾಸ್ಯ ರೂಪದಲ್ಲಿ ತಿರುಗೇಟು ನೀಡಿದರು. ಅವರಿಬ್ಬರಿಗೆ ಯಾವುದು ಬೇಕು ಮೊದಲು ಮುಗಿಸಿ ಎಂದು ಕಾಲೆಳೆದರು.

### ರೈತರ ಮಕ್ಕಳನ್ನು ಯಾರೂ ಮದುವೆ ಆಗುತ್ತಿಲ್ಲ!

ರೈತರ ಮಕ್ಕಳನ್ನು ಯಾರೂ ಮದುವೆ ಆಗುತ್ತಿಲ್ಲ ಎಂದು ಸದನದಲ್ಲಿ ಕಾಂಗ್ರೆಸ್ ಸದಸ್ಯ ಎಚ್ ಡಿ ರಂಗನಾಥ್ ನೋವು ತೋಡಿಕೊಂಡರು. ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ರೈತರ ಮಕ್ಕಳಿಗೆ ಹೆಣ್ಣು ಸಿಗದ ಬಗ್ಗೆ ಪ್ರಸ್ತಾಪ ಮಾಡಿ, ರೈತರ ಮನೆ ಸೊಸೆಯಾಗಿರೋಗೆ ಏನಾದರೂ ಸರ್ಕಾರ ಭತ್ಯೆ ಕೊಡಬೇಕು. ಸರ್ಕಾರ ಏನಾದರೂ ಸಬ್ಸಿಡಿ ಕೊಡುವಂತೆ ರಂಗನಾಥ್ ಆಗ್ರಹಿಸಿದರು.

ಶಿವಲಿಂಗೇಗೌಡರ ಕನ್ನಡವೂ ಇರಲಿ, ರಾಯರೆಡ್ಡಿಯವರ ಇಂಗ್ಲಿಷ್ ಸಹ ಇರಲಿ ಎಂದು ಸುನೀಲ್ ಕುಮಾರ್ ನಗೆ ಚಟಾಕಿ ಹಾರಿಸಿದರು.

**ಶಿವಲಿಂಗೇಗೌಡರ ಬಾಂಬೆ ಇಂಗ್ಲಿಷ್ ಇದೆ!:** ಈ ವೇಳೆ ಶಿವಲಿಂಗೇಗೌಡರ ಬಾಂಬೆ ಇಂಗ್ಲಿಷ್ ಒಂದಿದೆ ಅಂತ ವಿಪಕ್ಷ ನಾಯಕ ಅಶೋಕ್ ಕಾಲೆಳೆದರು. ಆಪರೇಷನ್ ಕಮಲದ ವೇಳೆ ಮುಂಬೈಗೆ ತೆರಳಿ ಇಂಗ್ಲಿಷ್ ಮಾತನಾಡಿದ್ದನ್ನು ಆರ್ ಅಶೋಕ್ ಸದನದಲ್ಲಿ ನೆನಪಿಸಿಕೊಂಡು ಕಿಚಾಯಿಸಿದರು.

**ಸಲಹೆ ಕೊಟ್ಟ ಸ್ಪೀಕರ್:** ಭಾಷೆಯ ವಿಚಾರವಾಗಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸ್ಪೀಕರ್ ಖಾದರ್ ಸಲಹೆ ನೀಡಿ, ಕರ್ನಾಟಕದ ಶಾಲೆಗಳಲ್ಲಿ ಲಾಂಗ್ವೇಜ್ ಲ್ಯಾಬ್ ತೆರೆಯಿರಿ. ಕನ್ನಡದ ಜೊತೆಗೆ ಎಲ್ಲಾ ಭಾಷೆಗಳನ್ನ ಕಲಿಯುವಂತಾಗಬೇಕು. ಲಾಂಗ್ವೇಜ್ ಲ್ಯಾಬ್ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ ಎಂದರು.

ಇದೇ ವೇಳೆ ನಾನು ನನ್ನ ನೋವನ್ನು ಸಿಎಂಗೆ ಹೇಳ್ಕೊಳ್ತಿದ್ದೇನೆ. ನಾನು ಡಾಕ್ಟರ್, ಅದಕ್ಕಾಗಿ ನಮಗೆ ಒಂದು ಮೆಡಿಕಲ್ ಕಾಲೇಜು ಬೇಕು. ಆಗಿಲ್ಲ ಅಂದರೆ ಯಾರನ್ನಾದರೂ ಸ್ನೇಹಿತರ ಕರೆದುಕೊಂಡು ಬರುತ್ತೇನೆ. ಪಿಪಿಪಿ ಮಾಡೆಲ್‌ನಲ್ಲಿ ತಾಲ್ಲೂಕಿನಲ್ಲಿ ಮೆಡಿಕಲ್ ಕಾಲೇಜು ನಿರ್ಮಿಸಲು ಅನುಮತಿ ಬೇಕು ಎಂದು ರಂಗನಾಥ್ ಮನವಿ ಮಾಡಿದರು.

## ಪ್ರಭಾ ಮಲ್ಲಿಕಾರ್ಜುನ್‌ಗೆ ಎಂಪಿ ಟಿಕೆಟ್: ನಾವೇ ಹಿಂಸೆ ಮಾಡಿಕೊಟ್ಟಿದ್ದು

### ■ ಕಳೆದ ಲೋಕಸಭಾ ಚುನಾವಣೆಯಲ್ಲಿ ಶಾಮನೂರುನವರ ಸೊಸೆಗೆ ಟಿಕೆಟ್ ಕೊಟ್ಟ ವಿಚಾರ ಬಹಿರಂಗ

• ಉದಯವಾಹಿನಿ, ಬೆಂಗಳೂರು

ಕಳೆದ ಲೋಕಸಭೆಯಲ್ಲಿ ದಾವಣಗೆರೆ ಕ್ಷೇತ್ರದ ಟಿಕೆಟ್ ಪ್ರಭಾ ಮಲ್ಲಿಕಾರ್ಜುನ್ ಪಾಲಾಗಿದ್ದು ಹೇಗೆಂದು ಡಿಸಿಎಂ ಡಿಕೆ ಶಿವಕುಮಾರ್ ಸತ್ಯ ಬಿಚ್ಚಿಟ್ಟಿದ್ದಾರೆ. ನಾವೇ ಹಿಂಸೆ, ಒತ್ತಾಯ ಮಾಡಿ ಅವರಿಗೆ ಟಿಕೆಟ್ ನೀಡಿದ್ದೆವು ಎಂದು ಹೇಳಿದ್ದಾರೆ. ದೆಹಲಿಯ ವಿಮಾನ ನಿಲ್ದಾಣ ಹಾಗೂ ಕರ್ನಾಟಕ ಭವನದಲ್ಲಿ ಮಾಧ್ಯಮಗಳಿಗೆ ಶಿವಕುಮಾರ್ ಅವರು ಮಂಗಳವಾರ ಪ್ರತಿಕ್ರಿಯೆ ನೀಡಿದರು. ಈ ವೇಳೆ ದಾವಣಗೆರೆಗೆ ಸಂಬಂಧಿಸಿದ ಚುನಾವಣೆಗಳಲ್ಲಿ ಕಾಂಗ್ರೆಸ್ ಟಿಕೆಟ್ ಶಾಮನೂರು ಕುಟುಂಬಕ್ಕೆ ಸತತವಾಗಿ ನೀಡುತ್ತಿರುವುದೇಕೆ ಎಂಬ ಪ್ರಶ್ನೆಗೆ ಡಿಕೆ ಶಿವಕುಮಾರ್ ಉತ್ತರಿಸಿದರು.

**ಲೋಕಸಭೆ ಟಿಕೆಟ್ ಪ್ರಭಾ ಮಲ್ಲಿಕಾರ್ಜುನ್‌ಗೆ ಒತ್ತಾಯ ಮಾಡಿದ್ದು ನಾವೇ:** ನಾವೇ ಬಲವಂತ ಮಾಡಿ ಪ್ರಭಾ ಮಲ್ಲಿಕಾರ್ಜುನ ಅವರನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸಿದೆವು. ಅವರು ಕೇಳದಿದ್ದರೂ ನಾವೇ ಅವರಿಗೆ ಒತ್ತಡ ಹಾಕಿ ಚುನಾವಣೆಗೆ ನಿಲ್ಲುವಂತೆ ಮಾಡಿದ್ದೇವೆ. ಕಳೆದ ಐದಾರು ಬಾರಿಯಿಂದ ನಾವು ಅಲ್ಲಿ ಸೋಲುತ್ತಲೇ ಬಂದಿದ್ದೆವು. ಹೀಗಾಗಿ, ನೀವು ನಿಂತರೆ ಮಾತ್ರ ಗೆಲ್ಲಲು ಸಾಧ್ಯ ಎಂದು ನಾವೇ ಒತ್ತಾಯ ಮಾಡಿ ನಿಲ್ಲಿಸಿದೆವು. ಈಗ ಅವರು ಗೆದ್ದು ಸಂಸತ್ತಿನಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ'' ಎಂದರು.



**ಅಂದಿನ ಸತ್ಯ ಬಿಚ್ಚಿಟ್ಟ ಡಿಕೆಶಿ**

**ಮೊದಲಿನಿಂದಲೂ ಮೂರು ಜನ ಈಗಲೂ ಅಷ್ಟೇ:** ''ಯಾವ ಪಕ್ಷದಲ್ಲಿ ಕುಟುಂಬ ರಾಜಕಾರಣ ಇಲ್ಲ ಹೇಳಿ. ಎಲ್ಲಾ ಪಕ್ಷದಲ್ಲೂ ಇದ್ದೇ ಇದೆ. ದಾವಣಗೆರೆಯಲ್ಲಿ ಶಾಮನೂರು ಕುಟುಂಬದಿಂದ ಮೊದಲಿನಿಂದಲೂ ಮೂರು ಜನ ರಾಜಕಾರಣದಲ್ಲಿದ್ದರು. ಈಗಲೂ 3 ಜನ ರಾಜಕಾರಣದಲ್ಲಿದ್ದಾರೆ ಎಂದು ಡಿಸಿಎಂ ಉತ್ತರಿಸಿದರು.

**ಬಂಡಾಯ ಅಭ್ಯರ್ಥಿ ಜತೆ ಮಾತಾಡಿ ಸರಿ ಮಾಡಲಾಗುತ್ತೆ:** ಟಿಕೆಟ್ ಬೇಕು ಎಂದು ಎಲ್ಲಾರಿಗೂ ಆಸೆ ಇರುತ್ತದೆ. ಅದರಲ್ಲಿ ತಪ್ಪೇನು ಇಲ್ಲ. ದಾವಣಗೆರೆಯಲ್ಲಿ ಬಹಳಷ್ಟು ಜನ ನಾಮಪತ್ರ ಸಲ್ಲಿಸಿದ್ದು, ಅವರಲ್ಲಿ ಹೆಚ್ಚಿನವರು ನಮ್ಮವರೇ. ನಮ್ಮ ನಾಯಕರೆಲ್ಲರೂ ಅವರ ಜತೆ ಮಾತನಾಡುತ್ತಾರೆ. ಎಲ್ಲವೂ ಸರಿ ಹೋಗಲಿದೆ. ಸೋಮವಾರ ನಾನು ಹಾಗೂ ಸಿದ್ದರಾಮಯ್ಯನವರು ದಾವಣಗೆರೆ ಹಾಗೂ ಬಾಗಲಕೋಟೆ ಪ್ರವಾಸ ಮಾಡಿ ಬಂದಿದ್ದೇವೆ ಎಂದು ಹೇಳಿದರು.

### ದಾವಣಗೆರೆ ಉತ್ತಮ ನಗರ ಎಂದ ಡಿಕೆಶಿ

ದಾವಣಗೆರೆ ಜಿಲ್ಲೆ ಬೆಂಗಳೂರಿಗಿಂತ ಬಹಳ ಉತ್ತಮವಾಗಿ ಯೋಜಿತವಾಗಿ ರೂಪುಗೊಂಡಿರುವ ನಗರವಾಗಿದೆ. ಇದರ ಅಭಿವೃದ್ಧಿಗೆ ನೂರಾರು ಕೋಟಿ ರೂ. ಮೊತ್ತದ ಪ್ಯಾಕೇಜ್ ಗಳನ್ನು ನೀಡಲಾಗಿದೆ. ಈ ಭಾಗಕ್ಕೆ ಶಾಮನೂರು ಶಿವಶಂಕರಪ್ಪ ಅವರು ಕೊಟ್ಟಿರುವ ಕೊಡುಗೆ, ಶಿಕ್ಷಣ ಸಂಸ್ಥೆ ಆ ಮೂಲಕ ಈ ಜಿಲ್ಲೆ ಶಿಕ್ಷಣ ಕೇಂದ್ರವಾಗಿ ರೂಪುಗೊಂಡಿದೆ. ಈ ಜಿಲ್ಲೆಯ ಈ ಪ್ರಗತಿಗೆ ಕೊಡುಗೆ ನೀಡಿದ್ದು ಶಾಮನೂರು ಶಿವಶಂಕರಪ್ಪ ಅವರ ಕುಟುಂಬ ಹಾಗೂ ಅವರ ಸಂಸ್ಥೆ. ಇದೆಲ್ಲವನ್ನು ಜನ ಸ್ಮರಿಸುತ್ತಿದ್ದಾರೆ'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಸಮರ್ಥ್‌ಗೆ ಸೇವೆ ಮಾಡುವ ಆಶಯವಿದೆ:** ನಮ್ಮ ಸರ್ಕಾರದ ಜನಪರ ಕಾರ್ಯಕ್ರಮ, ಶಾಮನೂರು ಶಿವಶಂಕರಪ್ಪ ಅವರು ಈ ಭಾಗಕ್ಕೆ ನೀಡಿರುವ ಕೊಡುಗೆಯಿಂದ ಈ ಭಾಗದ ಜನರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ್ ಮಲ್ಲಿಕಾರ್ಜುನ ಅವರನ್ನು ಉಪಚುನಾವಣೆಯಲ್ಲಿ ಗೆಲ್ಲಿಸಲಿದ್ದಾರೆ. ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದ್ದರೂ ಗ್ರಾಮೀಣ ಭಾಗದ ಜನರ ಸೇವೆ ಮಾಡಲು ತಮ್ಮದೇ ಆದ ಆಸೆ, ಆಕಾಂಕ್ಷೆಯೊಂದಿಗೆ ಅವರು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಸಮರ್ಥ್ ಅವರು ಮತ್ತೆ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗುವುದನ್ನು ಶಾಮನೂರು ಶಿವಶಂಕರಪ್ಪನವರೇ ತಡೆದು ಇಲ್ಲೇ ಇದ್ದು ವೃತ್ತಿ ಮಾಡುವಂತೆ ಹೇಳಿದ್ದರು. ಕ್ಷೇತ್ರದ ಜನತೆ, ಎಲ್ಲಾ ವರ್ಗದ ಮುಖಂಡರು, ಪಕ್ಷದ ವರಿಷ್ಠರು ಎಲ್ಲರೂ ಚರ್ಚೆ ಮಾಡಿ ಈ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರು.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹14,291/Gram24ct ₹13,100/Gram22ct ಬೆಳ್ಳಿ: ₹235.00/Gram

## ಶ್ರೀ ಸಿದ್ಧಾರೂಢ ಜಯಂತೀ

• ಉದಯವಾಹಿನಿ ಬೆಂಗಳೂರು


ಉದಯವಾಹಿನಿ ಚಿತ್ರ

ಇದೇ ದಿನಾಂಕ 27.3.2026ರ ಶುಕ್ರವಾರ ಬೆಳಿಗ್ಗೆ 7.30 ರಿಂದ 9.30ರ ವರೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ರಾಮೋಹಳ್ಳಿಯ ಶ್ರೀಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳ 190ನೇ ಜಯಂತಿಯ ಅಂಗವಾಗಿ ಶ್ರೀಸಿದ್ಧಾರೂಢರಿಗೆ, ಸಾಯಿಬಾಬಾರವರಿಗೆ ವಿಶೇಷ ಪೂಜೆ ಭಜನೆ ಉಪನ್ಯಾಸ ಹಾಗೂ ದಾಸೋಹವನ್ನು ಏರ್ಪಡಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುಕೃಪೆಗೆ ಪಾತ್ರರಾಗಲು ಕೋರಿದೆ.

## ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಅವರ ನೇತೃತ್ವದಲ್ಲಿ ಮಾರ್ಚ್ 26, ಗುರುವಾರ ಸಂಜೆ 7-00ಕ್ಕೆ ದಾಸರ ಪದಗಳ ಗಾಯನ ಕು|| ನಿಧಿಶ್ರೀ ಮುರಳೀಧರ್ (ವಿದುಷಿ ಶ್ರೀಮತಿ ಸಂಧ್ಯಾ ಶ್ರೀನಾಥ್ ಇವರ ಶಿಷ್ಯೆ), ಕೀಬೋರ್ಡ್ ಶ್ರೀ ಬಿ.ಆರ್. ಪ್ರಕಾಶ್, ತಬಲಾ ಶ್ರೀ ಶ್ರೀನಿವಾಸ ಕಾಖಂಡಕಿ. ಸ್ಥಳ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು ಸರ್ವರಿಗೂ ಆತ್ಮೀಯ ಸುಸ್ವಾಗತ

## ಜನರಲ್ಲಿ ಸಂಪೂರ್ಣ ಆರೋಗ್ಯ ಶಿಕ್ಷಣ ನೀಡಬೇಕಿದೆ : ಡಾ. ನಿಸರ್ಗ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಕ್ಷಯರೋಗದ ಲಕ್ಷಣಗಳು, ಹರಡುವ ವಿಧಾನ, ಚಿಕಿತ್ಸೆ, ಮುಂಜಾಗ್ರತೆ ಕ್ರಮಗಳ ಕುರಿತ ಜನರಲ್ಲಿ ಸಂಪೂರ್ಣ ಆರೋಗ್ಯ ಶಿಕ್ಷಣವನ್ನು ನೀಡಬೇಕಿದೆ ಎಂದು ವೈದ್ಯಾಧಿಕಾರಿಗಳಾದ ಡಾ. ನಿಸರ್ಗ ತಿಳಿಸಿದರು. ಕ್ಷೇತ್ರದ ಹೂಡಿ ಸಮೀಪದ ಅಯ್ಯಪ್ಪ ನಗರದ ಕಾಟನ್ ವಾರ್ಡ್ ಯೂನಿಟ್‌ಗಾರ್ಮೆಂಟ್ಸ್, 3ರ ಸುಮಾರು 350ಕ್ಕೂ ಹೆಚ್ಚು ಕಾರ್ಮಿಕರಿಗೆ ವಿಶ್ವ ಕ್ಷಯರೋಗ ದಿನಾಚರಣೆಯ ಅಂಗವಾಗಿ ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆಯ ಸಹಯೋಗದಲ್ಲಿ ಅರಿವು ಮೂಡಿಸಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮತನಾಡಿದ ಅವರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ ಮತನಾಡಿ, 2030ಕ್ಕೆ ಭಾರತವನ್ನು ಟಿಬಿ ಮುಕ್ತವಾಗಿಸಲು ಇರುವ ಮುಖ್ಯ ತೊಡಕುಗಳು ಅಪೌಷ್ಟಿಕತೆ,ಬಡತನ, ಜನದಟ್ಟಣೆಯ ಜೀವನ ಪರಿಸ್ಥಿತಿಗಳಲ್ಲಿ ನಿಕಟ ಸಂಪರ್ಕ, ದುರ್ಬಲ ರೋಗನಿರೋಧಕ ಶಕ್ತಿ, ರೋಗದ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಸೇರಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀಶೈಲ ಕನ್ನಾಲ್, ಹೂಡಿ ನಮ್ಮ ಕ್ಲಿನಿಕ್ ವೈದ್ಯರಾದ ಡಾ.ಸುಭಾಷ್, ಕೆ.ಆರ್.ಪುರ ಆರೋಗ್ಯ ಕೇಂದ್ರದ ಟಬಿ ಎಚ್ ವಿ ಪವನ್, ಕೃಷ್ಣರಾಜಪುರ ಕ್ಷಯ ರೋಗ ಘಟಕದ ಎಸ್.ಟಿ ಎಲ್.ಎಸ್ ಮುತ್ತುರಾಮ್, ಶ್ರೀನಿವಾಸ್ ಸೇರಿದಂತೆ ಕಾಟನ್ ವರ್ಡ್ ಯೂನಿಟ್ -3 ಗಾರ್ಮೆಂಟ್ಸ್‌ನ ಕಾರ್ಮಿಕರು ಹಾಜರಿದ್ದರು.

## ರಾಜ್ಯದ ಹಲವೆಡೆ ಭಾರೀ ಮಳೆ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಲವೆಡೆ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಕಲಬುರಗಿ, ಯಾದಗಿರಿ, ರಾಯಚೂರು, ದಕ್ಷಿಣ ಕನ್ನಡ,ಉಡುಪಿ, ಚಿಕ್ಕಮಗಳೂರು ಭಾಗದಲ್ಲಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯಿದೆ. ಭಾರೀ ಮಳೆ ಹಿನ್ನೆಲೆ ಕಲಬುರಗಿ, ಯಾದಗಿರಿ, ರಾಯಚೂರು, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

### ಸಮಸ್ಯೆ ಬಗೆಹರಿಸದಿದ್ದರೆ ರಾಜ್ಯದಲ್ಲಿ ಕಲ್ಲು ಕ್ವಾರಿ ಮತ್ತು ಜಲ್ಲಿ ಕ್ರಷರ್, ಎಂ. ಸ್ಯಾಂಡ್ ಬಂದ್ ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ಎಚ್ಚರಿಕೆ

# ಒಟಿಎಸ್ ಯೋಜನೆ ವಿರುದ್ಧ ಕಾನೂನು ಸಂಘರ್ಷ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಅವೈಜ್ಞಾನಿಕವಾಗಿ ಜಾರಿಗೊಳಿಸಿರುವ ಒನ್ ಟೈಮ್ ಸೆಟಲ್ಮೆಂಟ್ ಒಟಿಎಸ್ ಯೋಜನೆಯನ್ನು ಪರಿಷ್ಕರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಕಲ್ಲು ಕ್ವಾರಿ ಮತ್ತು ಜಲ್ಲಿ ಕ್ರಷರ್ ಬಂದ್ ಮಾಡಿ ಉಗ್ರ ಹೋರಾಟ ನಡೆಸುವುದಾಗಿ ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಮನೆ, ಸಾರ್ವಜನಿಕ ವಲಯದ ನಿರ್ಮಾಣ ಕಾಮಗಾರಿಗೆ ಅಗತ್ಯವಾಗಿರುವ ಜಲ್ಲಿ, ಎಂ.ಸ್ಯಾಂಡ್ ಪೂರೈಕೆಯನ್ನು ಬಂದ್ ಮಾಡುತ್ತೇವೆ. ಅಲ್ಲದೇ ಹೊರ ರಾಜ್ಯಗಳಿಗೆ ಕಲ್ಲುಗಣಿ ಸಂಪನ್ಮೂಲ ರಾಜ್ಯಕ್ಕೆ ಬರದಂತೆ ತಡೆಯುವ ಜೊತೆಗೆ ಒಟಿಎಸ್ ಯೋಜನೆ ವಿರುದ್ಧ ಕಾನೂನು ಸಂಘರ್ಷ ಮಾಡುವುದಾಗಿ ಘೋಷಿಸಿದೆ.

ನಗರದ ಮೌರ್ಯ ಹೋಟೆಲ್‌ನಲ್ಲಿಂದು ಸಂಘದ ಎಲ್ಲಾ ಜಿಲ್ಲೆಗಳ ಪದಾಧಿಕಾರಿಗಳ ಸಭೆಯಲ್ಲಿ ಸರ್ಕಾರದ ವೈಜ್ಞಾನಿಕ ನೀತಿಗಳ ವಿರುದ್ಧ ಪದಾಧಿಕಾರಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಘೋಷಿಸಿರುವ ಒನ್ ಟೈಮ್ ಸೆಟಲ್ಮೆಂಟ್ ಒಟಿಎಸ್ ಯೋಜನೆ ಸರ್ಕಾರದ ಗ್ಯಾರೆಂಟಿ ಯೋಜನೆಗಳಿಗೆ ಸಂಪನ್ಮೂಲ ಕ್ರೋಢೀಕರಿಸುವ ಗುರಿ ಹೊಂದಿದೆ. ಆದರೆ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿರುವವರ ಮೇಲೆ ಅಧಿಕ ಹೊರ ಹೇರಿ ಸರ್ಕಾರದ ಬೊಕ್ಕಸ ತುಂಬಿಸಿಕೊಳ್ಳುವ ಹುನ್ನಾರಕ್ಕೆ ಧಿಕ್ಕಾರ ಎಂದರು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಡಿ.ಸಿದ್ದರಾಜು, ತಲಾತಲಾಂತರಗಳಿಂದ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿರುವವರನ್ನು ಒಕ್ಕಲೆಬ್ಬಿಸಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸರ್ಕಾರ ರತ್ನಗಂಬಳಿ ಹಾಸುವ ಹುನ್ನಾರದಲ್ಲಿ ತೊಡಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅರಾಜಕತೆ ಸೃಷ್ಟಿಯಾಗಿದ್ದು, ಹದಿನೈದು ದಿನಕ್ಕೊಬ್ಬರು ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಬದಲಾಗುತ್ತಿದ್ದಾರೆ. ಪ್ರತಿಯೊಂದು ಜಿಲ್ಲೆಗಳ ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಧಿಕಾರಿಗಳ ಅವೈಜ್ಞಾನಿಕ ತೀರ್ಮಾನಗಳಿಂದ ಕಲ್ಲುಗಣಿಗಾರಿಕೆಯಲ್ಲಿ ತೊಡಗಿರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಿಂಬಾಕಿ ರಾಜಧನವನ್ನು ವಸೂಲಿ ಮಾಡುವ ಒಟಿಎಸ್ ಯೋಜನೆಗೆ ನಮ್ಮ ಸಹಮತವಿಲ್ಲ. ಪ್ರತಿ ಎಕರೆಗೆ ಎರಡು ಲಕ್ಷ ರೂ ಹಣ ಪಾವತಿಸಲು ಸಿದ್ಧವಿದ್ದು, ಇದಕ್ಕಿಂತ ಹೆಚ್ಚು ಮೊತ್ತ ನಿಗದಿ ಮಾಡಿದರೆ ಪಾವತಿ ಮಾಡಲು ಆಗುವುದಿಲ್ಲ ಎಂದು ಹೇಳಿದರು.

ಅಧ್ಯಕ್ಷರು ಡಿ.ಸಿದ್ದರಾಜು ಸಂಘದ ಉಪಾಧ್ಯಕ್ಷರುಗಳಾದ , ವಾಗೀಶ್, ಅಬ್ದುಲ್ ಮಜಿದ್, ಮನೋಜೆ ಶೆಟ್ಟರ್, ಪಂಚಮಿ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಸಿ.ಎಸ್. ಭಾಸ್ಕರ್, ಉಪ ಕಾರ್ಯದರ್ಶಿ ಡಿ.ಆರ್.ಮಹೇಶ್, ಸಂಘಟನಾ ಕಾರ್ಯದರ್ಶಿ ಕೆ ವಿ ಚೌಧರಿ, ಕೋಶಾಧಿಕಾರಿ ಉಮಾಶಂಕರಯ್ಯ, ಎಲ್ಲಾ 26 ಜಿಲ್ಲಾಯ ಅಧ್ಯಕ್ಷರು ನಿರ್ದೇಶಕರುಗಳು ಸೇರಿದಂತೆ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

### ರಾಜಧನ ವಸೂಲಿ ಮಾಡಲು ಹೊರಟಿರುವುದು ಸರಿಯಲ್ಲ


ಸರ್ಕಾರಕ್ಕೆ ಹಣ ಸಂದಾಯವಾಗಿರುವುದರಿಂದ ಮತ್ತೆ ಗಣಿಗುತ್ತಿಗೆದಾರರಿಂದ ರಾಜಧನ ವಸೂಲಿ ಮಾಡಲು ಹೊರಟಿರುವುದು ಸರಿಯಲ್ಲ. ಕಾಮಗಾರಿ ನಿರ್ವಹಣಾ ಇಲಾಖೆಗಳಲ್ಲಿ ರಾಜಧನವನ್ನು ಇಂದಿಗೂ ಪಾವತಿಸಿಕೊಳ್ಳಲಾಗುತ್ತಿದೆ. ಸರ್ಕಾರಕ್ಕೆ ಎಲ್ಲಾ ರೀತಿಯ ರಾಜಧನ ಈಗಾಗಲೇ ಸಂದಾಯವಾಗಿದೆ. ಆದ್ದರಿಂದ ಮತ್ತೆ ಗಣಿಗುತ್ತಿಗೆದಾರರಿಂದ ವಸೂಲಿ ಮಾಡಬಾರದು. ಕೆ.ಎಂ. ಎಂ.ಸಿ.ಆರ್-1994 ನಿಯಮಗಳಿಗೆ ಮಾಡಿರುವ ತಿದ್ದುಪಡಿ ಅಸಮರ್ಪಕವಾಗಿದ್ದು, ಇದರಿಂದ ಕಾನೂನುಬದ್ಧವಾಗಿ ಗಣಿಗಾರಿಕೆ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ನಿಯಮಗಳ ಸಮಗ್ರ ತಿದ್ದುಪಡಿಯ ಅಗತ್ಯವಿದೆ. ಯಾವ ಪ್ರಮಾಣದಲ್ಲಿ ಕಲ್ಲು ಗಣಿ ಸಂಪತ್ತು ತೆಗೆಯಲಾಗಿದೆ ಎಂಬ ಕುರಿತು ದೂರಸಂವೇದಿ ತಂತ್ರಜ್ಞಾನದಡಿ ಸಮೀಕ್ಷೆ ಮಾಡುವುದು ಸಹ ಕಾನೂನು ಬಾಹಿರ ಕ್ರಮ ಎಂದು ಡಿ.ಸಿದ್ದರಾಜು ಹೇಳಿದರು.

> ಸರ್ಕಾರ ಕಲ್ಲುಗಣಿಗಾರಿಕೆ ಗುತ್ತಿಗೆದಾರರ ಜೊತೆ ಚರ್ಚಿಸದೇ ಏಕಪಕ್ಷೀಯವಾಗಿ ಎಟಿಎಸ್ ಯೋಜನೆಯನ್ನು ಕಳೆದ ತಿಂಗಳ 26 ರಂದು ಜಾರಿಗೊಳಿಸಿದ್ದು, ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಸರ್ಕಾರಿ ಕಾಮಗಾರಿ ಗುತ್ತಿಗೆದಾರರಿಂದಲೂ ರಾಜಧನ ಸಂಗ್ರಹಿಸುತ್ತಿದ್ದು, ಎರಡು ಕಡೆ ಸಂಗ್ರಹಿಸುವುದು ಕಾನೂನು ಬಾಹಿರ ಕ್ರಮವಾಗಿದೆ. ಈ ವರೆಗೆ ಸರ್ಕಾರ ಕಲ್ಲುಗಣಿಗಾರಿಕೆ ವಲಯದಿಂದ ಸಂದಾಯವಾಗಿರುವ ರಾಜಧನ ಕುರಿತು ಶ್ವೇತಪತ್ರ ಹೊರಡಿಸಬೇಕು.
>
> - ಸಂಜೀವ್ ವಿ. ಹಟ್ಟಿಹೊಳಿ
> ಗೌರವಾಧ್ಯಕ್ಷ

## ಕುರ್ಚಿ ಉಳಿಸಿಕೊಳ್ಳಲು ನೆರೆ ರಾಜ್ಯಕ್ಕೆ 10 ಕೋಟಿ ನೆರವು ನೀಡಿದ ನಿರ್ಲಜ್ಜ, ಭಂಡತನದ ಸಿಎಂ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಣಕಾಸು ಪರಿಸ್ಥಿತಿ ಇಷ್ಟು ಚಿಂತಾಜನಕವಾಗಿರುವಾಗ ಹೈಕಮಾಂಡ್ ನಾಯಕರನ್ನು ಮೆಚ್ಚಿಸಿ ಕುರ್ಚಿ ಉಳಿಸಿಕೊಳ್ಳಲು ನೆರೆ ರಾಜ್ಯಕ್ಕೆ 10 ಕೋಟಿ ಹೆಚ್ಚುವರಿ ನೆರವು ನೀಡಿರುವ ಸಿಎಂ ಸಿದ್ದರಾಮಯ್ಯ ಅವರ ನಿರ್ಲಜ್ಜತೆ, ಭಂಡತನಕ್ಕೆ ಅವರೇ ಸಾಟಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಸರ್ಕಾರದ ವಿರುದ್ಧ ಪೋಸ್ಟ್ ಮಾಡಿರುವ ಅವರು, ಸಂಸದೆ ಪ್ರಿಯಾಂಕಾ ಗಾಂಧಿ ಪ್ರತಿನಿಧಿಸುವ ಕೇರಳ ರಾಜ್ಯದ ವಯನಾಡು ಲೋಕಸಭಾ ಕ್ಷೇತ್ರಕ್ಕೆ 10 ಕೋಟಿ ರೂ. ಹೆಚ್ಚುವರಿ ವಿಶೇಷ ಅನುದಾನ ನೀಡಿರುವ ಕೇರಳ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳು ಎಂದು ವ್ಯಂಗ್ಯವಾಡಿದ್ದಾರೆ. ಕೇರಳ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತಹ ಹದಯ ವೈಶಾಲ್ಯವಿರುವ, ಸಂವೇದನಾಶೀಲ ಮುಖ್ಯಮಂತ್ರಿ ಕರ್ನಾಟಕದಲ್ಲೂ ಇದ್ದಿದ್ದರೆ, ಎಲ್ಲಾ ಕ್ಷೇತ್ರಗಳಿಗೂ ಭರಪೂರ ಅನುದಾನ ಸಿಗುತಿತ್ತು. ಆದರೆ ಕನ್ನಡಿಗರು ನತದೃಷ್ಟರು. ಕೇರಳದವರಷ್ಟು ಅದೃಷ್ಟವಂತರಲ್ಲ ಬಿಡಿ ಎಂದು ಕುಹಕವಾಡಿದ್ದಾರೆ. 2025-26ನೇ ಹಣಕಾಸು ವರ್ಷದಲ್ಲಿ ಬಜೆಟ್ ಹೊರತಾಗಿ ವೆಚ್ಚ ಮಾಡಿರುವ, ಮಾಡಲಾಗುವ 14,767 ಕೋಟಿ ರೂ. ಮೊತ್ತದ 3ನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜಿನಲ್ಲಿ ವಯನಾಡಿನ ಮುಪ್ಪಾಡಿಯಲ್ಲಿ ಭೂಕುಸಿತದಿಂದ ಹಾನಿಗೊಳಗಾಗಿರುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ರಾಜ್ಯ ಕಾಂಗ್ರೆಸ್ ಮತ್ತೊಮ್ಮೆ 10 ಕೋಟಿ ರೂ. ಹೆಚ್ಚುವರಿ ಅನುದಾನ ಒದಗಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ಕಡೆ ನಮ್ಮದೇ ರಾಜ್ಯದಲ್ಲಿ ಕಸ ವಿಲೇವಾರಿ ಮಾಡುವ ಸಂಸ್ಥೆಗಳಿಗೆ, ಸರ್ಕಾರಿ ನೌಕರರ ಸಂಬಳಕ್ಕೆ, ಗುತ್ತಿದೆಗಾರರ ಬಾಕಿ ಪಾವತಿ ಮಾಡಲು ಹಣವಿಲ್ಲ. ಸರ್ಕಾರಿ ಶಾಲೆಗಳ ದುರಸ್ತಿಗೆ, ಸರಿಯಾದ ಸಮಯಕ್ಕೆ ಮಕ್ಕಳ ಪಠ್ಯಪುಸ್ತಕ, ಯುನಿಫಾರ್ಮ್, ಶೂ, ನೀಡಲು ದುಡ್ಡಿಲ್ಲ. ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ, ಸ್ಕ್ಯಾನಿಂಗ್ ಸೇವೆ ಒದಗಿಸುವ ಕಂಪನಿಗಳ ಬಿಲ್ ಪಾವತಿಗೆ ಹಣವಿಲ್ಲ. ಶಾಸಕರಿಗೆ ಅನುದಾನವಿಲ್ಲ ಎಂದು ಅಶೋಕ್ ಆರೋಪಿಸಿದ್ದಾರೆ.



## ಜಿಬಿಎ ಪಂಚ ಪಾಲಿಕೆಗಳ ಬಜೆಟ್ ಮಂಡನೆ

• ಉದಯವಾಹಿನಿ, ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳ ಬಜೆಟ್ ಮಾ.26 ಹಾಗೂ 27 ರಂದು ಮಂಡನೆಯಾಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾದ ನಂತರದ ಮೊದಲ ಬಜೆಟ್ ಮಂಡನೆಗೆ ಮುಹೂರ್ತ ನಿಗದಿಯಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪ್ರಕಟಿಸಿದ್ದಾರೆ. ಇದೇ ಮಾರ್ಚ್ 26 ಗುರುವಾರ, ಮಾರ್ಚ್ 27 ಶುಕ್ರವಾರ ಎರಡು ದಿನಗಳ ಕಾಲ ಬಜೆಟ್ ಮಂಡನೆ ನಡೆಯಲಿದೆ.ಮೊದಲ ದಿನವಾದ ಗುರುವಾರ (ಮಾ.26) ಎರಡು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದ್ದು, ಎರಡನೇ ದಿನವಾದ ಶುಕ್ರವಾರ (ಮಾ.27) ಉಳಿದ ಮೂರು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದೆ. ಪ್ರತಿ ನಗರ ಪಾಲಿಕೆಯೂ ತಮ್ಮ ತಮ್ಮ ವಲಯ ಮಟ್ಟದಲ್ಲಿ ಬಜೆಟ್ ಮಂಡನೆಗೆ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಈಗಾಗಲೇ ಆಡಳಿತಾಧಿಕಾರಿಗಳ ಅನುಮೋದನೆ ಕೂಡ ದೊರೆತಿದೆ.ಆಯಾ ವಲಯದ ಹಣಕಾಸು ವಿಭಾಗದ ಮುಖ್ಯಸ್ಥರು ಬಜೆಟ್ ಮಂಡಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಆನ್‌ಲೈನ್‌ನಲ್ಲೇ ಲಭ್ಯವಿದೆ ಐಪಿಎಲ್ ಟಿಕೆಟ್ ಕ್ರೀಡಾಂಗಣ ಸುತ್ತ ಅಲೆಯಬೇಡಿ

• ಉದಯವಾಹಿನಿ, ಬೆಂಗಳೂರು

ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾ.28ರಂದು ಆರ್‌ಸಿಬಿ-ಸನ್‌ರೈಸರ್ಸ್ ನಡುವೆ ನಡೆಯಲಿರುವ ಐಪಿಎಲ್ ಪಂದ್ಯದ ಟಿಕೆಟ್‌ಗಳನ್ನು ಆನ್‌ಲೈನ್ ಮೂಲಕವೇ ಖರೀದಿಸಬೇಕೆಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್‌ಸಿಂಗ್ ಸೂಚಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಪಂದ್ಯ ವೀಕ್ಷಿಸಲು ಆನ್‌ಲೈನ್‌ನಲ್ಲಿ ಟಿಕೆಟ್ ಪಡೆದವರು ಪಂದ್ಯ ಪ್ರಾರಂಭವಾಗುವ ಮುನ್ನ 4 ಗಂಟೆ ಮುಂಚಿತವಾಗಿ ಕ್ರೀಡಾಂಗಣಕ್ಕೆ ಬರಬೇಕು. ಟಿಕೆಟ್ ಪಡೆದವರಿಗೆ ಮೆಟ್ರೊ ಪ್ರಯಾಣ ಉಚಿತವಾಗಿರುತ್ತದೆ ಎಂದು ಹೇಳಿದರು. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆಗಮಿಸುವವರಿಗೆ ಕಬ್ಬನ್‌ಪಾರ್ಕ್, ಎಂಜಿ ರಸ್ತೆ ಮೆಟ್ರೊ ನಿಲ್ದಾಣಗಳು ಸಮೀಪ ಆಗಿರುತ್ತವೆ.



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಟಿಕೆಟ್‌ನಲ್ಲೇ ಪಾರ್ಕಿಂಗ್ ವ್ಯವಸ್ಥೆಯ ಜಾಗವನ್ನು ಸಹ ಸೂಚಿಸಲಾಗಿದ್ದು, ಸಂಸ್ಥೆ ಸೂಚಿಸಿರುವ ನಿಗದಿತ ಜಾಗದಲ್ಲೇ ವಾಹನ ನಿಲುಗಡೆ ಮಾಡಬೇಕು ಹಾಗೂ ನಿಗದಿತ ಗೇಟ್ ಮೂಲಕವೇ ಕ್ರೀಡಾಂಗಣದೊಳಗೆ ಪ್ರೇಕ್ಷಕರು ಪ್ರವೇಶಿಸಬೇಕೆಂದು ಅವರು ಹೇಳಿದರು.

ಕ್ರೀಡಾಂಗಣದ ಬಳಿ ಟಿಕೆಟ್ ಮಾರಾಟ ಮಾಡುವುದಿಲ್ಲ. ವಿನಾಃಕಾರಣ ಕ್ರೀಡಾಂಗಣದ ಬಳಿ ಬಂದು ಅಲೆದಾಡಬೇಡಿ ಎಂದು ಸಾರ್ವಜನಿಕರಲ್ಲಿ ಆಯುಕ್ತರು ಮನವಿ ಮಾಡಿದ್ದಾರೆ.

ನಮ್ಮ ಪೊಲೀಸರು ಕ್ರೀಡಾಂಗಣದ ಬಳಿ ಬಂದೋಬಸ್ತ್‌ನಲ್ಲಿರುತ್ತಾರೆ ಟಿಕೆಟ್ ಇಲ್ಲದಿದ್ದರು ಕ್ರೀಡಾಂಗಣದ ಸುತ್ತ ಸುತ್ತಾಡುವುದು ಕಂಡು ಬಂದರೆ ಅಂಥವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ ಎಂದು ಎಚ್ಚರಿಸಿದ್ದಾರೆ.

ಕ್ರಿಕೆಟ್ ವೀಕ್ಷಣೆಗೆ ಬರುವವರು ತಮ್ಮ ವಾಹನವನ್ನು ಬಳಸದೇ ಮೆಟ್ರೋ, ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಇದೇ ವೇಳೆ ಅವರು ಮನವಿ ಮಾಡಿದ್ದಾರೆ. ಕ್ರೀಡಾಂಗಣದ ಸುತ್ತ ಹೆಚ್ಚಿನ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಕೆಎಸ್‌ಸಿಎ ಸೂಚಿರುವ ಅಂಶಗಳನ್ವಯ ನಾವು ಬಂದೋಬಸ್ತ್ ಮಾಡಿಕೊಂಡಿದ್ದೇವೆ ಎಂದು ಆಯುಕ್ತರು ವಿವರಿಸಿದರು.

### ಆರ್‌ಸಿಬಿಯಿಂದ ದಯಾಳ್ ಔಟ್


ಅತ್ಯಾಚಾರ ಪ್ರಕರಣ ಎದುರಿಸುತ್ತಿರುವ ಆರ್‌ಸಿಬಿ ವೇಗಿ ಯಶ್ ದಯಾಳ್ ಅವರು 19ನೇ ಆವೃತ್ತಿಯ ಐಪಿಎಲ್ ಟೂರ್ನಿಯಿಂದ ಸಂಪೂರ್ಣವಾಗಿ ಹೊರಗುಳಿಯಲಿದ್ದಾರೆ ಎಂದು ತಂಡದ ನಿರ್ದೇಶಕ ಮೊ ಬೊಬಾಟ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

## ಎಚ್ ಡಿ ದೇವೇಗೌಡರಿಗೆ ಕಳೆದ ವರ್ಷ ವೋಲ್ವೋ-XC90 ವಾಹನ ಖರೀದಿಸಿ ಕೊಟ್ಟಿದ್ದ ರಾಜ್ಯ ಸರ್ಕಾರ ; ಪೂರಕ ಅಂದಾಜಿನಲ್ಲಿ ಉಲ್ಲೇಖ

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಅವರಿಗೆ ಸಂಚರಿಸಲು ರಾಜ್ಯ ಸರ್ಕಾರ ಕಳೆದ ವರ್ಷ ವೋಲ್ವೋ -XC90 ವಾಹನವನ್ನು ಖರೀದಿಸಿ ಕೊಟ್ಟಿದೆ. ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿನಲ್ಲಿ ಇದರ ಬಗ್ಗೆ ಮಾಹಿತಿ ನೀಡಲಾಗಿದೆ. ಮಾಜಿ ಪಿಎಂ ಎಚ್ ಡಿ ದೇವೇಗೌಡರಿಗೆ ಹೊಸ ವಾಹನ ಖರೀದಿಗೆ 1.25 ಕೋಟಿ ರೂಪಾಯಿಯನ್ನು ಸರ್ಕಾರ ನೀಡಿದೆ. ದೇವೇಗೌಡ ಕುಟುಂಬ ಹಾಗೂ ಕಾಂಗ್ರೆಸ್ ನಾಯಕರ ನಡುವಿನ ರಾಜಕೀಯ ಸಂಘರ್ಷದ ನಡುವೆಯೂ ಸರ್ಕಾರದಿಂದ ಕಾರು ಖರೀದಿಸಿ ನೀಡಿರುವ ಬಗ್ಗೆ ಪೂರಕ ಅಂದಾಜಿನಲ್ಲಿ ಉಲ್ಲೇಖವಾಗಿರುವುದು ಗಮನ ಸೆಳೆಯುವಂತಿದೆ.

2025-26ನೇ ಸಾಲಿನ ಬಜೆಟ್‌ನ ಪೂರಕ ಅಂದಾಜುಗಳ ಮಂಡನೆ ಮಾಡಲಾಗಿದೆ. ಸಚಿವ ಕೃಷ್ಣಬೈರೇಗೌಡರಿಂದ ಕಳೆದ ಬಜೆಟ್‌ನ ಅಂತಿಮ ಪೂರಕ ಅಂದಾಜುಗಳ ಮಂಡನೆ ಮಾಡಿದ್ದಾರೆ. 14,767 ಕೋಟಿ ರೂ ಮೊತ್ತದ ಪೂರಕ ಅಂದಾಜುಗಳ ಮಂಡನೆಯನ್ನು ಸದನದಲ್ಲಿ ಮಾಡಿದ್ದಾರೆ.



### ಇತರ ಹೈಲೈಟ್ಸ್ ಏನೇನು?

- ಉಪಚುನಾವಣೆಗೆಗಳಿಗೆ 5.55 ಕೋಟಿ ರೂ ಹೆಚ್ಚುವರಿ ಅನುದಾನ
- 2019, 2021 ರ ಉಪಚುನಾವಣೆಗಳ ಬಾಕಿ ಬಿಲ್ಲು ಹಾಗೂ ಬಾಗಲಕೋಟೆ, ದಾವಣಗೆರೆ ದಕ್ಷಿಣ ಉಪಚುನಾವಣೆಗಳಿಗೆ ಹೆಚ್ಚುವರಿ ವೆಚ್ಚ
- ರಾಜ್ಯಪಾಲರು, ಸಿಎಂ ಅವರ ಹೆಲಿಕಾಪ್ಟರ್, ಏರ್‌ಕ್ರಾಫ್ಟ್ ವೆಚ್ಚ 15 ಕೋಟಿ.
- ರಸ್ತೆ ಸಾರಿಗೆ ಸಂಸ್ಥೆಯ ಬಾಕಿ ಮೋಟಾರು ವಾಹನ ತೆರಿಗೆ ಪಾವತಿಗೆ 676 ಕೋಟಿ.
- ಹಾವೇರಿ, ಹಾಸನ, ವಿಜನನಗರ ಜಿಲ್ಲೆಗಳಲ್ಲಿ ನಡೆದ ಗ್ಯಾರಂಟಿ ಫಲಾನುಭವಿಗಳ ಸಮಾವೇಶಗಳಿಗೆ 16.30 ಕೋಟಿ ವೆಚ್ಚ.
- ವಯನಾಡು ಭೂಕುಸಿತ ಸಂತ್ರಸ್ತರ ಪುನರ್ವಸತಿಗೆ 10 ಕೋಟಿ ರೂ ವೆಚ್ಚ.
- ರಾಜ್ಯದ ದೇವಸ್ಥಾನ, ಮಠ, ಟ್ರಸ್ಟ್‌ಗಳ ಅಭಿವೃದ್ಧಿಗೆ 15 ಕೋಟಿ.
- ದಾವೋಸ್ ಶೃಂಗಸಭೆಗೆ ರಾಜ್ಯದ ನಿಯೋಗದ ಪ್ರವಾಸ ವೆಚ್ಚ 10 ಕೋಟಿ.
- ಬೆಂಗಳೂರಿನಲ್ಲಿ ನಡೆದ ಹೂಡಿಕೆದಾರರ ಸಮಾವೇಶಕ್ಕೆ 25 ಕೋಟಿ ಹೆಚ್ಚುವರಿ ವೆಚ್ಚ
- ಬೆಂಗಳೂರಿನಲ್ಲಿ ನಡೆದ ಅಂತರಾಷ್ಟ್ರೀಯ ಕಾಫಿ ಉತ್ಸವಕ್ಕೆ 2 ಕೋಟಿ ವೆಚ್ಚ.
- ಕೈಗಾರಿಕಾ ಘಟಕಗಳಿಗೆ ಸಹಾಯಧನ 335 ಕೋಟಿ ರೂ.
- ರಾಜ್ಯದ ವಿವಿಧ ನೀರಾವರಿ ನಿಗಮಗಳ ಬಾಕಿ ಬಿಲ್ಲುಗಳ ಪಾವತಿಗೆ 1025 ಕೋಟಿ ರೂ.
- ಗೃಹಜ್ಯೋತಿ ಗ್ಯಾರಂಟಿ ಬಾಕಿ ಪಾವತಿಗೆ 159 ಕೋಟಿ ರೂ.
- ಯುವನಿಧಿ ಗ್ಯಾರಂಟಿಗೆ 25 ಕೋಟಿ ರೂ.
- ಬೆಳಗಾವಿ ಅಧಿವೇಶನಕ್ಕೆ 5.1 ಕೋಟಿ ರೂ ಹೆಚ್ಚುವರಿ ವೆಚ್ಚ.

## ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲ್ಲಿಸಿದರೆ 2000 ರೂ. ದಂಡ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸಾರ್ವಜನಿಕರೇ ಇರಲಿ ಎಚ್ಚರ ಅಪ್ಪಿ ತಪ್ಪಿ ನಿಮ್ಮ ವಾಹನಗಳನ್ನು ನೋ ಪಾರ್ಕಿಂಗ್ ಏರಿಯಾದಲ್ಲಿ ನಿಲ್ಲಿಸಿದರೆ ಭಾರಿ ದಂಡ ತೆರಬೇಕಾಗುತ್ತದೆ. ಯಾಕೇ ಅಂತೀರಾ? ನಗರದಲ್ಲಿ ಇಂದಿನಿಂದ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ಬರುತ್ತಿದೆ. ಜಿಬಿಎ ಹಾಗೂ ಸಂಚಾರಿ ಪೊಲೀಸರು ಜಂಟಿಯಾಗಿ ನಗರದ ರಸ್ತೆಗಳಲ್ಲಿ ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡಿ ದಂಡ ವಿಧಿಸಲಿದ್ದಾರೆ.

ಇದರ ಜೊತೆಗೆ ವಾಹನ ಟೋಯಿಂಗ್ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಆಗುತ್ತಿದ್ದ ವಾಗ್ವಾದ, ಗಲಾಟೆಗಳಿಗೆ ತಡೆಯೊಡ್ಡಲು ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಇನ್ನು ಮುಂದೆ ಟೋಯಿಂಗ್ ವಾಹನಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಟೋಯಿಂಗ್ ಪ್ರಕ್ರಿಯೆ ವೇಳೆ ವಾಹನವನ್ನು ಹೇಗೆ ತೆಗೆದುಕೊಂಡು ಹೋಗಲಾಗಿದೆ, ಯಾವುದೇ ಹಾನಿ ಉಂಟಾಗಿದೆಯೇ, ಅಥವಾ ಗಲಾಟೆ ನಡೆದಿದೆಯೇ ಎಂಬ ಎಲ್ಲಾ ವಿಚಾರಗಳು ಇದೀಗ ಕ್ಯಾಮೆರಾದಲ್ಲಿ ದಾಖಲಾಗಲಿದೆ.

ಈ ಮೂಲಕ ಟೋಯಿಂಗ್ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ.ಈ ಹಿಂದೆ ಟೋಯಿಂಗ್ ವೇಳೆ ಸಾರ್ವಜನಿಕರಿಂದ ಪೊಲೀಸರ ವಿರುದ್ಧ ಹಲವು ಆರೋಪಗಳು ಕೇಳಿಬಂದಿದ್ದವು. ವಾಹನ ಹಾನಿ, ಅನಾವಶ್ಯಕ ದಂಡ ವಸೂಲಿ, ಹಾಗೂ ಗಲಾಟೆ ಪ್ರಕರಣಗಳು ಹೆಚ್ಚಾಗುತ್ತಿದ್ದ ಹಿನ್ನೆಲೆ ಈ ಕ್ರಮಕ್ಕೆ ಮುಂದಾಗಲಾಗಿದೆ.

ನಗರದಲ್ಲಿ ಮತ್ತೆ ಟೋಯಿಂಗ್ ಕಾರ್ಯಾಚರಣೆ ಆರಂಭಿಸಲು ಸಿದ್ಧತೆ ನಡೆಯುತ್ತಿದ್ದು, ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕ್ರಮ ಜಾರಿಗೆ ಬರಲಿದೆ. ಪ್ರತಿ ಜಿಬಿಎ ಕಮಿಷನರೇಟ್‌ಗೆ 2 ಟೋಯಿಂಗ್ ವಾಹನಗಳನ್ನು ಒದಗಿಸಲಾಗಿದೆ. ನೀವು ಎಲ್ಲೆಂದರಲ್ಲಿ ವಾಹನ ಪಾರ್ಕ್ ಮಾಡಿದರೆ ಟೋಯಿಂಗ್ ಶುಲ್ಕವಾಗಿ 1,000 ರೂ., ನೋ ಪಾರ್ಕಿಂಗ್ ಉಲ್ಲಂಘನೆಗೆ 1,000 ಸೇರಿದಂತೆ ಒಟ್ಟು ಸುಮಾರು 2,000 ರೂ. ದಂಡ ಪಾವತಿಸಬೇಕಾಗುತ್ತದೆ. ಇಂದಿನಿಂದಲೇ ಟೋಯಿಂಗ್ ವ್ಯವಸ್ಥೆ ಜಾರಿಗೆ ಬರಲಿದ್ದು, ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರು ಎಚ್ಚರಿಕೆಯಿಂದ ಇರಬೇಕಾಗಿದೆ.

## 5 ಮಂದಿ ಪೆಡ್ಲರ್‌ಗಳ ಬಂಧನ, 11 ಕೋಟಿ ರೂ. ಡ್ರಗ್ಸ್‌ವಶ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ನಗರ ಪೊಲೀಸರು ವಿವಿಧ ಕಡೆಗಳಲ್ಲಿ ದಾಳಿ ಮಾಡಿ ಹೊರರಾಜ್ಯದ ಆರೋಪಿ ಸೇರಿದಂತೆ ಐದು ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ ಒಟ್ಟು 11.4 ಕೋಟಿ ಮೌಲ್ಯದ ಗಾಂಜಾ, ಎಂಡಿಎಂಎ ಹಾಗೂ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರು ರಸ್ತೆಯ ನಾಯಂಡಹಳ್ಳಿ ಸಿಗ್ನಲ್ ಬಳಿ ಮಾದಕ ವಸ್ತು ಗಾಂಜಾ ಸಾಗಿಸುತ್ತಿರುವ

ಬಗ್ಗೆ ಸಿಸಿಬಿ ಪೊಲೀಸರಿಗೆ ದೊರೆತ ಮಾಹಿತಿ ಮೇರೆಗೆ ಸ್ಥಳದ ಮೇಲೆ ದಾಳಿ ಮಾಡಿ 3.32 ಕೋಟಿ ಮೌಲ್ಯದ ಮಾದಕ ವಸ್ತು ಗಾಂಜಾ ವಶಪಡಿಸಿಕೊಂಡಿದ್ದಾರೆ. ಉಪ್ಪಾರಪೇಟೆ ಠಾಣೆ ಪೊಲೀಸರು ಆರ್‌ಕೆ ಪುರಂನ ಲಾಡ್ಜ್‌ವೊಂದರ ಮೇಲೆ ದಾಳಿ ಮಾಡಿ 7.60 ಕೋಟಿ ಮೌಲ್ಯದ 3 ಕೆಜಿ 900 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಹಾಗೆಯೇ ಕಾಡುಗೋಡಿ ಠಾಣೆ ಪೊಲೀಸರು ಚನ್ನಸಂದ್ರ ಮುಖ್ಯರಸ್ತೆಯಲ್ಲಿ ಕಾರ್ಯಾಚರಣೆ ನಡೆಸಿ 12 ಲಕ್ಷ ಮೌಲ್ಯದ ಗಾಂಜಾ ಹಾಗೂ ಎಂಡಿಎಂಎ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸಿಸಿಬಿ ಪೊಲೀಸರು 3.32 ಕೋಟಿ ಮೌಲ್ಯದ 332 ಕೆಜಿ ಗಾಂಜಾ, ಒಂದು ಗೂಡ್ಸ್ ವಾಹನ, ಮೊಬೈಲ್, ಉಪ್ಪಾರಪೇಟೆ ಠಾಣೆ ಪೊಲೀಸರು 7.60 ಕೋಟಿ ಮೌಲ್ಯದ 3ಕೆಜಿ 900 ಗ್ರಾಂ ಎಂಡಿಎಂಎ ಹಾಗೂ ಕಾಡುಗೋಡಿ ಠಾಣೆ ಪೊಲೀಸರು 12 ಲಕ್ಷ ಮೌಲ್ಯದ 12 ಗ್ರಾಂ ಎಂಡಿಎಂಎ, 11 ಕೆಜಿ 170 ಗ್ರಾಂ ಗಾಂಜಾ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಾರೆ ಐಎನ್‌ಆರ್ ಮೌಲ್ಯ 5.77 ಕೋಟಿ ರೂ.ಗಳಾದರೆ, ಮಾರುಕಟ್ಟೆ ಮೌಲ್ಯ 11.29 ಕೋಟಿ ರೂ.ಗಳೆಂದು ಪೊಲೀಸರು ತಿಳಿಸಿದ್ದಾರೆ.ಈ ಮಾಹಿತಿಗಳನ್ನಾಧರಿಸಿ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಸ್ಥಳಗಳ ಮೇಲೆ ದಾಳಿ ಮಾಡಿ ಹೊರರಾಜ್ಯದ ವ್ಯಕ್ತಿ ಸೇರಿದಂತೆ ಐದು ಮಂದಿಯನ್ನು ಬಂಧಿಸಿದ್ದಾರೆ.

ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ವಿದೇಶಿ ಮೂಲದ ಅಪರಿಚಿತ ವ್ಯಕ್ತಿಯಿಂದ ಹಾಗೂ ರಾಜ್ಯದ ಅಪರಿಚಿತ ವ್ಯಕ್ತಿಗಳಿಂದ ಮಾದಕ ವಸ್ತು ಎಂಡಿಎಂಎ, ಗಾಂಜಾವನ್ನು ಕಡಿಮೆ ಬೆಲೆಗೆ ಖರೀದಿಸಿಕೊಂಡು ಬಂದು ಸಾರ್ವಜನಿಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದುದಾಗಿ ಬಾಯಿಬಿಟ್ಟಿದ್ದಾರೆ.

# ಉಪ ಚುನಾವಣೆ ಸವಾಲಿಗೆ ಅಲರ್ಟ್ ಆದ ಕಾಂಗ್ರೆಸ್

### ಇಬ್ಬರು ಆಪ್ತ ಸಚಿವರಿಗೆ ಟಾಸ್ಕ್ ಕೊಟ್ಟ ಸಿಎಂ ಸಿದ್ದರಾಮಯ್ಯ, ರಾಜ್ಯದಲ್ಲಿ ಇದೀಗ ಉಪ ಚುನಾವಣೆ ಸವಾಲು ಎದುರಾಗಿದೆ

• ಉದಯವಾಹಿನಿ, ಬೆಂಗಳೂರು


ರಾಜ್ಯದಲ್ಲಿ ಇದೀಗ ಉಪ ಚುನಾವಣೆ ಸವಾಲು ಎದುರಾಗಿದೆ. ಆಡಳಿತರೂಢ ಕಾಂಗ್ರೆಸ್ ಪಕ್ಷಕ್ಕೆ ಎರಡು ಕ್ಷೇತ್ರದ ಗೆಲುವು ಅನಿವಾರ್ಯವಾಗಿದೆ. ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆಯನ್ನು ಸಾಬೀತು ಮಾಡಲು ವಿಪಕ್ಷಗಳು ಹವಣಿಸುತ್ತಿರುವ ಸಂದರ್ಭದಲ್ಲೇ ಕಾಂಗ್ರೆಸ್ ಸರ್ಕಾರ ಜನಾಭಿಪ್ರಾಯ ತನ್ನ ಪರವಾಗಿದೆ ಎಂಬುವುದನ್ನು ಸಾಬೀತು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರದ ಗೆಲುವು ಅನಿವಾರ್ಯವಾಗಿದೆ. ಹೀಗಾಗಿ ಪ್ರಭಾವಿ ಸಚಿವರಿಗೆ ಸಿಎಂ ಸಿದ್ದರಾಮಯ್ಯ ಅವರು ಜವಾಬ್ದಾರಿ ಹಂಚಿಕೆ ಮಾಡಿದ್ದಾರೆ.

**ಆಪ್ತ ಸಚಿವರಿಗೆ ಟಾಸ್ಕ್:** ದಾವಣಗೆರೆಯಲ್ಲಿ ಟಿಕೆಟ್ ವಿಚಾರವಾಗಿ ಎರಡು ಬಣಗಳ ನಡುವೆ ಗುದ್ದಾಟ ನಡೆಯುತ್ತಿದೆ. ಸಮರ್ಥ್‌ಗೆ ಟಿಕೆಟ್ ಘೋಷಣೆ ಆದರೂ ಮುಸ್ಲಿಂ ನಾಯಕರ ಒಂದು ಬಣ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ. ಸಮರ್ಥ್ ವಿರುದ್ಧ ಬಂಡಾಯ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗಿದೆ. ಹೀಗಾಗಿ ಕಾಂಗ್ರೆಸ್ ನಾಯಕತ್ವ ಅಲರ್ಟ್ ಆಗಿದೆ. ಅಲ್ಪಸಂಖ್ಯಾತರ ಅಸಮಾಧಾನ ತಣಿಸುವ ಜವಾಬ್ದಾರಿಯನ್ನು ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ವಹಿಸಲಾಗಿದೆ. ಶಾಮನೂರು ಕುಟುಂಬದ ನಡೆಯಿಂದ ಬೇಸತ್ತ ಜಮೀರ್ ಸ್ವತಃ ಅಂತರ ಕಾಯ್ದುಕೊಂಡಿದ್ದಾರೆ. ಜಮೀರ್‌ಅಸಮಾಧಾನ ತಣಿಸುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ ಮುಂದಾಗಿದ್ದಾರೆ.



ನಾಮಪತ್ರ ಸಲ್ಲಿಕೆ ಮಾಡಲಾಗಿದೆ. ಆದರೆ ಜಮೀರ್ ಉಪಸ್ಥಿತಿ ಇರಲಿಲ್ಲ. ಹೀಗಾಗಿ ಜಮೀರ್ ಹಾಗೂ ಎಸ್ ಎಸ್ ಮಲ್ಲಿಕಾರ್ಜುನ್ ನಡುವೆ ಸಂಧಾನ ಏರ್ಪಡಿಸಿ ದಾವಣಗೆರೆಯಲ್ಲಿ ಬಂಡಾಯ ಶಮನ ಮಾಡುವುದು ಸಿದ್ದರಾಮಯ್ಯ ತಂತ್ರಗಾರಿಕೆ ಆಗಿದೆ. ಕ್ಷೇತ್ರದಲ್ಲಿ 80,000 ಕ್ಕೂ ಅಧಿಕ ಮುಸ್ಲಿಮರಿದ್ದಾರೆ. ಹಾಗಾಗಿ ಅವರ ಮತಗಳು ಬಹುಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಜಮೀರ್‌ಗೆ ಸಿಎಂ ಟಾಸ್ಕ್ ನೀಡಿದ್ದಾರೆ.

ಏನೇ ಅಸಮಾಧಾನ ಇದ್ದರು ಬಂಡಾಯ





ಶಮನ ಮಾಡುವ ಜವಾಬ್ದಾರಿಯನ್ನು ನೀನು ಹೊರಬೇಕು, ಎಂಬ ಸೂಚನೆಯನ್ನು ನೀಡಿದ್ದಾರೆ. ಸರ್ಕಾರದ ಮೇಲೆ ಆಕ್ರೋಶ ವ್ಯಕ್ತವಾದರೆ ಉಪಚುನಾವಣೆ ಮೇಲೆ ಪರಿಣಾಮ ಬೀರುವ ಆತಂಕ ಕಾಂಗ್ರೆಸ್‌ಗೆ ಇದೆ. ಹಾಗಾಗಿ ಎರಡೂ ಕ್ಷೇತ್ರಗಳಲ್ಲಿ ದಲಿತ ಸಮುದಾಯದ ನಾಯಕರಿಗೆ ವಸ್ತುಸ್ಥಿತಿ ತಿಳಿಸಿ ಅಸಮಾಧಾನ ಶಮನಗೊಳಿಸುವ ಜವಾಬ್ದಾರಿ ಸತೀಶ್ ಅವರಿಗೆ ನೀಡಲಾಗಿದೆ.

ಈ ಹಿಂದೆಯೂ ಸತೀಶ್ ಅವರು ಶಿಗ್ಗಾಂವಿ ಉಪ ಚುನಾವಣೆಯಲ್ಲಿ ಪ್ರಮುಖ ಜವಾಬ್ದಾರಿ ನಿರ್ವಹಣೆ ಮಾಡಿದ್ದರು. ಕಾಂಗ್ರೆಸ್ ಅಭ್ಯರ್ಥಿ ಯಾಸೀನ್‌ಖಾನ್ ಪಠಾಣ್ ಅವರ ಗೆಲುವಿನಲ್ಲಿ ಸತೀಶ್ ಪಾತ್ರ ಮಹತ್ವದ್ದಾಗಿತ್ತು. ಹೀಗಾಗಿ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ತಮ್ಮ ಆಪ್ತ ಬಳಗದ ಸಚಿವರಾದ ಜಮೀರ್, ಸತೀಶ್ ಅವರಿಗೆ ಸಿಎಂ ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ. ದಾವಣಗೆರೆ ಕ್ಷೇತ್ರದಲ್ಲೇ ನಿಂತು ಸ್ಥಳೀಯ ನಾಯಕರನ್ನ ಒಟ್ಟುಗೂಡಿಸಿ ಶಾಮನೂರು ಮೊಮ್ಮಗನ ಗೆಲುವಿಗೆ ಸಾಥ್ ನೀಡುವಂತೆ ಜಮೀರ್‌ಗೆ ಜವಾಬ್ದಾರಿ ನೀಡಿದ್ದಾರೆ. ಅದರಂತೆ ಬಾಗಲಕೋಟೆಯಲ್ಲಿ ಸತೀಶ್ ಜಾರಕಿಹೊಳಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ಈ ಮೂಲಕ ಎರಡು ಕ್ಷೇತ್ರಗಳ ಉಪಚುನಾವಣೆಯನ್ನು ಗೆಲ್ಲಲೇಬೇಕೆಂದು ಸಿಎಂ ಸಿದ್ದರಾಮಯ್ಯ ಪಣತೊಟ್ಟಿದ್ದಾರೆ.

### ಸತೀಶ್ ಜಾರಕಿಹೊಳಿಗೆ ಒಳಮೀಸಲಾತಿ ಜವಾಬ್ದಾರಿ

ರಾಜ್ಯ ಸರ್ಕಾರಕ್ಕೆ ಒಳ ಮೀಸಲಾತಿಯೂ ಉಪ ಚುನಾವಣೆಯಲ್ಲಿ ಪರಿಣಾಮ ಬೀರುವ ಸಾಧ್ಯತೆ ಇದೆ. ಅದರಲ್ಲೂ ಬಾಗಲಕೋಟೆಯಲ್ಲಿ ಇದು ಪ್ರಚಾರ ಅಸ್ತ್ರವಾಗುವ ಸಾಧ್ಯತೆ ಅಲ್ಲಗಳೆಯುವ ಹಾಗಿಲ್ಲ. ಒಳಮೀಸಲಾತಿ ಸಂಬಂಧ ದಲಿತ ಸಮುದಾಯದಲ್ಲಿ ನಿರ್ಮಾಣವಾಗಿರುವ ಗೊಂದಲವನ್ನು ಬಗೆಹರಿಸುವ ಜವಾಬ್ದಾರಿ ಸತೀಶ್ ಜಾರಕಿಹೊಳಿಗೆ ನೀಡಲಾಗಿದೆ.

### ಕುರ್ಚಿ ಗಟ್ಟಿಗೊಳಿಸುವ ಪ್ರಯತ್ನ

ಜನಾಭಿಪ್ರಾಯ ನಮ್ಮ ಪರ ಎಂಬ ಸಂದೇಶ ಎರಡು ಕ್ಷೇತ್ರಗಳಲ್ಲಿ ಉಪ ಚುನಾವಣೆಯಲ್ಲಿ ಗೆಲುವು ಸಿದ್ದರಾಮಯ್ಯ ಅವರ ಪರವಾದ ವಾತಾವರಣ ನಿರ್ಮಾಣ ಮಾಡಲು ಸಹಾಯವಾಗಲಿದೆ. ನಾಯಕತ್ವ ಬದಲಾವಣೆಯ ಚರ್ಚೆಯ ಸಂದರ್ಭದಲ್ಲೇ ಸಿದ್ದರಾಮಯ್ಯ ಕುರ್ಚಿ ಗಟ್ಟಿಗೊಳಿಸುವ ಪ್ರಯತ್ನದಲ್ಲಿದ್ದಾರೆ. ಉಪ ಚುನಾವಣೆಯ ಫಲಿತಾಂಶ ಅವರಿಗೆ ಈ ನಿಟ್ಟಿನಲ್ಲಿ ಅನುಕೂಲ ಕಲ್ಪಿಸುವ ಸಾಧ್ಯತೆ ಇದೆ.

# ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ

## ಮೃತ ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲು ಕ್ರಮ ವಹಿಸಿ: ಕೆ.ರಾಜು

• ಉದಯವಾಹಿನಿ, ರಾಮನಗರ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾಗಿರುವ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಫಲಾನುಭವಿಯಾಗಿ, ತದನಂತರದಲ್ಲಿ ವಯೋಸಹಜ ಸೇರಿದಂತೆ ಇತರೆ ಕಾರಣಗಳಿಂದ ಮೃತರಾದ ಮಹಿಳೆಯರ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲು ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು ಅವರು ಸೂಚಿಸಿದರು.

ಅವರು ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿ ಮರಣ ಹೊಂದಿದ 6,624 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1,777 ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲಾಗಿದೆ. ಬಾಕಿ ಇರುವ 4,847 ಫಲಾನುಭವಿಗಳನ್ನು ಗೃಹಲಕ್ಷ್ಮೀ ಫಲಾನುಭವಿಗಳ ಪಟ್ಟಿಯಿಂದ ತೆಗೆದು ಹಾಕಲು ಶೀಘ್ರವಾಗಿ ಕ್ರಮವಹಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿನೇಶ್ ಅವರಿಗೆ ತಿಳಿಸಿದರು.

ಚನ್ನಪಟ್ಟಣ ತಾಲ್ಲೂಕಿನಲ್ಲಿ 1,700 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 425 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,275 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ 1,660 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 418 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,242 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನಲ್ಲಿ 398 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 96 ಫಲಾನುಭವಿಗಳನ್ನು ಕೈಬಿಡಲಾಗಿದ್ದು,

ಉದಯವಾಹಿನಿ ಚಿತ್ರ


302 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ 1,375 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 332 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,043 ಫಲಾನುಭವಿಗಳು ಬಾಕಿ ಉಳಿದಿದ್ದಾರೆ.

ರಾಮನಗರ ತಾಲ್ಲೂಕಿನಲ್ಲಿ 1,491 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 506 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 985 ಫಲಾನುಭವಿಗಳು ಬಾಕಿ ಉಳಿದಿದ್ದಾರೆ ಎಂದು ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 15,053 ಬಿಪಿಎಲ್ ಪಡಿತರ ಚೀಟಿಗಳ ಪೈಕಿ 12,216 ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳನ್ನಾಗಿ ಪರಿವರ್ತನೆ ಮಾಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಶಿಲ್ಪ ಅವರು ಸಭೆಗೆ ಮಾಹಿತಿ ನೀಡಿದಾಗ ಪ್ರತಿಕ್ರಿಯಿಸಿದ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರು ಪಡಿತರ ಚೀಟಿಗಳನ್ನು ಪರಿವರ್ತಿಸುವ ಸಂದರ್ಭದಲ್ಲಿ ಅಧಿಕಾರಿಗಳು ಕೂಲಂಕುಷವಾಗಿ ಪರಿಶೀಲಿಸಬೇಕು ಅರ್ಹ ಫಲಾನುಭವಿಗಳು ಅನ್ನಭಾಗ್ಯ ಯೋಜನೆಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ನಿರ್ದೇಶಿಸಿದರು.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೂ 11,05,61,882 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ ಅವರ ಪ್ರಯಾಣ ದರದ ಮೊತ್ತ 324,99,17,043 ರೂಪಾಯಿಗಳಾಗಿವೆ ಹಾಗೂ ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ 2024ರ ಜನವರಿ ಮಾಹೆಯಿಂದ 2025ರ ಡಿಸೆಂಬರ್ ಮಾಹೆಯವರೆಗೆ ಒಟ್ಟು ಅರ್ಹ 3,799 ಡಿಪ್ಲೊಮಾ, ಪದವೀಧರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಒಟ್ಟು 11,19,75,000 ರೂ ಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,33,452 ಮಂದಿ ನೋಂದಾಯಿಸಿಕೊಂಡಿದ್ದು, ಈ ಯೋಜನೆ ಪ್ರಾರಂಭವಾದಾಗಿನಿಂದ ಇದುವರೆಗೂ ಒಟ್ಟಾರೆ 378.46 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ. ರೈತರ ಜಮೀನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ವಿಳಂಬ ತೋರದೆ ಬೆಸ್ಕಾಂ ಅಧಿಕಾರಿಗಳು ಉತ್ತಮ ಸೇವೆ ನೀಡಬೇಕೆಂದು ಸೂಚಿಸಿದರು.

ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷರಾದ ಮಹದೇವ್, ಎಸ್.ಸಿ. ಶೇಖರ್, ಸಿದ್ದೇಗೌಡ, ಸದಸ್ಯರು ಹಾಗೂ ರಾಮನಗರ ತಾಲ್ಲೂಕು ಅಧ್ಯಕ್ಷರಾದ ರಾಜು ವಿ.ಎಚ್., ಮಾಗಡಿ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ವಿಜಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಶಿವಮಾದಯ್ಯ, ಎಂ. ಮಹದೇವ್, ಕಾಳಮ್ಮ, ವನಜಾ ಎಸ್.ಜಿ, ಶೋಭಾ ಸೇರಿದಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

**ಇನ್ನೆರಡು ದಿನಗಳಲ್ಲಿ ಪಾವತಿ**

**ಜಿಲ್ಲೆಯ 2,94,399 ಅರ್ಹ ಫಲಾನುಭವಿಗಳ ಪೈಕಿ 2,81,726 (95.70%) ಫಲಾನುಭವಿಗಳು ನೋಂದಣಿಯಾಗಿದ್ದು, ಉಳಿದ 12,673 (4.30%) ಫಲಾನುಭವಿಗಳ ನೋಂದಣಿಗೆ ಬಾಕಿ ಇರುತ್ತದೆ. 27 ಕಂತುಗಳಲ್ಲಿ ಅಂದರೆ 2025ರ ಡಿಸೆಂಬರ್ ಮಾಹೆಯವರೆಗೆ 2,68,612 ಫಲಾನುಭವಿಗಳಿಗೆ 1427,16,26,000 ರೂ.ಗಳನ್ನು ಪಾವತಿಸಲಾಗಿದೆ. 2026ರ ಜನವರಿ ಮಾಹೆಯ 28ನೇ ಕಂತನ್ನು ಇನ್ನೆರಡು ದಿನಗಳಲ್ಲಿ ಪಾವತಿಸಲಾಗುವುದು ಎಂದರು.**

**ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ಅವಶ್ಯವಿರುವ ಗ್ರಾಮಗಳಿಗೆ ಬಸ್ ಸೌಕರ್ಯ ಕಲ್ಪಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಿದ ಅವರು ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡಲು ಜಿಲ್ಲೆಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಇಲಾಖೆಗಳು ಶ್ರಮಿಸಬೇಕು, ಯೋಜನೆಗೆ ಅರ್ಹರಿರುವ ಯಾವುದೇ ಫಲಾನುಭವಿಯು ಗ್ಯಾರಂಟಿ ಯೋಜನೆಯಿಂದ ಹೊರಗುಳಿಯಬಾರದು ಹಾಗೂ ಈ ಯೋಜನೆಯ ಯಶಸ್ವಿಗೆ ಎಲ್ಲಾ ಅಧಿಕಾರಿಗಳು ಸಹಕರಿಸಬೇಕು.**

**- ಕೆ. ರಾಜು, ಅಧ್ಯಕ್ಷ**

# ಮಿನಿ ನ್ಯೂಸ್

## ಹೆಣ್ಣು ಹುಲಿ ಕಳೇಬರ ಪತ್ತೆ ಮದ್ದೂರು ವಲಯದಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ಅರಣ್ಯ ವಲಯದ ಮಾರಿಗುಡಿ ಬೀಟ್‌ನಲ್ಲಿ ಹೆಣ್ಣು ಹುಲಿ ಕಳೇಬರ ಪತ್ತೆಯಾಗಿದ್ದು ವಯೋಸಹಜವಾಗಿ ಸಾವನ್ನಪ್ಪಿರುವ ಕುರಿತಾದ ಮಾಹಿತಿ ಲಭ್ಯವಾಗಿದೆ. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಮದ್ದೂರು ವಲಯಕ್ಕೆ ಸೇರಿದ ಮಾರಿಗುಡಿ ವಲಯದಲ್ಲಿ ಇಲಾಖೆ ಸಿಬ್ಬಂದಿಗಳು ಗಸ್ತು ತಿರುಗುತ್ತಿದ್ದ ವೇಳೆ ಹೆಣ್ಣು ಹುಲಿಯ ಕಳೇಬರ ಪತ್ತೆಯಾಗಿದ್ದು ವಯೋಸಹಜವಾಗಿ ಸಾವನ್ನಪ್ಪಿದೆ ಎನ್ನಲಾಗಿದೆ. ಹುಲಿಯ ಹಲ್ಲುಗಳು ಸವೆದುಹೋಗಿದ್ದು ವಯಸ್ಸಾದ ಹುಲಿಯಾಗಿದೆ ಎಂದು ಖಾತರಿಪಡಿಸಿದ್ದಾರೆ. ಬುಧವಾರ ಸಿಎಫ್ ಪ್ರಭಾಕರನ್ ಸಮ್ಮುಖದಲ್ಲಿ ಇಲಾಖೆ ಮಾರ್ಗಸೂಚಿಯಂತೆ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



## ಬೆಸ್ಕಾಂ ಮುಂದೆ ಗ್ರಾಮಸ್ಥರ ಪ್ರತಿಭಟನೆ

• ಉದಯವಾಹಿನಿ, ಕುದೂರು

ಕುದೂರು ಹೋಬಳಿಯ ಹುಲಿಕಲ್ ಗ್ರಾಮದಲ್ಲಿ ಕಳೆದ ಎರಡು ವಾರಗಳಿಂದ ತೀವ್ರ ವಿದ್ಯುತ್ ಸಮಸ್ಯೆ ಖಂಡಿಸಿ ಗ್ರಾಮಸ್ಥರು ಕುದೂರು ಬೆಸ್ಕಾಂ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಹುಲಿಕಲ್ ಗ್ರಾಮದಲ್ಲಿ ಕಳೆದ 15 ದಿನಗಳಿಂದ ಸರಿಯಾಗಿ ಒಂದು ತಾಸೂ ವಿದ್ಯುತ್ ಸಂಪರ್ಕ ಇಲ್ಲ. ಗ್ರಾಮಸ್ಥರು ಹಲವಾರು ಬಾರಿ ಬೆಸ್ಕಾಂ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದರೂ ಯಾರೊಬ್ಬರೂ ಸ್ಪಂದನೆ ನೀಡುತ್ತಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ವಿದ್ಯುತ್ ಸಂಪರ್ಕ ಇಲ್ಲದ ಕಾರಣ ಬೆಳೆಗೆ ನೀರು ಹರಿಸಲಾಗದೆ ರೈತರು ಕಷ್ಟಪಡುತ್ತಿದ್ದಾರೆ. ಪರೀಕ್ಷೆಗೆ ಓದಲು ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಬೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಬೇಸತ್ತು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ಗ್ರಾಮಸ್ಥ ಪವನ್ ಆಕ್ರೋಶ ವ್ಯಕ್ತಪಡಿಸಿದರು.

## ಬಿರುಗಾಳಿ ಸಹಿತ ಮಳೆ: ಮನೆ ಮೇಲೆ ಉರುಳಿದ ಮರ: ಗರಗನಹಳ್ಳಿಯಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ

ಮಳೆ, ಗಾಳಿಯ ಅಬ್ಬರಕ್ಕೆ ಬೃಹದಾಕಾರದ ಬುಗುರಿ ಮರ ಮನೆ ಮೇಲೆ ಉರುಳಿದ ಪರಿಣಾಮ ಸಂಪೂರ್ಣವಾಗಿ ಜಖಂಗೊಂಡಿರುವ ಘಟನೆ ತಾಲ್ಲೂಕಿನ ಗರಗನಹಳ್ಳಿಯಲ್ಲಿ ಮಂಗಳವಾರ ಸಂಜೆ ನಡೆದಿದೆ. ಗ್ರಾಮದ ಮಹೇಶ್ ಎಂಬವರ ಮನೆಯ ಮೇಲೆ ಮರ ಉರುಳಿ ಬಿದ್ದಿದ್ದು, ಮನೆಯ ಮುಕ್ಕಾಲು ಭಾಗ ಜಖಂಗೊಂಡಿದೆ. ಮನೆಯಲ್ಲಿದ್ದವರು ಬೇರೆ ರೂಂನಲ್ಲಿ ಇದ್ದಿದ್ದರಿಂದ ಭಾರೀ ಅನಾಹುತ ತಪ್ಪಿದೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಕಂದಾಯ ನಿರೀಕ್ಷಕ ಪರಿಶೀಲನೆ ನಡೆಸಿ ತಹಶೀಲ್ದಾರ್ ಅವರಿಗೆ ವರದಿ ಸಲ್ಲಿಸುವ ಮಾಹಿತಿ ನೀಡಿದ್ದಾರೆ. ಮನೆ ಮೇಲ್ಭಾಗದಲ್ಲಿ ಬಿದ್ದ ಮರವನ್ನ ಯಂತ್ರದ ಸಹಾಯದಿಂದ ಕಟಾವು ಮಾಡುವ ಮೂಲಕ ತೆರವುಗೊಳಿಸಲಾಗಿದ್ದು ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಉದಯವಾಹಿನಿ ಚಿತ್ರ


## ಹೋಟೆಲ್‌ಗಳ ಮೇಲೆ ಆಹಾರ ಇಲಾಖೆ ಅಧಿಕಾರಿಗಳ ದಾಳಿ ಗೃಹ ಬಳಕೆ ಸಿಲಿಂಡರ್ ಜಪ್ತಿ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಗುಂಡ್ಲುಪೇಟೆ

ಗೃಹಬಳಕೆ ಸಿಲಿಂಡರ್ ಬಳಸುತ್ತಿದ್ದ ಕೇರಳ ರಸ್ತೆಯಲ್ಲಿನ ಸವಿ ಕೆಫಿನ್ ಮತ್ತು ಡೇಟ್ಸ್ ಹಾಗೂ ಕರ್ನಾಟಕ ಬೇಕರಿ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಮೂರು ಸಿಲಿಂಡರ್‌ಗಳನ್ನ ಜಪ್ತಿ ಮಾಡುವ ಜೊತೆಗೆ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ತಾಲ್ಲೂಕಿನ ವಿವಿಧ ಹೋಟೆಲ್‌ಗಳಲ್ಲಿ ಅನಧಿಕೃತವಾಗಿ ಗೃಹಬಳಕೆ ಸಿಲಿಂಡರ್ ಗಳನ್ನ ಬಳಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಕೇರಳ ರಸ್ತೆ ಬದಿಯಲ್ಲಿನ ಹಲವು ಹೋಟೆಲ್, ಬೇಕರಿಗಳ ಮೇಲೆ ದಿಢೀರ್ ದಾಳಿ ನಡೆಸಿದ ಆಹಾರ ಶಿರಸ್ತೇದಾರ್ ಹಾಗೂ ನಿರೀಕ್ಷಕರಿಗೆ ಬಹುತೇಕ ಹೋಟೆಲ್ ಮಾಲೀಕರು ಖಾಸಗಿ ಕಂಪನಿಯ ಕಮರ್ಷಿಯಲ್ ಸಿಲಿಂಡರ್ ಹಾಗೂ ಸೌದೆ ಬಳಕೆಯಿಂದ ಅಡುಗೆ ತಯಾರಿಸುತ್ತಿದ್ದ ಕುರಿತು ಖಾತ್ರಿಯಾದ ಹಿನ್ನಲೆ ಗೃಹಬಳಕೆ ಸಿಲಿಂಡರ್ ಬಳಸದಂತೆ ತಿಳುವಳಿಕೆ ನೀಡಿದ್ದಾರೆ. ಜಪ್ತಿ ಮಾಡಿದ ಸಿಲಿಂಡರ್‌ಗಳನ್ನ ಮುಂದಿನ ಆದೇಶದತನಕ ನಮ್ಮ ಸಂಘ ಮೇಲುಕಾಮನಹಳ್ಳಿಯವರ ಸುಪರ್ದಿಗೆ ನೀಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಗಿ ಖರೀದಿ ಕೇಂದ್ರದ ವೈರಾಗ್ಯ

• ಉದಯವಾಹಿನಿ, ಹಾರೋಹಳ್ಳಿ

ರಾಗಿ ಖರೀದಿ ಕೇಂದ್ರದಲ್ಲಿ ರೈತರಿಗೆ ಕುಡಿಯುವ ನೀರು, ಶೌಚಾಲಯ, ಆಸನ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಬೇಕು.ಆದರೆ ಹಾರೋಹಳ್ಳಿ ಮಾರಸಂದ್ರದಲ್ಲಿರುವ ರಾಗಿ ಖರೀದಿ ಕೇಂದ್ರದಲ್ಲಿ ಅದ್ಯಾವುದೂ ಇಲ್ಲ. ಇಲ್ಲಿನ ಅಧಿಕಾರಿಗಳು ರೈತರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಿಲ್ಲ. ಬೇಸಿಗೆಯ ಬಿಸಿಲಲ್ಲಿ ರೈತರು ದಾಹದಿಂದ ಪರಿತಪಿಸುತ್ತಿದ್ದಾರೆ. ರಾಗಿ ಖರೀದಿ ಕೇಂದ್ರ ಸ್ಥಾಪನೆ ಮತ್ತು ಮೂಲಸೌಲಭ್ಯ ಒದಗಿಸಲು ಸರ್ಕಾರ ಹಣ ಬಿಡುಗಡೆ ಮಾಡುತ್ತದೆ. ಆ ಹಣದಲ್ಲಿ ಸೌಲಭ್ಯ ಒದಗಿಸುವಂತೆ ಸೂಚಿಸುತ್ತದೆ. ಆದರೆ ಅಧಿಕಾರಿಗಳು ಏನನ್ನೂ ಮಾಡಲ್ಲ.

ಹಾರೋಹಳ್ಳಿಯಲ್ಲಿ ಸ್ಥಾಪನೆಯಾಗಿರುವ ರಾಗಿ ಖರೀದಿ ಕೇಂದ್ರ ಕಿರಿದಾಗಿದ್ದು, ಖರೀದಿ ಕೇಂದ್ರದ ಆವರಣದಲ್ಲೇ ರೈತರಿಂದ ಕೊಂಡ ರಾಗಿಯನ್ನು ಇರಿಸಲಾಗಿದೆ. ರಾಗಿಯನ್ನು ದಿನ ನಿತ್ಯ ಸರ್ಕಾರದ ದಾಸ್ತಾನು ಮಳಿಗೆಗೆ ಸಾಗಿಸಲಾಗುತ್ತಿದೆಯಾದರೂ, ಒಂದೊಮ್ಮೆ ಮಳೆ ಬಂದರೆ ರೈತರ ರಾಗಿ ನೆನೆಯುವುದರ ಜತೆಗೆ ಸರ್ಕಾರದ ಹಣವೂ ಪೋಲಾಗುತ್ತದೆ.

ಇದರಿಂದ ರಾಗಿ ಖರೀದಿ ಕೇಂದ್ರಕ್ಕೆ ರಾಗಿ ತರಲು ರೈತರು ನಿರಾಸಕ್ತಿ ತೋರಿಸುತ್ತಿದ್ದಾರೆ. ಈ ಬಾರಿ ಕ್ವಿಂಟಲ್‌ಗೆ 4,886 ನಿಗದಿ ಪಡಿಸಿದೆ. ಹಾರೋಹಳ್ಳಿ ತಾಲೂಕಿನಲ್ಲಿ

ಉದಯವಾಹಿನಿ ಚಿತ್ರ


937 ರೈತರು 22,435 ಕ್ವಿಂಟಲ್ ರಾಗಿ ಮಾರಾಟಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ. ರಾಗಿ ಖರೀದಿ ಕೇಂದ್ರ ಆರಂಭವಾಗಿ ತಿಂಗಳು ಕಳೆದಿದ್ದು, ಈವರೆಗೂ 600ಕ್ಕೂ ಹೆಚ್ಚು ರೈತರು 13,000 ಕ್ವಿಂಟಲ್ ರಾಗಿಯನ್ನಷ್ಟೇ ರಾಗಿ ಖರೀದಿ ಕೇಂದ್ರಕ್ಕೆ ಪೂರೈಸಿದ್ದಾರೆ.

ರಾಗಿ ಖರೀದಿ ಕೇಂದ್ರದಲ್ಲಿ ಕಾಳಸಂತೆ ಹೆಚ್ಚಿದೆ. ರೈತರ ಹೆಸರಿನಲ್ಲಿ ದಲ್ಲಾಳಿಗಳು ಬೇರೆ ಕಡೆಯಿಂದ ರಾಗಿ ಖರೀದಿಸಿ ತಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದನ್ನೆಲ್ಲವನ್ನೂ ಇಲಾಖೆ ಅಧಿಕಾರಿಗಳು ಅರಿತಿದ್ದರೂ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ. ಜಿಲ್ಲಾಧಿಕಾರಿ ಕೂಡಲೇ ಸೂಕ್ತ ಕ್ರಮವಹಿಸಲು ಆದೇಶಿಸಬೇಕು ಎಂದು ರೈತರ ಸಂಘದ ರಾಜ್ಯ ಸಂಚಾಲಕ ಚೀಲೂರು ಮುನಿರಾಜು ಒತ್ತಾಯಿಸಿದರು.

# ವ್ಯಾಲಿ ನೀರು ಸುರಕ್ಷಿತ: ಆತಂಕ ಬೇಡ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕೆ.ಸಿ ವ್ಯಾಲಿ, ಎಚ್.ಎನ್ ವ್ಯಾಲಿ ಮತ್ತು ವೃಷಭಾವತಿ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ, ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿಗಳು, ಜಲಮಂಡಳಿ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಈ ಯೋಜನೆಯ ಸಂಸ್ಕರಿಸಿದ ನೀರಿನ ಗುಣಮಟ್ಟದ ಕುರಿತು ವಿಸ್ತೃತ ಚರ್ಚೆ ನಡೆಸಿದರು.

ಬೆಂಗಳೂರಿನ ಕೊಳಚೆ ನೀರನ್ನು ಈ ಯೋಜನೆಗಳಡಿ ಎರಡು ಹಂತದಲ್ಲಿ ಸಂಸ್ಕರಿಸಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆರೆಗಳಿಗೆ ಹರಿಸಲಾಗುತ್ತಿದೆ. ಶಾಶ್ವತ ನೀರಾವರಿ ಹೋರಾಟಗಾರರು, ರೈತ ಸಂಘಟನೆಗಳ ಮುಖಂಡರು ಈ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸಿ ಹರಿಸಬೇಕು ಎಂದು ಹೋರಾಟ ನಡೆಸುತ್ತಿದ್ದಾರೆ. ಈ ವಿಚಾರವಾಗಿ ಇತ್ತೀಚೆಗೆ ಚಿಕ್ಕಬಳ್ಳಾಪುರ ಬಂದ್ ಸಹ ನಡೆಯಿತು.

ಉದಯವಾಹಿನಿ ಚಿತ್ರ



ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಚಿವರು ಈ ಮಹತ್ವದ ಸಭೆ ನಡೆಸಿದ್ದಾರೆ. ವಿಜ್ಞಾನಿಗಳು ಹೇಳಿದ್ದೇನೆ ಸಭೆಯಲ್ಲಿ ಭಾಗಿಯಾಗಿದ್ದ ಐಐಎಸ್‌ಸಿ ವಿಜ್ಞಾನಿಗಳು, ಈ ಯೋಜನೆಯಿಂದ ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಅಂತರ್ಜಲ ವೃದ್ಧಿಸಿದೆ. 1,800 ಅಡಿಗೂ ನೀರು ಸಿಗುತ್ತಿರಲಿಲ್ಲ. ಆದರೆ ಈಗ 50ರಿಂದ 100 ಅಡಿಗೆ ನೀರು ಸಿಗುತ್ತಿದೆ. ನೀರಿನ ಗುಣಮಟ್ಟ ವೃದ್ಧಿಸಿದೆ. ಅಂತರ್ಜಲ ಐದು ಹಂತದಲ್ಲಿ ಶುದ್ಧೀಕರಣವಾಗುತ್ತಿದೆ. ಈ ನೀರನ್ನು ಬಳಸುತ್ತಿರುವ ಜನ ಜಾನುವಾರುಗಳ ಆರೋಗ್ಯದಲ್ಲಿ ಯಾವ ಸಮಸ್ಯೆಯೂ ಇಲ್ಲ ಎಂದು ವಿವರಿಸಿದರು.

ಕೃಷಿ ಬೆಳೆಗಳಲ್ಲೂ ಸಮಸ್ಯೆ ಇಲ್ಲ. ಮಣ್ಣಿನ ಗುಣಮಟ್ಟವೂ ವೃದ್ಧಿಸಿದೆ. ಐಐಎಸ್‌ಸಿ ಹಲವು ಬಾರಿ ಸಂಶೋಧನೆ ನಡೆಸಿದ್ದು ನೀರಿನಲ್ಲಿ ಹಾಗೂ ಅಂತರ್ಜಲದಲ್ಲಿ ಯಾವುದೇ ಲೋಹದ ಅಂಶಗಳೂ ಪತ್ತೆಯಾಗಿಲ್ಲ ಎಂದು ಪ್ರತಿಪಾದಿಸಿದರು.

ವಾಸನೆ, ಬಣ್ಣ ಇಲ್ಲದೆ ಶುದ್ಧ ನೀರು ಲಭ್ಯವಾಗುತ್ತಿದೆ. ಕೆರೆಗಳ ವ್ಯಾಪ್ತಿಯಲ್ಲಿ ಹಕ್ಕಿಗಳ ಸಂಕುಲವೂ ಹೆಚ್ಚಿದೆ, ಜಲಚರಗಳು ಆರೋಗ್ಯವಾಗಿವೆ. ಈ ಯೋಜನೆ ಇಡೀ ದೇಶ ಅನುಸರಿಸಬೇಕು ಎಂದು ಹಲವು ಸಂಸ್ಥೆಗಳು ಅಭಿಪ್ರಾಯಪಟ್ಟಿವೆ. ಬಾವಿಗಳೂ ತುಂಬುತ್ತಿವೆ. ಕೋಲಾರದಲ್ಲಿ ನೀರು ಹರಿಯದ ಪ್ರದೇಶದ ಮಣ್ಣಿಗೂ ನೀರು ಹರಿಯುತ್ತಿರುವ ಮಣ್ಣಿನ ಗುಣಮಟ್ಟಕ್ಕೂ ಯಾವುದೇ ವ್ಯತ್ಯಾಸ ಇಲ್ಲ ಎಂದು ವಿವರಿಸಿದರು.

ವಿಜ್ಞಾನಿಗಳಿಂದ ಸಮಗ್ರ ಮಾಹಿತಿ ಪಡೆದ ಸಚಿವ ಎನ್.ಎಸ್ ಬೋಸರಾಜು ಮಾತನಾಡಿ, ಕೆ.ಸಿ ವ್ಯಾಲಿ, ಎಚ್.ಎನ್ ವ್ಯಾಲಿ ಮತ್ತು ವೃಷಭಾವತಿ ವ್ಯಾಲಿಗಳ ಸಂಸ್ಕರಿಸಿದ ನೀರು ಅತ್ಯುತ್ತಮ ಗುಣಮಟ್ಟದ್ದಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ಸುದೀರ್ಘ ಸಂಶೋಧನೆಗಳಿಂದ ಇದು ದೃಢಪಟ್ಟಿದೆ. ಈ ಬಗ್ಗೆ ಸಾರ್ವಜನಿಕರು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ ಎಂದರು. ಕೆಲವು ಕಡೆ ಒಳ್ಳೆಯ ಕೆರೆ ನೀರಿಗೆ ಊರಿನ ಕೊಳಚೆ ನೀರನ್ನು ಹರಿಸಿ ಮಲಿನಗೊಳಿಸಲಾಗುತ್ತಿದೆ ಎಂದರು.

# ಬಲಗೈ ಸಮುದಾಯಕ್ಕೆ ಅನ್ಯಾಯ

• ಉದಯವಾಹಿನಿ, ಮೈಸೂರು

ಒಳ ಮೀಸಲಾತಿ ರಹಿತ ಹಳೇ ಮೀಸಲಾತಿ ಜಾರಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ನೂರಾರು ಕಾರ್ಯಕರ್ತರು ಒಕ್ಕೊರಲಿನಿಂದ ನ್ಯಾಯಕ್ಕಾಗಿ ಆಗ್ರಹಿಸಿದರು. ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಹಾಗೂ ಅಶೋಕಪುರಂ ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನೀಡಿದ ಒಳ ಮೀಸಲಾತಿ ವರದಿ ತಿರಸ್ಕರಿಸುವಂತೆ ಆಗ್ರಹ ವ್ಯಕ್ತವಾಯಿತು.

ಬನ್ನೂರು ರಸ್ತೆಯ ಗೌತಮ ಬುದ್ಧ ವೃತ್ತದ ಆವರಣದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಲೇಖಕ ಸಿ. ಹರಕುಮಾರ್ ಮಾತನಾಡಿ, ಒಳ

ಉದಯವಾಹಿನಿ ಚಿತ್ರ


ಮೀಸಲಾತಿ ಹಾದಿಬೀದಿ ರಂಪಾಟ ಆಗಿದೆ.

ಸರ್ಕಾರ ಒಳ ಮೀಸಲಾತಿ ನಿರ್ಧಾರದಿಂದ ಹಿಂದೆ ಸರಿಯಬೇಕು. ಕಡ್ಡಾಯವಾಗಿ ಜಾರಿ ಮಾಡಬೇಕಾದರೆ ನ್ಯಾಯಾಲಯದ ವಿಮರ್ಶೆಗೆ ಒಳಪಡಿಸಬೇಕು. 101 ಜಾತಿಗಳಿಗೆ ಅನ್ಯಾಯವಾಗದಂತೆ ಮೀಸಲಾತಿ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಒಂದು ವೃತ್ತದಲ್ಲಿ ಒಂದೇ ಹುದ್ದೆಗೆ ಮೀಸಲಾತಿ ಅನ್ವಯವಾಗುವುದಿಲ್ಲ. 3 ಹುದ್ದೆಗಳಿಂತ ಹೆಚ್ಚು ಹುದ್ದೆ ಇದ್ದಾಗ ಒಳ ಮೀಸಲಾತಿ ಅನ್ವಯ ಮಾಡಬೇಕು. ಈ ನಿಯಮವನ್ನು ನಿಗದಿ ಮಾಡಬೇಕು. ಘಟಕ ಮಾಡಿದರೆ ಸೂಕ್ತವಾದ ಪ್ರಾತಿನಿಧ್ಯ ಸಿಗುವುದಿಲ್ಲ. 2011 ರಿಂದ ಗ್ರೂಪ್ ಎ, ಬಿ ಹುದ್ದೆಗಳು ಊರ್ಜಿತವಾಗಿಲ್ಲ. ಬಹುಜನ ಸಮಾಜ ಪಕ್ಷ ಒಳ ಮೀಸಲಾತಿ ಪರ ಇಲ್ಲ. ಉತ್ತರ ಭಾರತದಲ್ಲಿ ಒಳ ಮಿಸಲಾತಿ ಇಲ್ಲ. ಅಸ್ಪೃಶ್ಯ ಜಾತಿಗಳಿಗೆ ಒಳ ಮೀಸಲಾತಿ ಸಿಗಬೇಕು. ಸ್ಪೃಶ್ಯ ಜಾತಿಗಳಿಗೆ ಸಿಗಬಾರದು ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಪಿ.ಎಂ. ಮಹೇಶ್ ಮಾತನಾಡಿ, ನಾಗಮೋಹನದಾಸ್ ವರದಿ ಅವೈಜ್ಞಾನಿಕವಾಗಿದೆ. ಹಳೇ ಮೀಸಲಾತಿ ಅನ್ವಯ ನೇಮಕಾತಿ ಮಾಡಬೇಕು. ಪ್ರತ್ಯೇಕ ಮೀಸಲಾತಿಗೂ ಒಳ ಮೀಸಲಾತಿಗೂ ವ್ಯತ್ಯಾಸ ಇದೆ. ರೋಸ್ಟರ್ ಬಿಂದು ಅವೈಜ್ಞಾನಿಕ. 101 ಸಮುದಾಯಗಳು ಒಟ್ಟಿಗೆ ಒಡೆಯುವುದೇ ಒಳ ಮೀಸಲಾತಿ ಹುನ್ನಾರ ಎಂದು ಟೀಕಿಸಿದರು.

# ಆಟೋ ಗ್ಯಾಸ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

• ಉದಯವಾಹಿನಿ, ಗುಬ್ಬಿ

ಪಶ್ಚಿಮ ಏಷ್ಯಾ ಭಾಗದಲ್ಲಿ ಯುದ್ಧ ಪ್ರಾರಂಭವಾದ ನಂತರ ನಿರಂತರವಾಗಿ ಗ್ಯಾಸ್ ಬೆಲೆ ಏರಿಕೆ ಆಗುತ್ತಿರುವುದರಿಂದ ಆಟೋ ಓಡಿಸಲು ಸಾಧ್ಯವಾಗುತ್ತಿಲ್ಲ. ಸಂಬಂಧಿಸಿದ ಗ್ಯಾಸ್ ಬಂಕ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಗುಬ್ಬಿ ಪಟ್ಟಣದ ಆಟೋ ಚಾಲಕರು ಮತ್ತು ಮಾಲೀಕರು ಸಂಜೆ ಪ್ರತಿಭಟನೆ ನಡೆಸಿದರು.

ಗ್ಯಾಸ್ ಬಂಕ್ ಮಾಲೀಕರು ಕೆ.ಜಿ ಗ್ಯಾಸ್‌ಗೆ 30 ಹೆಚ್ಚಳ ಮಾಡಿದ್ದಾರೆ. ಗ್ಯಾಸ್ ಬಂಕ್‌ಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೇ ಇರುವುದರಿಂದ ಮನಸೋ ಇಚ್ಛೆ ದರ ಏರಿಸುತ್ತಿದ್ದಾರೆ. ದರ ಏರಿಕೆಯಾದಂತೆ ಬಾಡಿಗೆ ದರ ಏರಿಸಲು ಸಾಧ್ಯವಾಗುವುದಿಲ್ಲ. ದರ ಏರಿಸಿದಲ್ಲಿ ಪ್ರಯಾಣಿಕರು ಆಟೊದವರ ಮೇಲೆ ಮುಗಿಬೀಳುತ್ತಾರೆ. ಹೀಗೆ ಆದರೆ ನಾವು ಬದುಕುವುದಾದರೂ ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉದಯವಾಹಿನಿ ಚಿತ್ರ


ಸಂಬಂಧಿಸಿದ ಅಧಿಕಾರಿಗಳು ಹಾಗೂ ತಾಲ್ಲೂಕು ಆಡಳಿತ ತುರ್ತು ಕ್ರಮವಹಿಸಿ ಆಟೋದವರ ನೆರವಿಗೆ ಧಾವಿಸಬೇಕು. ಇಲ್ಲವಾದಲ್ಲಿ ಬಂಕ್ ಮುಂದೆ ಆಟೋ ನಿಲ್ಲಿಸಿ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು.

ಆಹಾರ ನಿರೀಕ್ಷಕಿ ವೀಣಾ ಸ್ಥಳಕ್ಕೆ ಆಗಮಿಸಿ, ಬಂಕ್ ಮಾಲೀಕರ ಜತೆ ಚರ್ಚೆ ನಡೆಸಿದರು. ಆದರೆ ಮಾಲೀಕರು ದರ ಕಡಿಮೆ ಮಾಡಲು ಒಪ್ಪಲಿಲ್ಲ. ವಿಷಯವನ್ನು ತಹಶೀಲ್ದಾರ್ ಗಮನಕ್ಕೆ ತಂದು ಬಂಕ್ ಮಾಲಿಕರಿಗೆ ನೋಟಿಸ್ ನೀಡಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

# ಬೀಟ್‌ರೂಟ್ ಕೇಳೋರಿಲ್ಲ: ರೈತರ ಅಳಲು

• ಉದಯವಾಹಿನಿ, ಯಳಂದೂರು

ಗ್ರಾಮೀಣ ಪ್ರದೇಶದಲ್ಲಿ ಬೀಟ್ರೂಟ್ ಬೆಲೆ ಕುಸಿದಿದ್ದು, ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಟಾವು ಮಾಡಲಾದ ಬೆಳೆಯನ್ನು ಮಾರುಕಟ್ಟೆಗೆ ಸಾಗಣೆ ಮಾಡಲು ಯೋಚಿಸಬೇಕಾದ ಸ್ಥಿತಿಗೆ ರೈತರು ತಲುಪಿದ್ದಾರೆ. ರಸ್ತೆ ಬದಿಯ ಕಾರ್ಮಿಕರಿಗೆ ಹಾಗೂ ಸಂಬಂಧಿಕರಿಗೆ ಹಂಚುತ್ತಿದ್ದಾರೆ.

ತಾಲ್ಲೂಕಿನ ಸುತ್ತಮುತ್ತ ಮಿಶ್ರ ಕೃಷಿಯಲ್ಲಿ ಬೀಟ್ ರೂಟ್, ಮೆಣಸಿನಕಾಯಿ, ಕಲ್ಲಂಗಡಿ ಬೆಳೆದಿದ್ದಾರೆ. ಕೆಲವರು ಅಲ್ಪಾವಧಿಯಲ್ಲಿ ಕಟಾವಿಗೆ ಬರುವ ಟೊಮೆಟೊ ಮತ್ತು ಬದನೆ ಬಿತ್ತನೆ ಮಾಡಿದ್ದಾರೆ. ಆದರೆ, ಹಬ್ಬಗಳ ಸಾಲಿನಲ್ಲೂ ತರಕಾರಿ ಬೆಳೆಗಳ ಬೇಡಿಕೆ ಹೆಚ್ಚಾಗಿಲ್ಲ. ಗುಣಮಟ್ಟದ ಫಸಲು ಬಂದರೂ ಮಾರುಕಟ್ಟೆ ತಲುಪಿಸಲೂ ಬಿಡಿಗಾಸು ಇಲ್ಲದಂತೆ ಪರಿಸ್ಥಿತಿ ಇದೆ. ಬೆಲೆ ಕುಸಿದ ಪರಿಣಾಮ ರೈತರಿಗೆ ಹಾಕಿದ ಬಂಡವಾಳವೂ ಕೈಬಿಟ್ಟು ಹೋಗುವ

ಉದಯವಾಹಿನಿ ಚಿತ್ರ


ಸ್ಥಿತಿ ತಂದಿತ್ತಿದೆ. ಕಬ್ಬಿನ ತಾಕಿನಲ್ಲಿ ಬೀಟ್‌ರೂಟ್ ಬೆಳೆದಿದ್ದೇನೆ. ಬೆಳೆಯೂ ಸಮೃದ್ಧವಾಗಿ ಬಂದಿದೆ. ದೊಡ್ಡ ಗಾತ್ರದ ಕಾಯಿಗಳು ಕೈ ಸೇರಿವೆ. ಆದರೆ, ಬೆಲೆ 1 ಕೆ.ಜಿಗೆ 6ರಿಂದ 7ಕ್ಕೆ ಇಳಿದಿದೆ. ಕೊಳ್ಳುವವರು ಹೊಲದ ಕಡೆ ತಿರುಗಿಯೂ ನೋಡುತ್ತಿಲ್ಲ. ಕೊಯ್ಲು, ಸಾಗಣೆ, ನಿರ್ವಹಣಾ ವೆಚ್ಚ ಲೆಕ್ಕ ಹಾಕಿದರೆ ಬೆಳೆದ ಸ್ಥಳದಲ್ಲಿಯೇ ಫಸಲು ಬಿಡುವಂತಾಗಿದೆ. 10 ಕ್ವಿಂಟಲ್ ಬೀಟ್‌ರೂಟ್ ಕಟಾವು ಮಾಡಿದ್ದೇನೆ ಎನ್ನುತ್ತಾರೆ ಗೂಳಿಪುರ ತರಕಾರಿ ಬೆಳೆಗಾರ ಜಯಣ್ಣ.

# ಆನ್‌ಲೈನ್ ಮಾರಾಟ; ಹೈನುಗಾರರಿಗೆ ಅನ್ಯಾಯ

• ಉದಯವಾಹಿನಿ, ಮಂಡ್ಯ

ಫ್ಲಿಪ್‌ಕಾರ್ಟ್ ಕಂಪನಿಯು ಆನ್‌ಲೈನ್‌ನಲ್ಲಿ 1ಕ್ಕೆ ಒಂದು ಲೀಟರ್ ಹಾಲು ಮಾರಾಟ ಮಾಡುವುದು ಸೇರಿದಂತೆ ಇತರೆ ಕೃಷಿ ಉತ್ಪನ್ನಗಳ ಮಾರಾಟ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ಹಾಲು ಉತ್ಪಾದಕ ರೈತರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ನಗರದ ಸರ್ ಎಂ.ವಿ. ಪ್ರತಿಮೆ ಎದುರು ಜಮಾವಣೆಗೊಂಡ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೋಟ್ಯಂತರ ಸಂಖ್ಯೆಯಲ್ಲಿ ರೈತರು, ಕೃಷಿ ಕೂಲಿಕಾರರು, ಒಂಟಿ ಮಹಿಳೆಯರು, ದಲಿತರು ಕೃಷಿಯ ಉಪ ಕಸುಬಾಗಿ ಭಾರತದಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಉದಯವಾಹಿನಿ ಚಿತ್ರ


ಕೆ.ಎಂ.ಎಫ್.ನಡಿ 25 ಲಕ್ಷ ಹಾಲು ಉತ್ಪಾದಕರು ಸಹಕಾರಿ ತತ್ವದ ಅಡಿಯಲ್ಲಿ ಹೈನುಗಾರಿಕೆಯಿಂದ ಜೀವನ ನಡೆಸುತ್ತಿದ್ದಾರೆ ಇವರಿಗೆ ಅನ್ಯಾಯ ಆಗುತ್ತಿದೆ ಎಂದು ಆರೋಪಿಸಿದರು.

ಇತ್ತೀಚಿನ ದಿನಗಳಲ್ಲಿ ಅಮೆಜಾನ್, ವಾಲ್ ಮಾರ್ಟ್, ಫ್ಲಿಪ್‌ಕಾರ್ಟ್ ಸೇರಿದಂತೆ ಹಲವು ಖಾಸಗಿ ಕಂಪನಿಗಳು ಆನ್‌ಲೈನ್ ಜಾಲದಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಕಾನೂನು ಬಾಹಿರವಾಗಿ ಅನಾರೋಗ್ಯಕರ ಸ್ಪರ್ಧೆಯಲ್ಲಿ ಪೈಪೋಟಿಗಿಳಿದು ನಂದಿನಿ ಬ್ಯಾಂಡಿನ ಹಾಲನ್ನು 1ಕ್ಕೆ ಒಂದು ಲೀಟರ್ ಹಾಲು ಮಾರಾಟ ಮಾಡುತ್ತಿರುವುದು ಕರ್ನಾಟಕದ ಲಕ್ಷಾಂತರ ಹೈನುಗಾರರನ್ನು ಸಂಕಷ್ಟಕ್ಕೆ ಗುರಿ ಮಾಡಿದೆ' ಎಂದು ಕಿಡಿಕಾರಿದರು.

ಹಾಲು ಉತ್ಪಾದಕರಿಗೆ ಡಾ.ಸ್ವಾಮಿನಾಥನ್ ಶಿಫಾರಸ್ಸಿನ ರೀತಿ ಒಂದು ಲೀಟರ್ ಹಾಲಿಗೆ ಕನಿಷ್ಠ 50 ನೀಡಬೇಕು. ಕರ್ನಾಟಕದಲ್ಲಿ ಜಾನುವಾರು ಹತ್ಯೆ ನಿಷೇಧ ಕಾಯ್ದೆ ರದ್ದುಗೊಳಿಸಬೇಕು. ಪಶು ಆಹಾರಗಳ ಬೆಲೆ ಏರಿಕೆ ನಿಯಂತ್ರಣ ಮಾಡಬೇಕು. ಹಾಲು ಉತ್ಪಾದಕರು ಮತ್ತು ಪ್ರಾಥಮಿಕ ಸಹಕಾರಿ ಸಂಘಗಳ ಹಾಗೂ ಒಕ್ಕೂಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ರಕ್ಷಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಒಕ್ಕೂಟಗಳಲ್ಲಿ ನಡೆಯುವ ಭ್ರಷ್ಟಾಚರವನ್ನು ನಿಯಂತ್ರಿಸಬೇಕು ಎಂದು ಒತ್ತಾಯಿಸಿದರು.

## ದ್ರಾಕ್ಷಿ ಬೆಳೆಗಾರರ ಕನಸು ಛಿದ್ರಗೊಳಿಸಿದ ಆಲಿಕಲ್ಲು; ಬೇಸಿಗೆ ದಿಢೀರ್ ಮಳೆಯಿಂದ ಭಾರಿ ಬೆಳೆ ನಷ್ಟ

# ಸೂಕ್ತ ಪರಿಹಾರದ ನಿರೀಕ್ಷೆಯಲ್ಲಿ ರೈತರು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಹಲವು ವರ್ಷಗಳ ನಂತರ ಈ ಬಾರಿ ಒಳ್ಳೆಯ ಫಸಲು ಬಂದಿತ್ತು. ಇನ್ನೊಂದೆರಡು ತಿಂಗಳಿದ್ದರೆ ಕೈಗೆ ಫಸಲು ಬರುತ್ತಿತ್ತು. ಆದರೆ ದಿಢೀರ್ ಎಂದು ಸುರಿದ ಆಲಿಕಲ್ಲು ಮಳೆಯಿಂದ ಇಡೀ ತೋಟ ನಾಶವಾಗಿದೆ. ದ್ರಾಕ್ಷಿ ಗೊಂಚಲಿನ ಶೇ.40ರಷ್ಟು ಕಾಯಿಗೆ ಆಲಿಕಲ್ಲು ತಗುಲಿ ಛಿದ್ರವಾಗಿವೆ. ಇನ್ನುಳಿದ ದ್ರಾಕ್ಷಿ ಹಣ್ಣಾಗುತ್ತೋ ಇಲ್ಲವೋ ಗೊತ್ತಿಲ್ಲ. ಇದು ಇತ್ತೀಚೆಗೆ ಜಿಲ್ಲೆಯ ಹಲವೆಡೆ ದಿಢೀರ್ ಎಂದು ಸುರಿದ ಬೇಸಿಗೆ ಆಲಿಕಲ್ಲು ಮಳೆಯ ಅವಾಂತರ. ಜೂನ್ ವೇಳೆಗೆ ಕೊಯ್ಲಿಗೆ ಬರುತ್ತಿದ್ದ ದ್ರಾಕ್ಷಿ ಬೆಳೆಯಲ್ಲಿ ಈಗಷ್ಟೇ ಕಾಯಾಗಿ ಬೆಳೆಯುತ್ತಿತ್ತು. ಆದರೆ ಏಕಾಏಕಿ ಸುರಿದ ಆಲಿಕಲ್ಲುಮಳೆ ಬೆಳೆಯನ್ನು ಆಪೋಶನ ತೆಗೆದುಕೊಂಡಿದೆ. ಆಲಿಕಲ್ಲುಹೊಡೆತ ವಿಷಕಾರಿಯಾಗಿರುವುದರಿಂದ ಗೊಂಚಲಿನಲ್ಲಿಉಳಿದ ಹಣ್ಣು ಉಳಿಯುವುದೇ ಅನುಮಾನ ಎನ್ನುವ ಪರಿಸ್ಥಿತಿ ಇದೆ.

**ರೋಗ ಭೀತಿ :** ಮಳೆಯ ತೇವಾಂಶ ಮತ್ತು ಆಲಿಕಲ್ಲಿನ ಪೆಟ್ಟಿನಿಂದಾಗಿ



ದ್ರಾಕ್ಷಿಯಲ್ಲಿ ನೈಟ್ರೋಜನ್ ಪ್ರಮಾಣ ಹೆಚ್ಚಾಗಿ, ಹಣ್ಣುಗಳು ಬೇಗನೆ ಕೊಳೆಯುವ ಭೀತಿ ಎದುರಾಗಿದೆ. ಇದರಿಂದ ಒಳ್ಳೆಯ ಫಸಲು ಸಿಗುವ ಬಗ್ಗೆ ಯಾವುದೇ ನಿರೀಕ್ಷೆ ಇಲ್ಲ. ಆಲಿಕಲ್ಲುಮಳೆಯಿಂದ ತೊಂದರೆಗೀಡಾದ ತೋಟಗಳ ದ್ರಾಕ್ಷಿಗೆ ಮಾರುಕಟ್ಟೆಯಲ್ಲೂ ಸಮಸ್ಯೆಯಾಗಲಿದ್ದು, ಲಕ್ಷಾಂತರ ರೂ. ಆದಾಯದ ನಿರೀಕ್ಷೆಯಲ್ಲಿದ್ದ ರೈತರಿಗೆ ದಿಕ್ಕು ತೋಚದಂತಾಗಿದೆ. ಇದರಿಂದ ಮಾವು ಬೆಳೆಗಾರರಿಗೆ ಸಮಸ್ಯೆ ಎದುರಾಗಿದೆ.

**ನಿರೀಕ್ಷೆ ಬುಡಮೇಲು :** ಜಿಲ್ಲೆಯಲ್ಲಿ ಸುಮಾರು 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯುತ್ತಿದ್ದು, ಕೆಲವು ವರ್ಷಗಳಿಂದ ಬೆಲೆ ಏರಿಳಿತದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಬಾರಿ ತೋಟಗಳಲ್ಲಿ ಉತ್ತಮ ಫಸಲು ಬಂದಿತ್ತು. ಆದರೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಚಿಂತಾಮಣಿ ವ್ಯಾಪ್ತಿಯಲ್ಲಿ ಸುರಿದ ಬೇಸಿಗೆ ಆಲಿಕಲ್ಲುಮಳೆ ರೈತರ ನಿರೀಕ್ಷೆಯನ್ನು ಬುಡಮೇಲು ಮಾಡಿದೆ. ಸದ್ಯ ಆಲಿಕಲ್ಲುಮಳೆಯಿಂದ ಹಾಳಾಗಿ ಉಳಿದಿರುವ ಬೆಳೆಯನ್ನು ಉಳಿಸಿಕೊಳ್ಳುವುದು ರೈತರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಜಿಲ್ಲಾದ್ಯಂತ ಈಗಾಗಲೇ ತೋಟಗಾರಿಕೆ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಬೆಳೆ ಹಾನಿ ವರದಿಯನ್ನು ತಯಾರಿಸಲು ಸೂಚನೆ ನೀಡಲಾಗಿದೆ. ಇಲಾಖೆಗಳಿಂದ ವರದಿ ಬಂದ ನಂತರ ಬೆಳೆ ಹಾನಿ ಪ್ರಮಾಣವನ್ನು ಆಧರಿಸಿ ಪರಿಹಾರ ಸಿಗಲಿದೆ. ಆದರೆ ಸರಕಾರ ನೀಡುವ ಅಲ್ಪ ಪರಿಹಾರ ರೈತರಿಗೆ ಎಷ್ಟರ ಮಟ್ಟಿಗೆ ನೆರವಾಗಲಿದೆ ಎಂಬುದೇ ಈಗ ಪ್ರಶ್ನೆ.

**ಕೆಲವು ವರ್ಷಗಳಿಂದ ಸರಿಯಾಗಿ ದ್ರಾಕ್ಷಿ ಬೆಳೆ ಬಂದಿರಲಿಲ್ಲ. ಈ ಬಾರಿ ಒಳ್ಳೆಯ ಫಸಲು ಬಂದಿತ್ತು. ಆದರೆ ಆಲಿಕಲ್ಲುಮಳೆ ಬಿದ್ದು ಎಲ್ಲಾ ದ್ರಾಕ್ಷಿ ಗೊಂಚಲುಗಳು ಡ್ಯಾಮೇಜ್ ಆಗಿವೆ. ಹಾಳಾಗಿರುವ ಹಣ್ಣುಗಳನ್ನು ಕೀಳಬೇಕು. ಉಳಿದ ದ್ರಾಕ್ಷಿ ಸರಿಯಾಗಿ ಹಣ್ಣಾಗುತ್ತಾ ಎನ್ನುವ ಅನುಮಾನವೂ ಇದೆ. ಲಕ್ಷಾಂತರ ರೂ. ಬಂಡವಾಳ ಹಾಕಿದ್ದೇವೆ. ಆದರೆ ಆಲಿಕಲ್ಲುಮಳೆ ಎಲ್ಲವನ್ನು ಹಾಳು ಮಾಡಿದೆ.**

**-ವೆಂಕಟೇಶ್, ದ್ರಾಕ್ಷಿ ಬೆಳೆಗಾರ**

**ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಗೌರಿಬಿದನೂರು, ಚಿಂತಾಮಣಿ ತಾಲ್ಲೂಕುಗಳಲ್ಲಿ ಪ್ರಮುಖ ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ಮಾವು, ದಾಳಿಂಬೆ ಮತ್ತು ತರಕಾರಿ ಬೆಳೆಗಳಿಗೆ ಆಲಿಕಲ್ಲು ಮಳೆಯಿಂದ ನಷ್ಟ ಸಂಭವಿಸಿದೆ. ತಹಶೀಲ್ದಾರ್ ಮತ್ತು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಂಡಗಳನ್ನು ರಚಿಸಿ ಜಂಟಿ ಸಮೀಕ್ಷೆ ಕೈಗೊಂಡು, ಮಹಜರ್‌ನೊಂದಿಗೆ ಛಾಯಾಪ್ರತಿ, ವಿಡಿಯೋದೊಂದಿಗೆ ವರದಿ ನೀಡಲು ಸೂಚನೆ ನೀಡಲಾಗಿದೆ.**

**-ಜಿ. ಪ್ರಭು, ಜಿಲ್ಲಾಧಿಕಾರಿ**

**ಜಿಲ್ಲಾದ್ಯಂತ ಸುರಿದ ಆಲಿಕಲ್ಲು ಸಹಿತ ಭಾರಿ ಬಿರುಗಾಳಿ ಮಳೆಯಿಂದ ದ್ರಾಕ್ಷಿ, ಮಾವು, ಹೂವು, ಹಣ್ಣು, ತರಕಾರಿ ಸೇರಿದಂತೆ ಕೋಟ್ಯಂತರ ಮೌಲ್ಯದ ಬೆಳೆ ಹಾನಿಯಾಗಿದೆ. ಹೀಗಾಗಿ ರಾಜ್ಯ ಸರಕಾರ ಕೂಡಲೇ ಜಂಟಿ ಸಮೀಕ್ಷೆ ನಡೆಸಿ ರೈತರಿಗೆ ಪರಿಹಾರ ಕೊಡುವ ಕೆಲಸ ಮಾಡಬೇಕು. ಬೆಳೆ ಹಾನಿ ವರದಿಗಾಗಿ ತಿಂಗಳುಗಟ್ಟಲೆ ಕಾಯಿಸದೆ, ಆದಷ್ಟು ಬೇಗ ವೈಜ್ಞಾನಿಕವಾಗಿ ಬೆಳೆ ನಷ್ಟವನ್ನು ಅಂದಾಜಿಸಿ ರೈತರ ಬ್ಯಾಂಕ್ ಖಾತೆಗೆ ಪರಿಹಾರಧನವನ್ನು ಜಮೆ ಮಾಡಬೇಕು. ವಿಶೇಷವಾಗಿ ದ್ರಾಕ್ಷಿ ಬೆಳೆಯ ವೆಚ್ಚ ಅಧಿಕವಾಗಿರುವುದರಿಂದ ಹಾನಿಗೊಳಗಾದ ದ್ರಾಕ್ಷಿ ಬೆಳೆಗಾರರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು.**

**-ಡಾ. ಕೆ.ಸುಧಾಕರ್, ಸಂಸದ**

ಅಂತರಾಳದಿಂದ..
EDITORIAL

# ಮರ್ಯಾದೆಗೇಡು ಹತ್ಯೆ ತಡೆ ಯತ್ನ 'ಇವ ನಮ್ಮವ' ಮಸೂದೆ ಸಕಾಲಿಕ

ಮರ್ಯಾದೆಯ ಹೆಸರಿನಲ್ಲಿ ನಡೆಯುವ ಮರ್ಯಾದೆಗೇಡು ಹತ್ಯೆಗಳು ಉತ್ತರ ಭಾರತಕ್ಕೆ ಸೀಮಿತವಾದ ವಿದ್ಯಮಾನಗಳು ಹಾಗೂ ಅವು ದಕ್ಷಿಣ ಭಾರತಕ್ಕೆ ಅಪರಿಚಿತವಾಗಿರುವ ಸಾಮಾಜಿಕ ಹಿಂದುಳಿದಿರುವಿಕೆಯ ಫಲಶ್ರುತಿ ಎಂದು ಇದುವರೆಗೂ ನಂಬಲಾಗಿತ್ತು. ಈ ನಂಬಿಕೆ ಸುಳ್ಳು ಎನ್ನುವುದನ್ನು ಗೃಹ ಸಚಿವ ಜಿ. ಪರಮೇಶ್ವರ ಅವರು ನೀಡಿರುವ ಅಂಕಿಅಂಶಗಳು ಸಾಬೀತುಪಡಿಸುವಂತಿವೆ. 2021ರಿಂದ 2025ರ ಅವಧಿಯಲ್ಲಿ ರಾಜ್ಯದಲ್ಲಿ ಕನಿಷ್ಠ 15 ಮರ್ಯಾದೆಗೇಡು ಹತ್ಯೆಗಳು ದಾಖಲಾಗಿವೆ ಎಂದು ಗೃಹ ಸಚಿವರು ತಿಳಿಸಿರುವುದು, ಜಾತಿ, ಪಿತೃಪ್ರಧಾನ ವ್ಯವಸ್ಥೆ ಎಲ್ಲೆಡೆಯೂ ಜಾಗೃತಗೊಂಡಿರುವುದಕ್ಕೆ ಉದಾಹರಣೆಯಂತಿದೆ. ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ ಮಾನ್ಯ ಎನ್ನುವ 19 ವರ್ಷದ ಯುವತಿಯನ್ನು ಆಕೆಯ ತಂದೆ ಹಾಗೂ ಸಂಬಂಧಿಕರು ಕೊಲೆ ಮಾಡಿರುವ ಘಟನೆ ಇತ್ತೀಚೆಗಷ್ಟೇ ಹುಬ್ಬಳ್ಳಿ ತಾಲ್ಲೂಕಿನಲ್ಲಿ ನಡೆದಿದೆ.




ಪ್ರಗತಿಪರ ಮನೋಧರ್ಮ ಹಾಗೂ ವಿಚಾರಗಳನ್ನು ಹೆಮ್ಮೆಯಿಂದ ಪ್ರತಿಪಾದಿಸುವ ನಾಡಿನಲ್ಲಿ ಇಂಥ ಅಪರಾಧ ಕೃತ್ಯಗಳು ನಡೆಯುತ್ತಿರುವುದು ನೈತಿಕ ಅಧಃಪತನದ ಸಂಕೇತವಾಗಿದೆ. ಸಮಾನತೆಯನ್ನು ಸಾರಿದ ಹಾಗೂ 'ಇವ ನಮ್ಮವ' ಎನ್ನುವ ಬಹುತ್ವದ ತಾತ್ವಿಕತೆಯನ್ನು ಪ್ರತಿಪಾದಿಸಿದ ಬಸವಣ್ಣನ ನಾಡಿನಲ್ಲಿ ಮರ್ಯಾದೆಯ ಹೆಸರಿನಲ್ಲಿ ಕೊಲೆಗಳು ನಡೆಯುತ್ತಿರುವುದು ದುರದೃಷ್ಟಕರ. ಈ ಘೋರ ವಾಸ್ತವವೇ, 'ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ-2026' ರೂಪಿಸುವ ಅನಿವಾರ್ಯತೆಯನ್ನು ಸಿದ್ದರಾಮಯ್ಯ ಸರ್ಕಾರಕ್ಕೆ ಸೃಷ್ಟಿಸಿದೆ. ವಿವಾಹದ ಕೇಂದ್ರದಲ್ಲಿ ವೈಯಕ್ತಿಕ ಸ್ವಾಯತ್ತತೆಯನ್ನು ಗುರ್ತಿಸುವ ಮೂಲಕ, ಮರ್ಯಾದೆಯ ಹೆಸರಿನಲ್ಲಿ ನಡೆಯುವ ಅಪರಾಧಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸುವ ಈ ಮಸೂದೆಯನ್ನು ಸರ್ಕಾರ ವಿಧಾನಸಭೆ ಯಲ್ಲಿ ಮಂಡಿಸಿದೆ. ಜಾತಿ ಮೀರಿ ಪ್ರೀತಿಸಿ ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶವನ್ನು ಮಸೂದೆ ಹೊಂದಿದೆ. ರಾಜ್ಯದಲ್ಲಿ ಮಾತ್ರವಲ್ಲ, ದೇಶವ್ಯಾಪಿ ಯಾಗಿಯೂ ಈ ಸಮಸ್ಯೆ ಆಳವಾಗಿ ಬೇರೂರಿದೆ. ಮಾನವ ಹಕ್ಕುಗಳ ಸಂಘಟನೆಗಳು, ನಾಗರಿಕ ಸಮಾಜದ ವರದಿಗಳಿಗಿಂತಲೂ ಅಧಿಕೃತ ಅಂಕಿಅಂಶಗಳು ಸಮಸ್ಯೆಯ ತೀವ್ರತೆ ಯನ್ನು ಕಡಿಮೆ ಅಂದಾಜು ಮಾಡುವಂತಿವೆ. ಮರ್ಯಾದೆಗೇಡು ಹತ್ಯೆಗಳಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಮಧ್ಯಪ್ರದೇಶ, ಜಾರ್ಖಂಡ್, ಪಂಜಾಬ್ ಹಾಗೂ ಹರಿಯಾಣದಲ್ಲೂ ಗಣನೀಯ ಪ್ರಮಾಣದಲ್ಲಿ ಮರ್ಯಾದೆಗೇಡು ಹತ್ಯೆಗಳು ಸಂಭವಿಸುತ್ತಿವೆ. ಇಂಥ ಯಾವುದೇ ಘಟನೆ ತಮಿಳುನಾಡಿನಲ್ಲಿ ಸಂಭವಿಸಿಲ್ಲ ಎಂದು ಅಧಿಕೃತ ಮಾಹಿತಿ ಹೇಳುತ್ತಿದ್ದರೂ, ಐದು ವರ್ಷಗಳ ಅವಧಿಯಲ್ಲಿ ಇನ್ನೂರು ಮರ್ಯಾದೆಗೇಡು ಹತ್ಯೆಗಳು ಸಂಭವಿಸಿರುವುದನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಸಂಸ್ಥೆಗಳು ದಾಖಲಿಸಿವೆ. ನಿರಂತರವಾಗಿ ನಡೆಯುತ್ತಿರುವ ಈ ಹತ್ಯೆಗಳು, ಸಾಂವಿಧಾನಿಕ ಹಕ್ಕುಗಳು ಹಾಗೂ ಆಳವಾಗಿ ಬೇರು ಬಿಟ್ಟಿರುವ ಸಾಮಾಜಿಕ ಅನಿಷ್ಟ ಪದ್ಧತಿಗಳ ನಡುವಿನ ಘರ್ಷಣೆಯನ್ನು ಸಂಕೇತಿಸುವಂತಿವೆ.

ಮರ್ಯಾದೆಗೇಡು ಹತ್ಯೆಗಳನ್ನು ತಡೆಯುವ ನಿಜವಾದ ಸವಾಲು ಇರುವುದು ಹೊಸ ಕಾನೂನಿಗೆ ಸಂಬಂಧಿಸಿದಂತಲ್ಲ, ಅದರ ಅನುಷ್ಠಾನದಲ್ಲಿ. ತನಿಖೆಗಳು ದುರ್ಬಲವಾಗಿದ್ದಾಗ, ವಿಚಾರಣೆ ವಿಳಂಬವಾದಾಗ ಹಾಗೂ ಶಿಕ್ಷೆ ಖಚಿತ ಎನ್ನುವ ಪರಿಸ್ಥಿತಿ ಇಲ್ಲದೆ ಹೋದಾಗ ಕಾನೂನು ಎಷ್ಟೇ ಪ್ರಗತಿಪರವಾಗಿದ್ದರೂ ಅದು ಸಾಂಕೇತಿಕವಾಗಿಯಷ್ಟೇ ಉಳಿದುಬಿಡುತ್ತದೆ. ತ್ವರಿತ ಹಾಗೂ ನಿಶ್ಚಿತ ಶಿಕ್ಷೆಯೇ ಅಪರಾಧವನ್ನು ತಡೆಗಟ್ಟುವಲ್ಲಿ ವಿಶ್ವಾಸಾರ್ಹ ದಾರಿಯಾಗಿದೆ. ಕಾನೂನು ಅನುಷ್ಠಾನದ ಜೊತೆಗೆ ಕರ್ನಾಟಕ ತನ್ನದೇ ಆದ ಬೌದ್ಧಿಕ ಹಾಗೂ ನೈತಿಕ ಪರಂಪರೆ ಹೊಂದಿರುವುದನ್ನು ಗಮನಿಸಬೇಕು. ರಾಷ್ಟ್ರಕವಿ ಕುವೆಂಪು ಅವರ 'ವಿಶ್ವಮಾನವ ಸಂದೇಶ'ವು ಮತೀಯ ಹಾಗೂ ಧಾರ್ಮಿಕ ಸಂಕೇತಗಳಿಂದ ಹೊರಬಂದು, ಮಾನವೀಯ ಮೌಲ್ಯಗಳನ್ನು ಬುನಾದಿಯಾಗುಳ್ಳ ಸಮಾಜದ ಪರಿಕಲ್ಪನೆಯನ್ನು ಹೊಂದಿದೆ. ಮರ್ಯಾದೆಗೇಡು ಹತ್ಯೆಗಳಂಥ ಹಿಂಸಾತ್ಮಕ ಘಟನೆಗಳಿಗೆ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ಕುವೆಂಪು ಅವರ ಆದರ್ಶ ಪ್ರಬಲ ಪ್ರತಿರೋಧ ಆಗಬಲ್ಲದು. ಬಸವಣ್ಣ ಮತ್ತು ಕುವೆಂಪು ಅವರ ಸಮಾನತೆ-ಸೌಹಾರ್ದದ ಆದರ್ಶಗಳನ್ನು ಕರ್ನಾಟಕ ಅಳವಡಿಸಿಕೊಳ್ಳಬೇಕಾದರೆ, ಸಾಮಾಜಿಕ-ಸಾಂಪ್ರದಾಯಿಕ ಪೂರ್ವಗ್ರಹಗಳಿಂದ ಹೊರಬರುವುದು ಅಗತ್ಯ. ಕಾನೂನುಗಳು ಅಪರಾಧಿಗಳನ್ನು ಶಿಕ್ಷಿಸಬಹುದು. ಆದರೆ, ಸಮಾನತೆ, ಆತ್ಮಗೌರವ ಹಾಗೂ ಸಾಂವಿಧಾನಿಕತೆಯನ್ನು ಒಳಗೊಂಡ ಸಾಮಾಜಿಕ ಪರಿವರ್ತನೆಯಷ್ಟೇ ನೈಜ ಬದಲಾವಣೆಯನ್ನು ತರಬಲ್ಲದು.

# ರಾಮಾಯಣ



ಅಂಗದಾದಿಗಳು ಸೀತಾದೇವಿಯನ್ನು ಕಾಣದೆ ಚಿಂತಿಸಿದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಆ ಮಾತನ್ನು ಕೇಳಿ ಅಲ್ಲಿದ್ದ ಕಪಿನಾಯಕರು ದೈನ್ಯದಿಂದ ಅಂಗದಕುಮಾರನನ್ನು ಕುರಿತು ಅಂಗದಕುಮಾರ, ಸುಗ್ರೀವನು ಸ್ವಭಾವದಿಂದ ಕ್ರೂರಬುದ್ಧಿಯುಳ್ಳವನು. ಶ್ರೀರಾಮನಿಗೆ ಪ್ರಿಯಭಕ್ತನು. ಆತನು ಹೇಳಿದ ಸಮಯವು ಮೀರಿತು. ಸೀತಾದೇವಿಯನ್ನು ಕಾಣದೆ ನಾವು ಆತನ ಬಳಿಗೆ ಹೋದರೆ ಆತನು ಶ್ರೀರಾಮನಿಗೆ ತನ್ನ ವಿಶ್ವಾಸವನ್ನು ತೋರಿಸಬೇಕೆಂದು ನಮ್ಮನ್ನು ಕೊಲ್ಲಿಸುವನು. ಸಂಶಯವಿಲ್ಲ. ಲೋಕದಲ್ಲಿ ಅಪರಾಧವನ್ನು ಮಾಡಿದವರು ಒಡೆಯನ ಸಮೀಪಕ್ಕೆ ಹೋಗುವುದು ಯೋಗ್ಯವಲ್ಲ. ನಾವು ಸುಗ್ರೀವನ ಬಳಿ ಪ್ರಧಾನವಾದ ಅಧಿಕಾರದಲ್ಲಿ ಇರತಕ್ಕವರು. ನಾವು ಇಲ್ಲಿಯೇ ಇದ್ದು ಸೀತಾದೇವಿಯನ್ನರಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕು. ಸೀತಾದೇವಿಯನ್ನು ಕಾಣದೆ ಸುಮ್ಮನೆ ಹೋದರೆ ಯಮಲೋಕ ನನ್ನೈದುವೆವು ಎಂದು ನುಡಿದರು. ಆ ಮಾತನ್ನು ಕೇಳಿ ತಾರನು ಎಲೈ ಕಪಿನಾಯಕರುಗಳಿರಾ, ನನ್ನದೊಂದು ಯೋಚನೆಯನ್ನು ಕೇಳಿ. ನೀವು ದುಃಖವನ್ನು ಬಿಡಿ. ದಾನವಶಿಲ್ಪಿಯಾದ ಮಯನಿಂದ ನಿರ್ಮಿಸಲ್ಪಟ್ಟು ಪ್ರಾಣಿಗಳಿಗೆ ಪ್ರವೇಶ ಮಾಡುವುದಕ್ಕೆ ಅಸಾಧ್ಯವಾದ ಮನೋಹರವಾದ ವೃಕ್ಷಗಳೂ ಕಂದಮೂಲಫಲ ಸ್ವಾದೂದಕಗಳೂ ಇರುವ ಆ ಬಿಲವನ್ನು ಪ್ರವೇಶಿಸಿ ಸುಖದಲ್ಲಿರೋಣ. ಆ ಬಿಲದಲ್ಲಿದ್ದರೆ ದೇವೇಂದ್ರನಿಂದಲಾ ದರೂ ಶ್ರೀರಾಮನಿಂದಲಾದರೂ ಸುಗ್ರೀವನಿಂದಲಾದರೂ ನಮಗೆ ಭಯವಿಲ್ಲ ಎಂದು ನುಡಿದನು.


## ಹನುಮಂತನು ಅಂಗದನಿಗೆ ಹೇಳಿದ ಬುದ್ಧಿವಾದ

ಕೂಡಿರುವ ಆ ಬಳಿಕ ಹನುಮಂತನು ಅಂಗದಕುಮಾರನ ಬುದ್ಧಿಚಾತುರ್ಯವನ್ನು ನೋಡಿ ಆತನಿಗೆ ಸರ್ವಥಾ ರಾಜ್ಯಲಕ್ಷ್ಮಿಯು ಕೈ ಸಾರಿದಳೆಂದು ನಿಶ್ಚಯಿಸಿದನು. ಅಂಗದನು ಅಷ್ಟಗುಣೋಪೇತವಾದ ಬುದ್ಧಿಯಿಂದಲೂ ಚತುರುಪಾಯಗಳಿಂದಲೂ ಚತುರ್ದಶಗುಣಗಳಿಂದಲೂ ನೆಂದು ತಿಳಿದುಕೊಂಡನು. ಅಂಗದನಾದರೋ ಬುದ್ಧಿಯಲ್ಲಿ ಬೃಹಸ್ಪತಿಗೂ ಕಾರ್ಯದಲ್ಲಿ ತಂದೆಯಾದ ವಾಲಿಗೂ ಸಮಾನನು. ಸ್ವಾಮಿಯಾದ ಸುಗ್ರೀವನ ಆಜ್ಞೆಯನ್ನು ಪಾಲಿಸು ವುದಕ್ಕಾಗಿ ಅತ್ಯಂತ ಶ್ರಮಿಸಿದವನು. ಅವನನ್ನು ನೋಡಿ ಹನುಮಂತನು ಈ ಕುಮಾರನು ಯೋಗ್ಯನೆಂದು ನಿರ್ಣಯಿಸಿದನು. ಮೊದಲು ತನ್ನ ವಾಕ್ಚಾತುರ್ಯದಿಂದ ಕಪಿಗಳಲ್ಲಿಯೇ ಉಪವಾಸದ ವಿಷಯದಲ್ಲಿ ಅಭಿಪ್ರಾಯಭೇದವನ್ನು ಹುಟ್ಟಿಸಿ, ಅನಂತರ ಅಂಗದನಿಗೆ ಈ ರೀತಿ ಬುದ್ಧಿವಾದವನ್ನು ಹೇಳಿದನು ಅಂಗದ, ನೀನು ಯುದ್ಧರಂಗವನ್ನು ಕಂಡರೆ ಹರ್ಷದಿಂದ ಯುದ್ಧ ಮಾಡುವುದಕ್ಕೆ ನುಗ್ಗತಕ್ಕವನು. ನಿನ್ನ ತಂದೆಯಾದ ವಾಲಿಯಂತೆ ಕಪಿರಾಜ್ಯದ ಭಾರವನ್ನು ವಹಿಸುವುದಕ್ಕೆ ಸಮರ್ಥನು. ಈ ಕಪಿಗಳು ಯಾವಾಗಲೂ ಸ್ಥಿರಬುದ್ಧಿಯುಳ್ಳವರಲ್ಲ. ಸ್ತ್ರೀಯರೂ ಮಕ್ಕಳೂ ಇರತಕ್ಕ ಈ ಕಪಿನಾಯಕರು ನಿನ್ನ ಮಾತನ್ನು ಕೇಳುವವರಲ್ಲ, ಜಾಂಬವಂತ ನೀಲ ಸುಹೋತ್ರ ಮೊದಲಾದವರು ಸಾಮದಾನಾದಿ ಉಪಾಯಗಳಿಂದ ಸಾಧ್ಯವಾಗುವವರಲ್ಲ. ಇವರನ್ನು ದಂಡದಿಂದ ಸಾಧ್ಯಮಾಡುವುದಕ್ಕೂ ಆಗದು. ಇವರೆಲ್ಲರೂ ಸುಗ್ರೀವನಲ್ಲಿ ನಿಷ್ಠೆಯಿಂದ ಇದ್ದಾರೆ.

ನೀನು ತಾರನ ಮಾತನ್ನು ಕೇಳಿ ಸುಗ್ರೀವನ ಬಳಿಗೆ ಹೋಗದೆ ಈ ಬಿಲದಲ್ಲಿ ಮರೆಮಾಚಿ ಕೊಂಡಿರುವುದು ನ್ಯಾಯವಲ್ಲ, ಸುಗ್ರೀವನು ಬಲವಂತನು. ಆತನಿಗಿಂತಲೂ ನೀನು ಬಲಹೀನನು. ಬಲಹೀನನಾದವನು ಬಲವಂತನೊಡನೆ ವಿರೋಧವನ್ನು ಮಾಡಿಕೊಂಡು ಅದನ್ನು ಮರೆತಿರುವುದು. ಯೋಗ್ಯವಲ್ಲ. ಈ ಗುಹೆಯು ದೇವೇಂದ್ರನಿಗಾದರೂ ಶ್ರೀರಾಮನಿಗಾದರೂ ಸುಗ್ರೀವನಿಗಾದರೂ ಸಾಧ್ಯವಲ್ಲವೆಂದು ತಾರನು ನುಡಿದನು. ಈ ಗುಹೆಯನ್ನು ಒಡೆದುಹಾಕುವುದಕ್ಕೆ ಲಕ್ಷ್ಮಣನ ಬಾಣಗಳು ಸಮರ್ಥವಾಗಿವೆ.

ಮುಂದುವರಿಯುವುದು...

# ಶ್ರೀರಾಮ ನವಮಿ



ರಾಮ ರಾಮ ರಾಮ ಎಂದು ಮೂರು ಬಾರಿ ಉಚ್ಚರಿಸಿದರೆ ಸಹಸ್ರನಾಮ ಪಾರಾಯಣದ ಫಲ ದೊರೆಯುತ್ತದೆ ಎಂದು ರಾಮರಕ್ಷಾ ಸ್ತೋತ್ರ ಹೇಳುತ್ತದೆ. ವಿಷ್ಣು ಸಹಸ್ರನಾಮದಲ್ಲಿಯೂ ಪಾರ್ವತಿ ದೇವಿ ಕೇಳಿದ ಪ್ರಶ್ನೆಗೆ ಶಿವನು 'ಶ್ರೀರಾಮ ರಾಮ ರಾಮೇತಿ?' ಎಂದು ಉತ್ತರಿಸಿ ರಾಮನಾಮದ ಮಹಿಮೆ ವಿವರಿಸುತ್ತಾನೆ. ಅಂದರೆ ರಾಮನಾಮವೇ ಸಹಸ್ರನಾಮಗಳಿಗೆ ಸಮಾನವಾಗಿದೆ. ರಾಮನಾಮದೊಳಗೆ ನಮ್ಮ ಪೂರ್ವಿಕರ ಜ್ಞಾನವೂ ಅಡಗಿದೆ. '10× 10× 10 = 1000' ಎಂಬ ಗಣಿತದ ತತ್ವದಂತೆ, ರಾಮನಾಮವನ್ನು ಮೂರು ಬಾರಿ ಜಪಿಸಿದರೆ ಸಹಸ್ರನಾಮದ ಫಲ ದೊರೆಯುತ್ತದೆ ಎಂಬ ಭಾವನೆ ವ್ಯಕ್ತವಾಗುತ್ತದೆ. ಇದು ಭಾರತೀಯ ಸಂಸ್ಕೃತಿಯ ಆಳವಾದ ತತ್ತ್ವಜ್ಞಾನವನ್ನು ತೋರಿಸುತ್ತದೆ. ಭಗವಂತನ ಒಂದು ನಾಮವೇ ಅನೇಕ ರೂಪಗಳಿಗೆ ಸಮಾನ. 'ಸತತಮೇವ ರೂಪಿಣೆ?' ಎಂಬ ತತ್ತ್ವದಂತೆ, ಒಂದು ನಾಮದಲ್ಲಿ ಸಾವಿರ ರೂಪಗಳ ಸಾರ್ಥಕತೆ ಅಡಗಿದೆ. ಆದ್ದರಿಂದ ದಿನವೂ ಕನಿಷ್ಠ ಒಮ್ಮೆ ರಾಮನಾಮ ಜಪ ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ರಾಮ ಎಂಬ ಪದದಲ್ಲಿರುವ 'ರಾ' ಮತ್ತು 'ಮ' ಎಂಬ ಎರಡು ಅಕ್ಷರಗಳಿಗೂ ವಿಶಿಷ್ಟ ಮಹತ್ವವಿದೆ. 'ರಾ' ಎಂಬುದು ನಾಭಿಯಿಂದ ಹೊರಹೊಮ್ಮುವ ನಾದ. ಇದನ್ನು ಉಚ್ಚರಿಸಿದಾಗ ಬಾಯಿ ಸ್ವಯಂ ತೆರೆದುಕೊಳ್ಳುತ್ತದೆ. ಇದು ಒಳಗಿನ ಪಾಪ, ಕಲ್ಮಷಗಳನ್ನು ಹೊರಗೆ ತರುವ ಸಂಕೇತವಾಗಿದೆ. ಇನ್ನೊಂದು ಅಕ್ಷರ 'ಮ' ತುಟಿಗಳನ್ನು ಮುಚ್ಚಿ ಉಚ್ಚರಿಸಬೇಕಾಗುತ್ತದೆ. ಇದು ಹೊರಗೆ ಬಂದ ದೋಷಗಳು ಮತ್ತೆ ಒಳಗೆ ಪ್ರವೇಶಿಸದಂತೆ ತಡೆಯುವ ಅರ್ಥವನ್ನು ಸೂಚಿಸುತ್ತದೆ. ಈ ರೀತಿಯಾಗಿ 'ರಾ' ಪಾಪಗಳನ್ನು ಹೊರಗೆ ತಂದು, 'ಮ' ಅವುಗಳನ್ನು ನಾಶಗೊಳಿಸುವ ಶಕ್ತಿಯನ್ನು ಹೊಂದಿದೆ. ಆದರಂತೆ ರಾಮನಾಮ ಜಪವು ಪಾಪಕ್ಷಯ, ಅಪಮೃತ್ಯು ನಿವಾರಣೆ, ಮನಃಶುದ್ಧಿಗೆ ದಾರಿ ಮಾಡಿಕೊಡುತ್ತದೆ. ನಾಮಸ್ಮರಣೆ, ಜಪ, ತಪಗಳಿಗೆ ಯಾವುದೇ ಜಾತಿ, ಮತ ಭೇದಗಳಿಲ್ಲ. ಯಾರು ಬೇಕಾದರೂ ಇದನ್ನು ಅನುಸರಿಸಬಹುದು.

ನಮ್ಮ ದೇಶದಾದ್ಯಂತ ರಾಮನ ಪ್ರಭಾವವಿದ್ದು, ಮನೆಮನೆಗೂ ರಾಮನಾಮ ಪ್ರತಿಧ್ವನಿಸುತ್ತದೆ. ಆದ್ದರಿಂದ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನನ್ನು ದಿನವೂ ಸ್ಮರಿಸುವುದು ನಮ್ಮ ಧರ್ಮವೂ ಆಗಿದೆ.

**ಧರ್ಮೋ ರಕ್ಷತಿ ರಕ್ಷಿತಃ**
**ಕೃಷ್ಣಾರ್ಪಣಮಸ್ತು**
**ಸರ್ವಜನಾಃ ಸುಖಿನೋಭವತು**



ವಿಶ್ವಾಸ್. ಡಿ.ಗೌಡ

• ಉದಯವಾಹಿನಿ, ವಿಶೇಷ

# ಬೇಸಿಗೆಯಲ್ಲಿ ದೇಹವನ್ನು ತಂಪಾಗಿರಿಸಲು ಕರ್ಬೂಜ ಜ್ಯೂಸ್ ಕುಡಿಯಿರಿ



ಬೇಸಿಗೆಯಲ್ಲಿ ಜನರು ತಮ್ಮ ದಾಹವನ್ನು ತೀರಿಸಿಕೊಳ್ಳಲು ಹೆಚ್ಚಾಗಿ ಜ್ಯೂಸ್‌ಗಳ ಮೊರೆಹೋಗುತ್ತಾರೆ. ಬೇಸಿಗೆಯಲ್ಲಿ ಸೇಲ್ ಆಗುವ ಜ್ಯೂಸ್‌ಗಳ ಪೈಕಿ ಕರ್ಬೂಜ ಜ್ಯೂಸ್ ಕೂಡ ಒಂದು. ಇದು ನಮ್ಮ ದೇಹವನ್ನು ತಂಪಾಗಿರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲದೇ ರಕ್ತದೊತ್ತಡ ನಿಯಂತ್ರಿಸುವಲ್ಲಿ ಸಹಕಾರಿ ಕೂಡ. ಹಾಗಿದ್ರೆ ಸುಲಭವಾಗಿ ರುಚಿಕರ ಹಾಗೂ ಆರೋಗ್ಯಕರ ಕರ್ಬೂಜ ಜ್ಯೂಸ್ ಯಾವ ರೀತಿ ಮಾಡುವುದು ಎಂಬುದನ್ನು ನಾವು ಇಂದು ತಿಳಿಸಿಕೊಡುತ್ತೇವೆ.

## ಬೇಕಾಗುವ ಸಾಮಗ್ರಿಗಳು

- ಕರ್ಬೂಜ 1 ಕಪ್
- ಹಾಲು 1 ಕಪ್
- ಸಕ್ಕರೆ/ಬೆಲ್ಲ ರುಚಿಗೆ ತಕ್ಕಷ್ಟು
- ನೀರು ಅಗತ್ಯಕ್ಕೆ ತಕ್ಕಷ್ಟು



## ಮಾಡುವ ವಿಧಾನ

- ಮೊದಲಿಗೆ ಬೀಜ ತೆಗೆದ ಕರ್ಬೂಜ ಹಣ್ಣನ್ನು ಮಿಕ್ಸರ್ ಜಾರಿಗೆ ಹಾಕಿ.
- ಬಳಿಕ ಅದಕ್ಕೆ 1 ಕಪ್ ಹಾಲು ಹಾಕಿ.
- ನಂತರ ಅದಕ್ಕೆ ಅಗತ್ಯಕ್ಕೆ ತಕ್ಕಷ್ಟು ನೀರು ಹಾಗೂ ರುಚಿಗೆ ತಕ್ಕಷ್ಟು ಸಕ್ಕರೆ ಅಥವಾ ಬೆಲ್ಲ ಹಾಕಿ ಚೆನ್ನಾಗಿ ರುಬ್ಬಿಕೊಳ್ಳಿ.
- ಬಳಿಕ ರುಬ್ಬಿದ ಜ್ಯೂಸ್ ಅನ್ನು ಗ್ಲಾಸ್‌ಗೆ ವರ್ಗಾಯಿಸಿಕೊಳ್ಳಿ.
- ಈಗ ತಂಪಾದ ಕರ್ಬೂಜ ಜ್ಯೂಸ್ ಕುಡಿಯಲು ಸಿದ್ಧ.
- ಸಣ್ಣದಾಗಿ ಹೆಚ್ಚಿದ ಡ್ರೈಫ್ರೂಟ್ಸ್‌ನಿಂದ ಜ್ಯೂಸ್ ಅನ್ನು ಅಲಂಕರಿಸಬಹುದು.

## ದಿನಕ್ಕೊಂದು ಮುಕ್ತಕ :114



ಸಾಮಾಜಿಕ ಕಳಕಳಿ

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

**ವಿಸ್ಮಯವು ನೂರೆಂಟು ಜೀವನದಿ ಗೋಚರಿಸೆ**
**ಕಾಶ್ಮೀರಕಿಂತ ಎತ್ತರಕೆ ಬೆಳೆವೆ**
**ರಶ್ಮಿಯನು ಚೆಲ್ಲುತಿಹ ಹೊಂಗಿರಣ ಕಂಡಾಗ**
**ರೇಷ್ಮೆಯಂದದಿ ಹೊಳಪು ಲಕ್ಷ್ಮಿದೇವಿ**

**ಭಾವಾರ್ಥ:** ಜೀವನದಲ್ಲಿ ಬಹಳಷ್ಟು ಕಷ್ಟಗಳನ್ನ ಅನುಭವಿಸುತ್ತೇವೆ. ನಾವು ಬಹಳಷ್ಟು ಪರಿಶ್ರಮವನ್ನು ಪಟ್ಟು ಕೆಲಸವನ್ನು ಮಾಡುತ್ತೇವೆ. ಅದಕ್ಕೆ ತಕ್ಕನಾದ ಪ್ರತಿಫಲ ಸಿಕ್ಕಾಗ ತಾನು ಕಾಶ್ಮೀರ ಅಷ್ಟು ಎತ್ತರಕ್ಕೆ ಬೆಳೆಯುತ್ತೇನೆ ಎಂಬ ಆಸೆಯಲ್ಲಿ ಮಣ್ಣುಗುತ್ತಾನೆ. ಬೆಳಕು ಚೆಲ್ಲುತ್ತಿರುವಾಗ. ಆ ಬೆಳಕನ್ನು ನೋಡುವುದಕ್ಕೆ ಅದನ್ನು ಹೋಲಿಸುವುದಕ್ಕೂ ಅಸಾಧ್ಯ ಎಂಬುದನ್ನು ತಿಳಿಯುತ್ತಾನೆ.



# ರಾಮ ನವಮಿಗೆ ಮನೆಯಲ್ಲಿಯೇ ಸುಲಭವಾಗಿ ಮಾಡಿಕೊಳ್ಳಬಹುದಾದ ರುಚಿಕರವಾದ ಬೆಲ್ಲದ ಪಾನಕ

ಪ್ರತಿ ವರ್ಷ, ಚೈತ್ರ ಮಾಸದ ಶುಕ್ಲ ಪಕ್ಷದ (ವೃಷಭ ರಾಶಿ) ಒಂಬತ್ತನೇ ದಿನದಂದು ರಾಮ ನವಮಿ ಹಬ್ಬವನ್ನು ಆಚರಿಸಲಾಗುತ್ತದೆ. ರಾಮ ನವಮಿಯನ್ನು ಭಗವಾನ್ ಶ್ರೀರಾಮನ ಜನ್ಮ ವಾರ್ಷಿಕೋತ್ಸವವಾಗಿ ಆಚರಿಸಲಾಗುತ್ತದೆ. ಈ ವರ್ಷ, ರಾಮ ನವಮಿಯನ್ನು ಶುಕ್ರವಾರ, ಮಾರ್ಚ್ 27, 2026ರಂದು ಆಚರಿಸಲಾಗುತ್ತದೆ. ರಾಮ ನವಮಿಯನ್ನು ರಾಮನ ಆರಾಧನೆಗೆ ಮೀಸಲಾ ಗಿರುವ ವಿಶೇಷ ಹಬ್ಬವೆಂದು ಪರಿಗಣಿಸಲಾಗಿದೆ. ಈ ದಿನದಂದು, ನೀವು ರಾಮನನ್ನು ಪೂಜಿಸುವುದರ ಜೊತೆಗೆ ಹಲವಾರು ವಿಶೇಷ ಆಚರಣೆಗಳನ್ನು ಮಾಡಬಹುದು. ವಿಶೇಷವಾಗಿ ಭಗವಾನ್ ಶ್ರೀರಾಮನ ಆಶೀರ್ವಾದವು ಜೀವನದಲ್ಲಿ ಸಂತೋಷ, ನೆಮ್ಮದಿ, ಸಮೃದ್ಧಿ ಮತ್ತು ಸಕಾರಾತ್ಮಕತೆಯನ್ನು ತರುತ್ತದೆ ನಂಬಲಾಗಿದೆ



ಇನ್ನು ಚೈತ್ರ ಮಾಸದ ಬಿಸಿಲಿನಲ್ಲಿ ಆಚರಿಸಲಾಗುವ ಈ ಹಬ್ಬದಲ್ಲಿ, ಬೆಲ್ಲದ ಪಾನಕ ಮತ್ತು ಮಜ್ಜಿಗೆಯನ್ನು ರಾಮನಿಗೆ ನೈವೇದ್ಯವಾಗಿ ಅರ್ಪಿಸಿ ನಂತರ ವಿತರಿಸುವ ಆಚರಣೆ ಬಹಳ ಹಿಂದಿನಿಂದಲೂ ಕೂಡ ಬಂದಿದೆ. ಈ ಹಬ್ಬದ ಸಮಯದಲ್ಲಿ ತೀವ್ರವಾದ ಬಿಸಿಲು ಇರುವುದರಿಂದ ಈ ಎರಡೂ ಪಾನೀಯಗಳಿಗೆ ಬೇಡಿಕೆ ಕೂಡ ಹೆಚ್ಚಿರುತ್ತದೆ. ಇನ್ನು ರಾಮನವಮಿ ಹಬ್ಬ ಕೇವಲ ದೇವಾಲಯದ ಪೂಜೆ ಅಥವಾ ಧಾರ್ಮಿಕ ಆಚರಣೆಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಿಗೆ ನಮ್ಮ ಆರೋಗ್ಯಕರ ಮತ್ತು ಸಮತೋಲಿತ ಜೀವನಶೈಲಿಯ ಭಾಗ ಕೂಡ ಆಗಿದೆ. ಅದರಲ್ಲೂ ರಾಮ ನವಮಿ ದಿನದಂದು ಮಾಡಲಾಗುವ ವಿಶೇಷ ಬೆಲ್ಲದ ಪಾನಕವನ್ನು ಅಂತೂ ಬಾಯಲ್ಲಿ ನೀರೂರಿಸುವ ಜೊತೆಗೆ ಆರೋಗ್ಯ ಕೂಡ ವೃದ್ಧಿಸುವಲ್ಲಿ ನೆರವಿಗೆ ಬರುತ್ತದೆ



**ಬೆಲ್ಲದ ಪಾನಕಕ್ಕೆ ಬೇಕಾಗುವ ಸಾಮಾಗ್ರಿಗಳು:** ಅರ್ಧ ಕಪ್ ಪುಡಿ ಮಾಡಿದ ಬೆಲ್ಲ, 1 ಟೀಚಮಚ ಒಣಶುಂಠಿ ಪುಡಿ, ಅರ್ಧ ಟೀಚಮಚದಷ್ಟು ಕಾಳುಮೆಣಸಿನ ಪುಡಿ,1/4 ಟೀಚಮಚ ಏಲಕ್ಕಿ ಪುಡಿ, ನಿಂಬೆ ರಸ - ಎರಡು ಚಮಚ, ಸುವಾಸನೆಗಾಗಿ ಸ್ವಲ್ಪ ತುಳಸಿ ಎಲೆಗಳು ಉಪ್ಪು ರುಚಿಗೆ ತಕ್ಕಷ್ಟು

**ಈ ಪಾನೀಯವನ್ನು ರೆಡಿ ಮಾಡುವ ವಿಧಾನ:** ಮೊದಲಿಗೆ ಒಂದು ಲೀಟರ್ ನೀರಿಗೆ ಅರ್ಧ ಕಪ್ ಪುಡಿ ಮಾಡಿದ ಬೆಲ್ಲ ಸೇರಿಸಿ, ಅದು ಸರಿಯಾಗಿ ನೀರಿನಲ್ಲಿ ಕರಗುವ ತನಕ ಮಿಶ್ರಣ ಮಾಡಿಕೊಳ್ಳಿ ಬೆಲ್ಲ ಸಂಪೂರ್ಣವಾಗಿ ಕರಗಿದ ನಂತರ, ಅದನ್ನು ಸೋಸಿ ಪಕ್ಕಕ್ಕೆ ಇರಿಸಿ.

ಇಷ್ಟಾದ ಬಳಿಕ ಈ ನೀರಿನ ಮಿಶ್ರಣಕ್ಕೆ ಏಲಕ್ಕಿ ಪುಡಿ, ಕಾಳುಮೆಣಸಿನ ಪುಡಿ, ಒಣಶುಂಠಿ ಪುಡಿ ಮತ್ತು ನಿಂಬೆ ರಸವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಆಬಳಿಕ ನಿಂಬೆರಸ ಸೇರಿಸಿ, ಚೆನ್ನಾಗಿ ಕಲಸಿಕೊಳ್ಳಿ ಬಳಿಕ ರುಚಿಗೆ ತಕ್ಕಷ್ಟು ಉಪ್ಪನ್ನು ಬೆರೆಸಿ. ಬೇಕಿದ್ದರೆ ಈ ಪಾನೀಯಕ್ಕೆ ಚಿಟಿಕೆ ಯಷ್ಟು ಪಚ್ಚ ಕರ್ಪೂರದ ಪುಡಿಯನ್ನು ಸೇರಿಸಿದರೆ, ಈ ಪಾನೀಯ ದೇವಾಲಯದ ಶೈಲಿಯ ರುಚಿಯನ್ನು ನೀಡುತ್ತದೆ ಕೊನೆಗೆ ಸುವಾಸನೆಗಾಗಿ 10 ತುಳಸಿ ಎಲೆಗಳನ್ನು ಹಾಕಿ ಹಾಗೂ ಬೇಕೆಂದರೆ, ಐಸ್ ಪೀಸ್ ಅನ್ನು ಸೇರಿಸಿ, 5 ನಿಮಿಷಗಳವರೆಗೆ ಹಾಗೆಯೇ ಬಿಟ್ಟು, ನಂತರ ಈ ಪಾನೀಯವನ್ನು ಕುಡಿದರೆ ಇನ್ನಷ್ಟು ರುಚಿಕರವಾಗುತ್ತದೆ.

**ಈ ಪಾನೀಯದ ವಿಶೇಷತೆಗಳೇನು?:** ಪ್ರಮುಖವಾಗಿ ಬೇಸಿಗೆಯ ಉರಿಬಿಸಿಲಿನಲ್ಲಿ ದೇಹದ ಉಷ್ಣತೆಯನ್ನು ಕಡಿಮೆ ಮಾಡುವ ಜೊತೆಗೆ ದೇಹದರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಪ್ರಮುಖವಾಗಿ ಈ ಪಾನೀಯದಲ್ಲಿ ಬಳಸುವ ಬೆಲ್ಲ, ಏಲಕ್ಕಿ ಪುಡಿ, ಮೆಣಸಿನ ಪುಡಿ, ತುಳಸಿ ಎಲೆಗಳು ಮತ್ತು ಮೆಂತ್ಯದ ಪುಡಿ ಔಷಧೀಯ ಗುಣಗಳನ್ನು ಹೊಂದಿವೆ.


ಬೇಸಿಗೆಯಲ್ಲಿ ಬರುವ ಶ್ರೀ ರಾಮ ನವಮಿಯ ದಿನದಂದು ಈ ಪಾನೀಯವನ್ನು ಸೇವಿಸುವುದರಿಂದ ಬೇಸಿಗೆಯ ಉಷ್ಣತೆ ಕಡಿಮೆಯಾಗುತ್ತದೆ ಎಂದು ತಜ್ಞರು ಹೇಳುತ್ತಾರೆ.

# ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಏಕೆ ಇರಬೇಕು?


ಇಂದಿನ ಶಿಕ್ಷಣ ಕೇವಲ ಅಂಕಗಳ ಬೆನ್ನತ್ತಿದೆಯೇ ಹೊರತು, ಮಗುವಿನ ವ್ಯಕ್ತಿತ್ವದ ಸಮಗ್ರ ವಿಕಸನದ ಕಡೆಗೆ ಗಮನ ಹರಿಸುತ್ತಿಲ್ಲ ಎಂಬ ಆತಂಕ ಸಮಾಜದಲ್ಲಿ ದಟ್ಟವಾಗಿದೆ. ಇದಕ್ಕೆ ಪೂರಕವೆಂಬಂತೆ, ಇಂದು ಬಹುತೇಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು ಅಥವಾ ಆ ವಿಷಯಕ್ಕೆ ಆದ್ಯತೆ ನೀಡದಿರುವುದು ಒಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ದೈಹಿಕ ಶಿಕ್ಷಕರಿಲ್ಲದ ಶಾಲೆ ಎಂದರೆ ಅದು ಕೇವಲ 'ಅಕ್ಷರಗಳ ಕಾರ್ಖಾನೆ'ಯಾಗುತ್ತದೆಯೇ ಹೊರತು, ಸದೃಢ ನಾಗರಿಕರನ್ನು ರೂಪಿಸುವ ಕೇಂದ್ರವಾಗಲಾರದು. ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ದೈಹಿಕ ಶಿಕ್ಷಕರ ಅವಶ್ಯಕತೆಯಿದೆ.

ಮಗುವಿನ ನೈಜ ಬೆಳವಣಿಗೆ ಇರುವುದು ಮೈದಾನದ ಮಣ್ಣಿನಲ್ಲಿ. ಆದರೆ ದೈಹಿಕ ಶಿಕ್ಷಕರಿಲ್ಲದ ಕಾರಣ ಆಟದ ಮೈದಾನಗಳು ಅನಾಥವಾಗಿವೆ. ಪರಿಣಾಮವಾಗಿ, ಮಕ್ಕಳು ದೈಹಿಕ ಚಟುವಟಿಕೆಯಿಂದ ವಂಚಿತರಾಗಿ ಬಾಲ್ಯದಲ್ಲೇ ಬೊಜ್ಜು, ಕಣ್ಣಿನ ದೋಷ ಮತ್ತು ಅಕಾಲಿಕ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ದೈಹಿಕ ಶಿಕ್ಷಕರು ಕೇವಲ ಆಟವಾಡಿಸುವವರಲ್ಲ, ಅವರು ಮಗುವಿನ ದೈಹಿಕ ಸಾಮರ್ಥ್ಯವನ್ನು ಗುರುತಿಸಿ, ಶಿಸ್ತಿನ ವ್ಯಾಯಾಮದ ಮೂಲಕ ರೋಗನಿರೋಧಕ ಶಕ್ತಿ ಹೆಚ್ಚಿಸುವ 'ಆರೋಗ್ಯ ರಕ್ಷಕರು'.

ಇಂದು ಮಕ್ಕಳು ಮೊಬೈಲ್ ಮತ್ತು ಕಂಪ್ಯೂಟರ್ ಆಟಗಳ ಮಾಯಾಜಾಲಕ್ಕೆ ಸಿಲುಕಿ 'ಡಿಜಿಟಲ್ ದಾಸ್ಯ' ಅನುಭವಿಸುತ್ತಿದ್ದಾರೆ. ಮೈದಾನದಲ್ಲಿ ಬೆವರುವ ಅಭ್ಯಾಸ ತಪ್ಪಿದ್ದರಿಂದ ಮಕ್ಕಳಲ್ಲಿ ಸಹನೆ ಕ್ಷೀಣಿಸುತ್ತಿದೆ. ಸಣ್ಣ ಪುಟ್ಟ ವಿಚಾರಗಳಿಗೂ ಸಿಟ್ಟು ಮಾಡಿಕೊಳ್ಳುವುದು, ಖಿನ್ನತೆಗೆ ಒಳಗಾಗುವುದು ಮತ್ತು ತಂದೆ-ತಾಯಿಯರ ಮೇಲೆಯೇ ಹಲ್ಲೆ ಮಾಡುವಂತಹ ವಿಕೃತ ಮನೋಭಾವ ಬೆಳೆಯುತ್ತಿದೆ. ದೈಹಿಕ ಶಿಕ್ಷಕರು ಮಗುವನ್ನು ಈ ವರ್ಚುವಲ್ ಜಗತ್ತಿನಿಂದ ಹೊರತಂದು, ನೈಜ ಜಗತ್ತಿನ ಸವಾಲುಗಳನ್ನು ಎದುರಿಸುವ ಮಾನಸಿಕ ಸ್ಥೈರ್ಯ ತುಂಬುತ್ತಾರೆ.



ಶಿಕ್ಷಣ ಎಂದರೆ ಕೇವಲ ಓದು-ಬರಹವಲ್ಲ. ಸೋಲನ್ನು ಗೌರವಯುತವಾಗಿ ಸ್ವೀಕರಿಸುವುದು ಮತ್ತು ಗೆಲುವನ್ನು ವಿನಯದಿಂದ ಸಂಭ್ರಮಿಸುವುದು ಕ್ರೀಡಾಂಗಣದಲ್ಲಿ ಮಾತ್ರ ಸಾಧ್ಯ. ದೈಹಿಕ ಶಿಕ್ಷಕರಿಲ್ಲದ ಶಾಲೆಗಳಲ್ಲಿ ಈ 'ಜೀವನ ಪಾಠ'ಗಳು ಮರೆಯಾಗುತ್ತಿವೆ. ತಂಡದ ಸ್ಫೂರ್ತಿ, ನಾಯಕತ್ವದ ಗುಣಗಳು ಮತ್ತು ಪರಸ್ಪರ ಸಹಕಾರದಂತಹ ಮೌಲ್ಯಗಳು ಮಗುವಿನ ವ್ಯಕ್ತಿತ್ವದ ಭಾಗವಾಗದೆ ಹೋದರೆ, ಅವರು ಮುಂದೆ ಸಮಾಜದಲ್ಲಿ ಹೊಂದಾಣಿಕೆಯಿಂದ ಬಾಳಲು ಕಷ್ಟಪಡುತ್ತಾರೆ. ದೈಹಿಕ ಶಿಕ್ಷಣ ಎಂದರೆ ಶಿಸ್ತಿನ ಅಡಿಪಾಯ. ದೈಹಿಕ ಶಿಕ್ಷಕರು ಕಲಿಸುವ ಪಥಸಂಚಲನ, ಯೋಗ ಮತ್ತು ಧ್ಯಾನಗಳು ವಿದ್ಯಾರ್ಥಿಯಲ್ಲಿ ಏಕಾಗ್ರತೆಯನ್ನು ಮೂಡಿಸುತ್ತವೆ. ಇಂದು ಶಾಲೆಗಳಲ್ಲಿ ಶಿಸ್ತಿನ ಕೊರತೆ ಎದ್ದುಕಾಣುತ್ತಿದೆ, ಇದಕ್ಕೆ ಮುಖ್ಯ ಕಾರಣ ದೈಹಿಕ ಶಿಕ್ಷಣದ ನಿರ್ಲಕ್ಷ್ಯ. ಗುರು-ಹಿರಿಯರ ಬಗ್ಗೆ ಗೌರವ ಮತ್ತು ಸಮಯದ ಪ್ರಜ್ಞೆಯನ್ನು ಕ್ರೀಡೆಯ ಮೂಲಕ ಕಲಿಸುವ ಗುರುಗಳ ಅನುಪಸ್ಥಿತಿಯು ಮಗುವಿನ ನೈತಿಕ ಪತನಕ್ಕೆ ದಾರಿಯಾಗುತ್ತಿದೆ. ಸದೃಢ ವಿದ್ಯಾರ್ಥಿ-ಸದೃಢ ದೇಶ ಎಂಬುದು ಕೇವಲ ಘೋಷವಾಕ್ಯವಲ್ಲ. ಶಾಲೆಯಲ್ಲಿ ದೈಹಿಕ ಶಿಕ್ಷಕರಿಲ್ಲದಿದ್ದರೆ ನಮ್ಮ ಮುಂದಿನ ಪೀಳಿಗೆ ದೈಹಿಕವಾಗಿ ಅಶಕ್ತ ಮತ್ತು ಮಾನಸಿಕವಾಗಿ ದುರ್ಬಲವಾಗುತ್ತದೆ. ಇದು ನೇರವಾಗಿ ದೇಶದ ಮಾನವ ಸಂಪನ್ಮೂಲದ ಮೇಲೆ ಪೆಟ್ಟು ನೀಡುತ್ತದೆ. ಶಾಲಾ ಹಂತದಲ್ಲೇ ಮಗುವಿನ ಕ್ರೀಡಾ ಆಸಕ್ತಿಯನ್ನು ಗುರುತಿಸಿ ಬೆಳೆಸದಿದ್ದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸುವ ಕ್ರೀಡಾಪಟುಗಳು ಸೃಷ್ಟಿಯಾಗುವುದು ಹೇಗೆ? ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸದಿರುವುದು ಅಥವಾ ಅವರ ಅವಧಿಯನ್ನು ಇತರ ವಿಷಯಗಳಿಗೆ ಬಳಸುವುದು ಮಗುವಿನ ಭವಿಷ್ಯಕ್ಕೆ ಮಾಡುತ್ತಿರುವ ದ್ರೋಹ. ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ದೈಹಿಕ ಶಿಕ್ಷಕರು ಅನಿವಾರ್ಯ. ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಪ್ರತಿಯೊಂದು ಶಾಲೆಯಲ್ಲೂ ಅರ್ಹ ದೈಹಿಕ ಶಿಕ್ಷಕರನ್ನು ನೇಮಿಸುವ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಬೇಕಿದೆ ಜೊತೆಗೆ ದೈಹಿಕ ಶಿಕ್ಷಣ ಪಠ್ಯವನ್ನು ಮಗುವಿಗೆ ಬೋಧಿಸಬೇಕಿದೆ.






**ಡಾ.ಸುಧಾಕರ.ಜಿ.ಲಕ್ಕವಳ್ಳಿ.**


• ಉದಯವಾಹಿನಿ, ವಿಶೇಷ

# ನಾಯಿ ಕಚ್ಚೋದ್ರಿಂದ ಮಾತ್ರವಲ್ಲ ನೆಕ್ಕೋದ್ರಿಂದಲೂ ಸೋಂಕು ಹರಡುತ್ತೆ

ಅನೇಕರು ಮನೆಯಲ್ಲಿ ನಾಯಿಯನ್ನು ಸಾಕುತ್ತಾರೆ. ಅದರಲ್ಲೂ ನಾಯಿ ಜೊತೆ ತುಂಬಾನೇ ಒಡನಾಟವನ್ನು ಹೊಂದಿರುತ್ತಾರೆ. ನಾಯಿ ಕೆಲವರ ಮುಖ, ಮೈ ಕೈ ನಕ್ಕೋದನ್ನು ನೀವು ನೋಡಿರುವಿರಿ. ಅನೇಕರಿಗೆ ನಾಯಿ ನೆಕ್ಕುವುದು ತುಂಬಾನೇ ಸಾಮಾನ್ಯ. ಆದರೆ ಬರೀ ನಾಯಿ ಕಚ್ಚೋದ್ರಿಂದ ಮಾತ್ರವಲ್ಲ, ನಾಯಿ ನಿಮ್ಮ ಚರ್ಮವನ್ನು ನಕ್ಕೋದರಿಂದಲೂ ರೇಬಿಸ್ ಬರುತ್ತೆ ಎನ್ನುವುದು ಗೊತ್ತಿರೋದಿಲ್ಲ. ಇತ್ತೀಚೆಗೆ, ಲಂಡನ್‌ನಲ್ಲಿ ಒಬ್ಬ ಮಹಿಳೆಯ ಕೈ ಮತ್ತು ಕಾಲುಗಳ ಗಾಯವಿದ್ದ ಜಾಗದಲ್ಲಿ ನಾಯಿ ನೆಕ್ಕಿದ್ದರಿಂದ ಸೆಪ್ಸಿಸ್ ಉಂಟಾಗಿರುವ ಪ್ರಕರಣ ಬೆಳಕಿಗೆ ಬಂದಿದೆ. ಆದ್ದರಿಂದ ನೆಕ್ಕಿದ್ರೆ ಏನಾಗೋದಿಲ್ಲ ಎಂದು ತಿಳಿದಿರುವವರು ಜಾಗರೂಕರಾಗಿರಬೇಕು.

**ನಾಯಿಯ ಲಾಲಾರಸದಲ್ಲಿ ಬ್ಯಾಕ್ಟೀರಿಯಾವಿದೆ:** ನಾಯಿ ಕಚ್ಚದೆಯೂ ಸಹ ಖಂಡಿತವಾಗಿಯೂ ಸೋಂಕುಗಳು ಸಂಭವಿಸಬಹುದು. ನಾಯಿಯ ಲಾಲಾರಸವು ಬ್ಯಾಕ್ಟೀರಿಯಾವನ್ನು ಒಯ್ಯುತ್ತದೆ ಮತ್ತು ಆರೋಗ್ಯಕರ ಚರ್ಮವು ಸಾಮಾನ್ಯವಾಗಿ ಬಲವಾದ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ, ಗಾಯಗೊಂಡಿರುವ ಚರ್ಮ, ಕಡಿತ, ಗೀರುಗಳು, ಹುಣ್ಣುಗಳು, ಎಸ್ಜಿಮಾ ಅಥವಾ ಕಣ್ಣುಗಳು, ಮೂಗು ಮತ್ತು ಬಾಯಿಯನ್ನು ನೆಕ್ಕಿದರೆ ಅಪಾಯವು ಹೆಚ್ಚಾಗುತ್ತದೆ.

ಕೆಲವು ಸಂದರ್ಭಗಳಲ್ಲಿ, ಕ್ಯಾಪ್ನೋಸೈಟೋಫಾಗದಂತಹ ಬ್ಯಾಕ್ಟೀರಿಯಾಗಳು ಈ ತೆರೆಯುವಿಕೆಗಳ ಮೂಲಕವೂ ಪ್ರವೇಶಿಸಬಹುದು, ವಿಶೇಷವಾಗಿ ಕಡಿಮೆ ರೋಗನಿರೋಧಕ ಶಕ್ತಿ, ಮಧುಮೇಹ, ಯಕೃತ್ತಿನ ಕಾಯಿಲೆ ಅಥವಾ ರೋಗನಿರೋಧಕ ಶಮನಕಾರಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವವರಲ್ಲಿ ಸೋಂಕಿಗೆ ಕಾರಣವಾಗಬಹುದು ಎನ್ನುತ್ತಾರೆ ಯಶವಂತಪುರದ ಸ್ಪರ್ಶ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ. ಸುಶ್ಮಿತಾ.



**ಸಾವಿರಾರು ಜನರು ರೇಬೀಸ್‌ನಿಂದ ಸಾಯುತ್ತಾರೆ:** ಭಾರತದಲ್ಲಿ ಪ್ರತಿ ವರ್ಷ ಸಾವಿರಾರು ಜನರು ರೇಬೀಸ್‌ನಿಂದ ಸಾಯುತ್ತಾರೆ. ಅದು ಸಾಕು ನಾಯಿಯಾಗಿರಲಿ ಅಥವಾ ಬೀದಿ ನಾಯಿಯಾಗಿರಲಿ, ತಕ್ಷಣದ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು. ಅಂತಹ ಪರಿಸ್ಥಿತಿಯಲ್ಲಿ, ರೇಬೀಸ್ ವಿರೋಧಿ ಇಂಜೆಕ್ಷನ್ ಪಡೆಯುವುದು ಅತ್ಯಗತ್ಯ. ಕೆಲವೇ ಗಂಟೆಗಳಲ್ಲಿ ರೇಬೀಸ್ ಇಂಜೆಕ್ಷನ್ ನೀಡದಿದ್ದರೆ, ವೈರಸ್ ದೇಹದಾದ್ಯಂತ ಹರಡಬಹುದು. ರೇಬೀಸ್ ಮೆದುಳು, ನರಮಂಡಲ ಮತ್ತು ಹೃದಯದ ಮೇಲೆ ಪರಿಣಾಮ ಬೀರುತ್ತದೆ, ಇದು ಸಾವಿಗೆ ಕಾರಣವಾಗಬಹುದು.

**ನಾಯಿ ನೆಕ್ಕಿದಾಗ ಏನಾಗುತ್ತದೆ ?:** ವೈದ್ಯರ ಪ್ರಕಾರ, ನಾಯಿ ಕಚ್ಚುವಿಕೆಯಿಂದ ಮಾತ್ರವಲ್ಲದೆ, ನಾಯಿ ನೆಕ್ಕುವುದರಿಂದಲೂ ಸೋಂಕು ಸಂಭವಿಸಬಹುದು. ನಾಯಿಯ ಲಾಲಾರಸವು ಸೋಂಕನ್ನು ಉಂಟುಮಾಡುವ ಬ್ಯಾಕ್ಟೀರಿಯಾವನ್ನು ಸಹ ಹೊಂದಿರುತ್ತದೆ. ಸೋಂಕಿತ ನಾಯಿ ಮಾನವನ ಗಾಯ, ಕಡಿತ, ಗೀರು ಅಥವಾ ಕಣ್ಣು, ಮೂಗು ಅಥವಾ ಬಾಯಿಯನ್ನು ನೆಕ್ಕಿದರೆ, ನಾಯಿಯ ಲಾಲಾರಸದಲ್ಲಿರುವ ವೈರಸ್‌ಗಳು ದೇಹವನ್ನು ಪ್ರವೇಶಿಸುತ್ತವೆ. ಈ ವೈರಸ್‌ಗಳು ಮಾನವ ನರಮಂಡಲದ ಮೇಲೆ ಪರಿಣಾಮ ಬೀರುತ್ತವೆ ಮತ್ತು ರೇಬೀಸ್‌ಗೆ ಕಾರಣವಾಗಬಹುದು. ಈ ಸೋಂಕು ಸೆಪ್ಸಿಸ್‌ಗೆ ಕಾರಣವಾಗಬಹುದು.

# ಎಲ್ಲಾ ಪಕ್ಷಗಳಲ್ಲಿಯೂ ಅತ್ಯಾಪ್ತರನ್ನು ಹೊಂದಿದ್ದ ಸ್ನೇಹಜೀವಿ ಹೋರಾಟಗಾರ ಕರಿಯಣ್ಣ

• ಉದಯವಾಹಿನಿ ಕೊಪ್ಪಳ

ಯುವಕರಾಗಿದ್ದಾಗಲೇ ಸಂಘಟನೆ, ಹೋರಾಟ, ರಾಜಕಾರಣ ಹಾಗೂ ಸದಾಜನರ ನಡುವೆ ಒಡನಾಟ ಹೊಂದಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಇನ್ನು ನೆನಪು ಮಾತ್ರ. ಎಲ್ಲಾ ಪಕ್ಷಗಳಲ್ಲಿಯೂ ಅತ್ಯಾಪ್ತ ಸ್ನೇಹ ಬಳಗವನ್ನು ಹೊಂದಿದ್ದ ಅವರು ತಮ್ಮನ್ನು ನೆಚ್ಚಿಕೊಂಡ ಜನರ ಕೆಲಸಗಳನ್ನು ಮಾಡಿಸಿ ಕೊಡುವಲ್ಲಿ ನಿಮರಾಗಿದ್ದರು.

ವ್ಯಾಪಕ ಕರಡಿ ಹಾವಳಿಯ ಪ್ರದೇಶವಾಗಿರುವ ಇರಕಲ್ಲಗಡ ಭಾಗದಲ್ಲಿ ಜನಸಾಮಾನ್ಯರಿಗೆ ಸಣ್ಣ ತೊಂದರೆಯಾದರೂ ಮೊದಲು ಕರಿಯಣ್ಣ ಸಂಗಟಿ ಅವರಿಗೆ ಸುದ್ದಿ ತಲುಪುತ್ತಿತ್ತು. ವಿಷಯ ತಲುಪುತ್ತಿದ್ದಂತೆಯೇ ಜನರ ಬಳಿ ಖುದ್ದು ಹೋಗಿ ಸಮಸ್ಯೆ ಆಲಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ರಾಜಕೀಯವಾಗಿ ಅನೇಕರ ಜೊತೆ



ಉದಯವಾಹಿನಿ ಚಿತ್ರ

ಭಿನ್ನಾಭಿಪ್ರಾಯಗಳು ಇದ್ದರೂ ತಮ್ಮ ಜನರ ವಿಷಯ ಬಂದಾಗ ಜನಪ್ರತಿನಿಧಿಗಳೊಂದಿಗೆ ಕೆಲಸ ಮಾಡಿಸಿಕೊಳ್ಳುವ ಛಾತಿ ಅವರಲ್ಲಿತ್ತು.

ಕೊಪ್ಪಳ ತಾಲ್ಲೂಕಿನ ಯಲಮಗೇರಿ ಗ್ರಾಮದ ಕರಿಯಣ್ಣ ಅವರು ಕರಿಯಣ್ಣ 1982ರಿಂದ ಮೂರು ವರ್ಷ ರಾಯಚೂರು ಜಿಲ್ಲೆಯ ಸೇವಾದಳದ ಸಂಘಟಕರಾಗಿ, 1985ರಿಂದ 89ರ ತನಕ ಕೊಪ್ಪಳ ತಾಲ್ಲೂಕು ಯೂತ್ ಕಾಂಗ್ರೆಸ್ ಪ್ರಮುಖರಾಗಿ, 1990–92ರ ತನಕ ರಾಯಚೂರು ಜಿಲ್ಲೆಯ ಯೂತ್ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ, 1992ರಲ್ಲಿ ಕೊಪ್ಪಳ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್ ಸದಸ್ಯರಾಗಿ, 1998ರಲ್ಲಿ ಕೊಪ್ಪಳ ಜಿಲ್ಲಾ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ, ಕಾಳಿದಾಸ ಪ್ರೌಢಶಾಲೆ ಹಾಗೂ ರಾಜೀವಗಾಂಧಿ ಯುವಕ ಮಂಡಳದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಕರಿಯಣ್ಣ ಗುರುತಿಸಿಕೊಂಡಿದ್ದರು. ರಾಯಚೂರು ಜಿಲ್ಲೆಯಿಂದ ವಿಭಜನೆಗೊಂಡು ಕೊಪ್ಪಳ 1997ರಲ್ಲಿ ಪ್ರತ್ಯೇಕ ಜಿಲ್ಲೆಯಾದಾಗ ಜಿಲ್ಲೆಯ ಮೊದಲ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದ ಕರಿಯಣ್ಣ ವಿದ್ಯಾರ್ಥಿ ಹಂತದಿಂದಲೂ ರಾಜಕಾರಣದಲ್ಲಿ ಸಕ್ರಿಯರಾಗಿದ್ದರು.

ಎಸ್.ಎಂ. ಕೃಷ್ಣ ಅವರಿಗೂ ಆಪ್ತರಾಗಿದ್ದರಿಂದ ಅವರನ್ನು 2000ರಲ್ಲಿ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ್ದರು. 2008ರ ವಿಧಾನಸಭಾ ಚುನಾವಣೆಯಲ್ಲಿ ಕೊಪ್ಪಳ ಕ್ಷೇತ್ರದಿಂದ ಪಕ್ಷೇತರರಾಗಿ, 2018ರ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ಸ್ಪರ್ಧೆ ಮಾಡಿದ್ದರು.

# ನೇಕಾರರ ಪುನಶ್ಚೇತನಕ್ಕೆ ಸರ್ಕಾರ ಮುಂದಾಗಲಿ: ಹುಲಕುಂದ



ಉದಯವಾಹಿನಿ ಚಿತ್ರ

• ಉದಯವಾಹಿನಿ ರಬಕವಿ ಬನಹಟ್ಟಿ

ಇಂದಿನ ದಿನಗಳಲ್ಲಿ ನೇಕಾರಿಕೆ ಉದ್ಯೋಗ ಮತ್ತು ನೇಕಾರರು ಬಹಳಷ್ಟು ಕಷ್ಟ ಕಾಲದಲ್ಲಿದ್ದಾರೆ. ರಾಜ್ಯದ ನೇಕಾರರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ನೇಕಾರಿಕೆಯ ಪುನಶ್ಚೇತನಕ್ಕೆ ಗಮನ ನೀಡಬೇಕು' ಎಂದು ರಬಕವಿ ಬನಹಟ್ಟಿ ನೇಕಾರ ಮುಖಂಡರಾದ ರಾಮಣ್ಣ ಹುಲಕುಂದ ತಿಳಿಸಿದರು. ಅವರು ಇಲ್ಲಿನ ರಬಕವಿ ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ನಡೆದ ದೇವರ ದಾಸಿಮಯ್ಯನವರ ಜಯಂತ್ಯುತ್ಸವ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು. ಮತ್ತೋರ್ವ ಮುಖಂಡ ಶ್ರೀಶೈಲ ಧಬಾಡಿ ಮಾತನಾಡಿ, ದಾಸಿಮಯ್ಯನವರ ಕುರಿತು ಮತ್ತು ಅವರಿಂದ ರಚನೆಗೊಂಡ ವಚನಗಳ ಬಗ್ಗೆ ಪ್ರಸಾರ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು.

ಶಿರಸ್ತೆದಾರ ರಾಜಶೇಖರ ಸಾತಿಹಾಳ, ಎಸ್.ಬಿ.ಕಾಂಬಳೆ, ಶೋಭಾ ಕೂಗಾಟೆ, ಸದಾಶಿವ ಕುಂಬಾರ, ದಾನಪ್ಪ ಹುಲಜತ್ತಿ, ಶ್ರೀಶೈಲ ಗಣೇಶನವರ, ಶಿವಾನಂದ ಕುಳ್ಳಿ, ಸಿದ್ದು ಬಾಣಕಾರ, ಮಾಲಾ ಬಾವಲತ್ತಿ, ಹೇಮಾ ಪಟ್ಟಣಶೆಟ್ಟಿ, ಶಾಂತಾ ಸೋರಗಾವಿ, ಪೂರ್ಣಿಮಾ ಮುಳೆಗಾವಿ ಇದ್ದರು.

ರಬಕವಿ ಬನಹಟ್ಟಿಯ ಕೆ.ಎಚ್.ಡಿ.ಸಿ ಕಾಲೊನಿಯಲ್ಲಿರುವ ದೇವರ ದಾಸಿಮಯ್ಯನವರ ದೇವಸ್ಥಾನದಲ್ಲಿ ಸೋಮವಾರ ದಾಸಿಮಯ್ಯನವರ ಜಯಂತ್ಯುತ್ಸವ ನಡೆಯಿತು. ಹಟಗಾರ ಸಮಾಜದ ಮುಖಂಡ ರಾಜಶೇಖರ ಸೋರಗಾವಿ, ನೇಕಾರ ಸಮುದಾಯದ ಮಹಿಳಾ ಮುಖಂಡರಾದ ಶಾಂತಾ ಸೋರಗಾವಿ ಮಾತಮಾಡಿದರು. ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಯಿತು. ಮಹಿಳೆಯರು ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಸಿದರು. ಸೋಮನಾಥ ಗೊಂಬಿ, ದೇವೇಂದ್ರ ಶೀಲವಂತ, ಶಂಕರ ಹೋಳಗಿ, ಸಿದ್ದಪ್ಪ ಕಾಲನೂರ, ಈರಪ್ಪ ಬುದ್ದಿ, ಶಿವಾನಂದ ಬರಗಲ, ರಾಜಶೇಖರ ಬೀಳಗಿ ಇದ್ದರು.

### ಪ್ರವಾಸದ ಕಥನವಲ್ಲ ಆತ್ಮದ ಭಕ್ತಿ ಶ್ರದ್ಧೆಯ ಅನುಭವದ ಅಜ್ಮೀರಗೆ ಆತ್ಮಯಾನಾ ಕಥನ ಕೃತಿ; ಡಾ.ಎಚ್.ಟಿ.ಪೋತೆ

# ಪ್ರತಿಭೆಗಳಿಗೆ ಈಗಿನ ಸಮಾಜ ನೋಡುತ್ತಿಲ್ಲ

• ಉದಯವಾಹಿನಿ ಚಿಂಚೋಳಿ

ಅಜ್ಮೀರಗೆ ಆತ್ಮಯಾನಾ ಪ್ರವಾಸದ ಕಥನ ಪುಸ್ತಕವನ್ನು ಡಾ.ಮೀರಾಜ ಪಾಷ ಬರೆದು ಈ ಪುಸ್ತಕ ಕಥನವಲ್ಲ ಆತ್ಮದ ಭಕ್ತಿ ಶ್ರದ್ಧೆಯ ಅನುಭವದ ಪುಸ್ತಕವನ್ನು ಬರೆದಿದ್ದಾರೆ ಎಂದು ಕಲಬುರ್ಗಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಚ್.ಟಿ.ಪೋತೆ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ವಿಭಾಗ ಮತ್ತು ಬೆರಗು ಪ್ರಕಾಶನ ಕಡಣಿರವರ ಸಹಯೋಗದಲ್ಲಿ ಡಾ.ಮೀರಾಜ ಪಾಷ ಹಸನಲ್ಲಿ ವಿರಚಿತ ಅಜ್ಮೀರಗೆ ಆತ್ಮಯಾನಾ ಪ್ರವಾಸ ಕಥನ ಲೋಕಾರ್ಪಣೆಗೈದು ಮಾತನಾಡಿದ ಅವರು,ಪ್ರತಿಯೊಬ್ಬರಲ್ಲಿ ಸಾಧನೆ ಇರುತ್ತದೆ ಆದರೆ ಮಹಾತಪಸ್ಸು ಮಾಡಿದಾಗ ಯಶಸ್ಸು ಸಿಗಲು ಸಾಧ್ಯವಾಗುತ್ತದೆ.

ಪ್ರತಿಭೆಗಳಿಗೆ ಈಗಿನ ಸಮಾಜ ನೋಡುತ್ತಿಲ್ಲ,ಅವರ ಜಾತಿ ಮೇಲೆ ಅವರ ಪ್ರತಿಭೆ ನೋಡುತ್ತಿರುವುದು ನೋವಿನ ಸಂಗತಿಯಾಗಿದ್ದು ಹಾಗಾಗಿ ಸಮಾಜದಲ್ಲಿ ಬಹಳಷ್ಟು ಏರುಪೇರುಗಳು ನೋಡುತ್ತಿದ್ದೇವೆ,ಹೀಗೂ ಆಗಬಾರದೆಂದರೆ ನಾವೆಲ್ಲರೂ ಜಾತಿಪಥ ಬಿಟ್ಟು ನಾವೆಲ್ಲರೂ ಒಂದೇ ಅನ್ನಯವ ಭಾವನೆಯಿಂದ ಬಾಳಿ,ಕವಿಗಳಿಗೆ,ಸಾಹಿತಿಗಳಿಗೆ ಪ್ರೋತ್ಸಹ ನೀಡಿ ಬೆಳೆಸಬೇಕು.

ಕಲಬುರ್ಗಿ ವಿಶ್ವವಿದ್ಯಾಲದ ಸಂದರ್ಶಕ ಪ್ರಾಧ್ಯಾಪಕ ಡಾ. ಶ್ರೀಶೈಲ್ ನಾಗರಾಳ ಮಾತನಾಡಿ ಅಕ್ಷರದಿಂದ ಎಲ್ಲವೂ ಪಡೆದುಕೊಳ್ಳಬಹುದು ಆದರೆ ಪ್ರೀತಿ ಪ್ರೇಮ ಎಲ್ಲರಲ್ಲಿ ಇರಬೇಕು, ತಲೆಬಾಗಿ ದಿನಾಲು ಪುಸ್ತಕ ಓದಿದರೆ ಜೀವನದಲ್ಲಿ ತಾವೆಲ್ಲರೂ ದಿನಾಲು ತಲೆ ಎತ್ತಿ ನಡೆಯುತ್ತೀರಿ ಎಂದರು.

ಸ್ವಾತಂತ್ರ್ಯಕ್ಕಿಂತ ಮೊದಲು ಅಸ್ಪೃಶ್ಯತೆ ಬಹಳಷ್ಟಯಿತ್ತು ಆಗ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ ಅವರಿಗೆ ಯಾರು ಕೂಡ ನೀರು, ಉಳಿದುಕೋಳಲು ಸ್ಥಳ ನೀಡದೆ ಇರುವಾಗ ಆಗ ಮುಸ್ಲಿಂ ಸಮಾಜದ ಫಾತೇಖಾನ್ ಎಂಬುವವರು ಅಂಬೇಡ್ಕರಗೆ ಕುಡಿಯಲು ನೀರು ಕೋಟ್ಟು ಉಳಿದುಕೋಳ್ಳಲು ಸ್ಥಳ ನೀಡಿದರು ಎಂದರು.

ಅಜ್ಮೀರಗೆ ಆತ್ಮಯಾನಾ ಪುಸ್ತಕ ಬರೆದ ಡಾ.ಮೀರಾಜ ಪಾಷ ಮಾತನಾಡಿ ನಾನು ಬಹಳಷ್ಟು ಸಮಸ್ಯೆಗಳು ಅನುಭವಿಸಿ



ಉದಯವಾಹಿನಿ ಚಿತ್ರ

ನಮ್ಮ ಗ್ರಾಮ ತಾದಲಾಪೂರದಿಂದ ಅಜ್ಮೀರವರೆಗೆ ಅನುಭವದ ಹಾಗೂ ಭಕ್ತಿ ಶ್ರದ್ಧೆಯ ಅನುಭವ ಬರೆದಿದ್ದೇನೆ ಎಂದರು.

ಸೇಡಂ ಪ್ರಾಂಶುಪಾಲ ಡಾ.ಬಿ.ಕೆ.ಪಂಡಿತ, ಡಾ.ರಮೇಶ ಕತ್ತಿ, ಪ್ರೋ.ಬಸವರಾಜ ಕೋನೇರಿ, ಡಾ.ಸೂರ್ಯಕಾಂತ, ಬಸವರಾಜ ಐನೋಳ್ಳಿ, ಮಾತನಾಡಿದರು. ಪ್ರಮುಖರು; ಜಗನ್ನಾಥ ಶೇರಿಕಾರ, ಕೆ.ಎಂ.ಬಾರಿ,ಅಬ್ದುಲ್ ಬಾಷೀದ್, ಸುರೇಶ ದೇಶಪಾಂಡೆ, ಖಾಸಿಂಸಾಬ್ ತಾದಲಾಪೂರ,ಡಾ. ಬಸವರಾಜೇಶ್ವರಿ, ಸತೀಶಕುಮಾರ,ಅನ್ನಪೂರ್ಣ, ಸುಜಾತಾ, ಶಿವಶರಣಪ್ಪಾ ಮೋತಕಪಳ್ಳಿ,ವೈಶಾಲಿ, ಪ್ರೋ.ನಾಗಪ್ಪ ಪೂಜಾರಿ,ಅನೇಕರಿದ್ದರು.

**ಪ್ರತಿಯೊಬ್ಬರಲ್ಲಿ ಸಾಧನೆ ಇರುತ್ತದೆ**



ಉದಯವಾಹಿನಿ ಚಿತ್ರ

> ಎರಡು ಸಾವಿರ ವರ್ಷಗಳ ಹಿಂದೆ ಅನೇಕ ಮಹಾಪುರುಷರು ಸಮಾನತೆಗಾಗಿ ಹೋರಾಟ ನಡೆಸಿದ್ದಾರೆ, ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ಬರೆದು ನಮ್ಮೆಲ್ಲರಿಗೂ ಸಮಾನತೆ ಹಕ್ಕು,ಮತದಾನದ ಹಕ್ಕು,ಸ್ವಾತಂತ್ರ್ಯ ಹಕ್ಕು,ಪ್ರಶ್ನೆಸುವ ಹಕ್ಕು ನೀಡಿದ್ದಾರೆ,ಜಾತ್ಯಾತೀತ ದೇಶವಿದೆ ನಾವೆಲ್ಲರು ಕವಿಗಳು, ಸಾಹಿತಿಗಳು, ಲೇಖಕರು ಕೂಡಿಕೊಂಡು ದೇಶವನ್ನು ಜಾತ್ಯಾತೀತವಾಗಿ ಇರಲು ನಾವೇಲ್ಲರೂ ಶ್ರಮಿಸಬೇಕು. -ಡಾ.ಎಚ್.ಟಿ.ಪೋತೆ

# ಬೇಕಾಬಿಟ್ಟಿ ಬೈಕ್ ನಿಲುಗಡೆ, ಪರದಾಡಿದ ಆಂಬುಲೆನ್ಸ್ ವಾಹನ

• ಉದಯವಾಹಿನಿ ಕೊಲ್ಹಾರ

ಪಟ್ಟಣದ ಗಾಂಧೀಜಿ ಸರ್ಕಲ್ ಬಳಿ ಬ್ಯಾಂಕ ಆಪ್ ಇಂಡಿಯಾ ಎದುರುಗಡೆ ರಸ್ತೆಯ ಮೇಲೆ ಬೇಕಾಬಿಟ್ಟಿಯಾಗಿ ಬೈಕ್‌ಗಳನ್ನು ನಿಲ್ಲಿಸಿದ ಹಿನ್ನೆಲೆಯಲ್ಲಿ ಆಂಬುಲೆನ್ಸ್ ವಾಹನ ದಾರಿಯಿಲ್ಲದೇ ಪರದಾಡುವ ಘಟನೆ ಸಂಭವಿಸಿದೆ.

ಬ್ಯಾಂಕ್ ಆಪ್ ಇಂಡಿಯಾ ಹತ್ತಿರದ ಮನೆಯಿಂದ ರೋಗಿಯನ್ನು ಆಸ್ಪತ್ರೆಗೆ ಸಾಗಿಸಲು ಆಂಬುಲೆನ್ಸ್ ವಾಹನ ಬಂದಿತ್ತು. ಆದರೆ ಅದೇ ರಸ್ತೆ ಮೇಲೆ ಬ್ಯಾಂಕ್ ಗೆ ಬರುವ ಗ್ರಾಹಕರು ಬೈಕ್‌ಗಳನ್ನು ಪಕ್ಕಕ್ಕೆ ಪಾಕಿರ್‌ಂಗ್ ಮಾಡದೆ ರಸ್ತೆ ಮೇಲೆ ಬೇಕಾಬಿಟ್ಟೀಯಾಗಿ ನಿಲ್ಲಿಸಿ ಹೋಗಿದ್ದಾರೆ. ಅದೇ ಮಾರ್ಗವಾಗಿ ತುರ್ತು ರೋಗಿಯನ್ನು ಆಸ್ಪತ್ರೆಗೆ ಸಾಗಿಸಲು ಹೊರಟಿದ್ದ ಆಂಬುಲೆನ್ಸ್ ವಾಹನ ಮುಂದೆ ಹೋಗಲು ದಾರಿಯಿಲ್ಲದೆ ಪರದಾಡಿದ ಚಾಲಕ ಬೇರೆ ದಾರಿ ಹುಡುಕಿಕೊಂಡು ಹೋಗುವಂತಾಗಿದೆ. ನಿತ್ಯ ಈ ಬ್ಯಾಂಕ್ ಮುಂದೆ ತಿರುಗಾಡುವ ಜನರಿಗೆ ಈ ಗೋಳಾಟ ತಪಿದ್ದಲ್ಲ. ಬ್ಯಾಂಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಈ ಬಗ್ಗೆ



ಉದಯವಾಹಿನಿ ಚಿತ್ರ

ಯಾವುದೇ ತಲೆ ಕೆಡಿಸಿಕೊಳ್ಳುವುದಿಲ್ಲ. ಈ ಕುರಿತು ಸಾಕಷ್ಟು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು ಅವರು ಗಮನ ಹರಿಸುತ್ತಿಲ್ಲ. ನಿತ್ಯ ಕಸ ವಿಲೇವಾರಿ ವಾಹನಕ್ಕೂ ಕೂಡಾ ಸಾಕಷ್ಟು ತೊಂದರೆಯಾಗುತ್ತಿದೆ ಎಂದು ಅಲ್ಲಿನ ನಿವಾಸಿಗಳಾದ ಸಂದೀಪ್ ನೀಲವಾಣಿ ಶಿವಾನಂದ ಚೌಡಪ್ಪಗೋಳ ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಬ್ಯಾಂಕ್ ನವರ ಮೇಲೆ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಬ್ಯಾಂಕ್ ಬಂದ್ ಮಾಡಿಸಲಾಗುವದು ಎಂದು ಎಚ್ಚರಿಕೆ ನೀಡಿದ್ದಾರೆ.

# ಸಂಜೀವಿನಿ ಮಹಿಳಾ ಒಕ್ಕೂಟದ ಹಣ ದುರ್ಬಳಕೆ: ಮುಚ್ಚಿಹಾಕಲು ಮತ್ತೊಂದು ತನಿಖಾ ತಂಡ?

• ಉದಯವಾಹಿನಿ ಯಲಬುರ್ಗಾ

ತಾಲ್ಲೂಕಿನ ತುಮ್ಮರಗುದ್ದಿ ಗ್ರಾಮದ ಪ್ಯಾಟಿ ಬಸವೇಶ್ವರ ಸಂಜೀವಿನಿ ಮಹಿಳಾ ಒಕ್ಕೂಟದಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ, ವರದಿ ಸಲ್ಲಿಸಿದ್ದರೂ ಮತ್ತೊಮ್ಮೆ ತನಿಖಾ ತಂಡ ರಚಿಸಿ ಅನಗತ್ಯ ವಿಳಂಬ ಹಾಗೂ ಪ್ರಕರಣ ಮುಚ್ಚಿಹಾಕುವ ಹುನ್ನಾರ ನಡೆದಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ಫೆಬ್ರುವರಿಯಲ್ಲಿ ಮೂವರು ಅಧಿಕಾರಿಗಳನ್ನೊಳಗೊಂಡ ತನಿಖಾ ತಂಡ ಸಮಗ್ರ ಮಾಹಿತಿ ಸಂಗ್ರಹಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಿದ್ದರೂ ಆ ವರದಿ ಪ್ರಕಾರ ಕ್ರಮಕ್ಕೆ ಮುಂದಾಗದೇ ನಿರ್ಲಕ್ಷ್ಯ ವಹಿಸಿದ್ದಾರೆ. ಕಾಣದ ಕೈಗಳು ಈ ಪ್ರಕರಣದ ಪರಿಸಮಾಪ್ತಿಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸುತ್ತಿವೆ. ಈ ಹಿನ್ನೆಲೆಯಲ್ಲಿ ಮತ್ತೊಂದು ತನಿಖಾ ತಂಡ ರಚಿಸಿ ವರದಿ ಸಲ್ಲಿಸುವಂತೆ ತಾ.ಪಂ ಇಒ ಆದೇಶಿಸಿದ್ದು, ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ. ಒಕ್ಕೂಟಗಳ ಕಾರ್ಯನಿರ್ವಹಣೆಯ ಕುರಿತು ಕಾಲಕಾಲಕ್ಕೆ ಪರಿಶೀಲನೆ ಮಾಡಿ, ಸರ್ಕಾರಕ್ಕೆ ವರದಿ



ಉದಯವಾಹಿನಿ ಚಿತ್ರ

ಸಲ್ಲಿಸಬೇಕಾದ ತಾಲ್ಲೂಕು ಮಟ್ಟದ ಕಾರ್ಯಕ್ರಮಗಳ ವ್ಯವಸ್ಥಾಪಕರು ಸರಿಯಾಗಿ ಕೆಲಸ ಮಾಡದೇ ಉದಾಸೀನ ತೋರಿದ್ದರಿಂದ ಸುಮಾರು ಒಂದೂವರೆ ವರ್ಷಗಳಿಂದಲೂ ಹಣಕಾಸಿನ ಲೆಕ್ಕಪತ್ರಗಳಿಲ್ಲದೆ ದುರ್ಬಳಕೆಯಾಗಿದೆ. ಮುಖ್ಯ ಬರಹಗಾರ್ತಿ ಹಣ ದುರುಪಯೋಗ ಮಾಡಿಕೊಂಡ ಬಗ್ಗೆ ಗ್ರಾಮಸ್ಥರು ದೂರು ನೀಡಿದ ಕಾರಣ ಈ ಪ್ರಕರಣ ಬಯಲಿಗೆ ಬಂದಿತ್ತು. ಆದರೆ, ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿ ಹೊತ್ತ ಅಧಿಕಾರಿಯ ಬೇಜವಾಬ್ದಾರಿತನ ಎದ್ದು ಕಾಣುತ್ತಿದ್ದರೂ ಅವರನ್ನೇ ತನಿಖಾ ತಂಡದ ಸದಸ್ಯರನ್ನಾಗಿ ನಿಯೋಜಿಸಿದ್ದನ್ನು ಗಮನಿಸಿದರೆ, ವ್ಯವಸ್ಥಿತ ರೀತಿಯಲ್ಲಿ ಈ ಪ್ರಕರಣವನ್ನು ಮುಚ್ಚಿ ಹಾಕುವ ಎಲ್ಲಾ ಪ್ರಯತ್ನ ನಡೆಯುತ್ತಿದೆ. ಹಣ ದುರ್ಬಳಕೆಯ ಬಗ್ಗೆ ಸರ್ಕಾರದ ಗಮನಕ್ಕೆ ತರುವಲ್ಲಿ ವಿಫಲರಾದವರು, ತನಿಖೆಯನ್ನು ಯಾವ ರೀತಿ ಕೈಗೊಂಡು ವರದಿ ತಯಾರಿಸಬಲ್ಲರು ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಒಕ್ಕೂಟದಲ್ಲಿ ಹಣ ದುರ್ಬಳಕೆಯಾಗಿದ್ದರಿಂದಲೇ ಈಗಾಗಲೇ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಮಾಡಿದ್ದರೂ ಕ್ರಮಕ್ಕೆಗೊಳ್ಳದೇ ಮತ್ತೊಂದು ಸಮಿತಿ ರಚನೆ ಮಾಡಿದ್ದು ಸರಿಯಲ್ಲ. ಸ್ಥಳೀಯ ಜನಪ್ರತಿನಿಧಿಗಳು ಅಧಿಕಾರಿಗಳ ಮುಖಾಂತರ ಪ್ರಕರಣವನ್ನು ಮುಕ್ತಾಯಗೊಳಿಸುವ ಸರ್ವ ಪ್ರಯತ್ನ ನಡೆಯುತ್ತಿದೆ.

# ಪ್ರತಾಪುರ ಗ್ರಾಮದಲ್ಲಿ ಅವ್ಯವಸ್ಥೆ: ಸಾಮೂಹಿಕ ಶೌಚಾಲಯ ಇಲ್ಲದೆ ದುರ್ಗಂಧ

• ಉದಯವಾಹಿನಿ ಬಸವಕಲ್ಯಾಣ

ತಾಲ್ಲೂಕಿನ ಪ್ರತಾಪುರ ಗ್ರಾಮದಲ್ಲಿ ಸಾಮೂಹಿಕ ಶೌಚಾಲಯಗಳಿಲ್ಲದೆ ಅಸ್ವಚ್ಛತೆ ತಾಂಡವವಾಡುತ್ತಿದೆ. ಗ್ರಾಮ ಪಂಚಾಯಿತಿ ಪಕ್ಕದಲ್ಲೇ ಜನರು ಬಹಿರ್ದೆಸೆಗೆ ಬರುತ್ತಿದ್ದು ಮೂಗು ಮುಚ್ಚಿಕೊಂಡು ಕಚೇರಿ ಪ್ರವೇಶಿಸಬೇಕಾದ ಪರಿಸ್ಥಿತಿ ಇದ್ದರೂ ಸಂಬಂಧಿತರು ನಿರ್ಲಕ್ಷ್ಯ ತಾಳಿದ್ದಾರೆ.

ಬಸವಕಲ್ಯಾಣದಿಂದ ಬರುವ ರಸ್ತೆ. ವೀರಭದ್ರೇಶ್ವರ ದೇವಸ್ಥಾನದ ಸುತ್ತಲಿನಲ್ಲಿ, ಗ್ರಾಮ ಪಂಚಾಯಿತಿ ಕಚೇರಿಯ ಹಿಂದುಗಡೆಯ ಭಾಗದಲ್ಲಿ, ಮಸೀದಿ ಹತ್ತಿರದಿಂದ ಕೆರೆಗೆ ಹೋಗುವ ರಸ್ತೆ, ಡೋಮ ಗಣೇಶ ರಸ್ತೆ, ತಾಂಡಾ ರಸ್ತೆಯಲ್ಲಿ ಎಲ್ಲೆಂದರಲ್ಲಿ ಜನರು ಶೌಚ ಮಾಡುತ್ತಾರೆ. ಹೀಗಾಗಿ ಈ ಭಾಗದಲ್ಲಿ ಹೋಗಬೇಕಾದರೆ ದುರ್ಗಂಧ ಸೂಸುತ್ತದೆ. ನಡೆದುಕೊಂಡು ಹೊಲಗಳಿಗೆ ಹೋಗುವುದಕ್ಕೆ ಕಷ್ಟವಾಗಿದೆ. ಎದುರಿನಿಂದ ವಾಹನಗಳು ಬಂದಾಗ ದ್ವಿಚಕ್ರ ವಾಹನಗಳನ್ನು ಪಕ್ಕಕ್ಕೆ ಸರಿಸಿದರೆ ಅವುಗಳ ಗಾಲಿಗಳಿಗೆ ಹೊಲಸು ಹತ್ತುತ್ತಿದೆ ಎಂಬುದು ಜನರ ಗೋಳಾಗಿದೆ. ಸರ್ಕಾರಿ ಇಲಾಖೆಯ ಅಂಕಿ ಸಂಖ್ಯೆ ಪ್ರಕಾರ ಗ್ರಾಮದಲ್ಲಿ ಮನೆಗೊಂದು ಶೌಚಾಲಯಗಳಿವೆ. ಆದರೂ, ಅನೇಕರು ನಾನಾ ಕಾರಣಗಳಿಗಾಗಿ

> ಗ್ರಾಮದಲ್ಲಿ ಸಾಮೂಹಿಕ ಶೌಚಾಲಯ ಒಂದೂ ಇಲ್ಲ. ಈಚೆಗೆ ಪ್ರಸ್ತಾವ ಕಳುಹಿಸಿದ್ದರಿಂದ ಅಗತ್ಯ ಇರುವ ಕಡೆಯಲ್ಲಿ ಒಂದನ್ನು ಕಟ್ಟಿಸಲು ಮಂಜೂರಾತಿ ದೊರೆತಿದೆ. -ಚಂದ್ರಾಮ ಧೂಳಖೇಡ, ಪಿಡಿಒ

ಅವುಗಳನ್ನು ಬಳಸುತ್ತಿಲ್ಲ. ಆದ್ದರಿಂದ ಬೆಳಿಗ್ಗೆ ಮತ್ತು ಸಂಜೆ ರಸ್ತೆ ಪಕ್ಕದಲ್ಲಿ ಶೌಚಕ್ಕೆ ಕುಳಿತವರ ಸಾಲು ಕಾಣುತ್ತದೆ. ಮಹಿಳೆಯರು ಹೆಚ್ಚಿನ ಸಂಕಟ ಅನುಭವಿಸುತ್ತಿದ್ದು ಸಾಮೂಹಿಕ ಶೌಚಾಲಯಗಳ ವ್ಯವಸ್ಥೆ ಮಾಡಬೇಕು ಎಂದು ಗ್ರಾಮಸ್ಥರು ಪಿಡಿಒ ಮತ್ತಿತರೆ ಅಧಿಕಾರಿಗಳಿಗೆ ಸಾಕಷ್ಟು ಸಲ ಮನವಿ ಸಲ್ಲಿಸಿದ್ದರೂ ಪ್ರಯೋಜನ ಆಗಿಲ್ಲ. ಇಂದಿರಾ ನಗರ ಓಣಿಯಲ್ಲಿ ರಸ್ತೆ, ಚರಂಡಿ ಮತ್ತಿತರೆ ಮೂಲ ಸೌಕರ್ಯಗಳಿಲ್ಲದೆ ತೊಂದರೆ ಆಗಿದೆ. ಮಳೆಗಾಲದಲ್ಲಿ ಕಚ್ಚಾ ರಸ್ತೆಗಳಲ್ಲಿ ಕೆಸರು ಆಗುವುದರಿಂದ ಅಂಥದರಲ್ಲಿ ನಡೆದುಕೊಂಡು ಹೋಗುವುದಕ್ಕೆ ಮಹಿಳೆಯರು ಮತ್ತು ಮಕ್ಕಳು



ಉದಯವಾಹಿನಿ ಚಿತ್ರ

ಹರಸಾಹಸ ಪಡಬೇಕಾಗುತ್ತದೆ. ಇಲ್ಲಿನ ವ್ಯವಸ್ಥೆ ಸುಧಾರಣೆಗಾಗಿ ಅನೇಕ ಸಲ ಪ್ರತಿಭಟನೆ ಕೈಗೊಂಡರೂ ಯಾರೂ ಲಕ್ಷ ಹರಿಸಿಲ್ಲ. ಇನ್ನು ಮುಂದಾದರೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಗ್ರಾಮದಲ್ಲಿ ಮೂಲಸೌಕರ್ಯ ಒದಗಿಸಲು ಹಾಗೂ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಸಾಮೂಹಿಕ ಶೌಚಾಲಯ ಕಟ್ಟುವುದಕ್ಕೆ ಪ್ರಯತ್ನಿಸಲಾಗುವುದು ಎಂದು ಗ್ರಾಮ ಪಂಚಾಯಿತಿ ಪಿಡಿಒ ಚಂದ್ರಾಮ ಧೂಳಖೇಡ ಹೇಳಿದ್ದಾರೆ.

**ನಗರ ವ್ಯಾಪ್ತಿಗೊಳಪಡಿಸುವ ಬೇಡಿಕೆ:** ಗ್ರಾಮವು ಬಸವಕಲ್ಯಾಣ ನಗರದಿಂದ ಕೆಲವೇ ಕಿ.ಮೀ ಅಂತರದಲ್ಲಿದ್ದು ಇದನ್ನು ನಗರಸಭೆ ವ್ಯಾಪ್ತಿಗೆ ಒಳಪಡಿಸಲು ಹಲವಾರು ಸಲ ಆಗ್ರಹಿಸಲಾಗಿದೆ. ಹೈದರಾಬಾದ್ ನಿಜಾಮ್ ಆಡಳಿತದ ಕಾಲದಲ್ಲಿ ಇದು ಜಿಲ್ಲಾ ಕೇಂದ್ರ ಆಗಿತ್ತು. ಅಂದಿನ ಕಚೇರಿ ಈಗಲೂ ಇದೆ. ಈಗ ಜಿಲ್ಲಾ ಪಂಚಾಯಿತಿಯ ಕೇಂದ್ರವಾಗಿದೆ. ಮಹಾರಾಷ್ಟ್ರ ಇಲ್ಲಿಂದ ಕೇವಲ 4 ಕಿ.ಮೀ ಅಂತರದಲ್ಲಿದ್ದು ಅಲ್ಲಿನ ವ್ಯಾಪಾರ ಕೇಂದ್ರಗಳಿಗೆ ಈ ಊರನ್ನು ದಾಟಿ ಹೋಗಲು ರಸ್ತೆ ಇದೆ. ಆದ್ದರಿಂದ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು' ಎಂಬುದು ಜನರ ಆಗ್ರಹವಾಗಿದೆ.

# ಕ್ಷಯರೋಗವನ್ನು ದೂರ ಮಾಡೋಣ, ಕ್ಷಯರೋಗಿಯನ್ನಲ್ಲ

## ನಾವು ಕ್ಷಯರೋಗವನ್ನು ಕೊನೆಗಾಣಿಸಿ, ಕ್ಷಯ (ಟಿಬಿ) ಮುಕ್ತ ಭಾರತವನ್ನ ನಿರ್ಮಿಸೋಣ, ಅದಕ್ಕೆ ಎಲ್ಲರ ಸಹಕಾರ ಮುಖ್ಯ

• ಉದಯವಾಹಿನಿ ಚಿತ್ರದುರ್ಗ

ಕ್ಷಯರೋಗ ನಿಗದಿತ ಡಾಟ್ ಚಿಕಿತ್ಸೆಯಿಂದ ಗುಣಪಡಿಸಬಹುದಾದ ಖಾಯಿಲೆ, ನಾವು ಕ್ಷಯರೋಗವನ್ನು ಕೊನೆಗಾಣಿಸಿ, ಕ್ಷಯ (ಟಿಬಿ) ಮುಕ್ತ ಭಾರತವನ್ನ ನಿರ್ಮಿಸೋಣ, ಅದಕ್ಕೆ ಎಲ್ಲರ ಸಹಕಾರ ಮುಖ್ಯ, ಎಂದು ಬೆಳಗಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾಕ್ಟರ್ ನಳಿನಾಕ್ಷಿ ಅವರು ಹೇಳಿದರು. ಚಿತ್ರದುರ್ಗ ಜಿಲ್ಲಾ ಕ್ಷಯರೋಗ ನಿಯಂತ್ರಣ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಬೆಳಗಟ್ಟ ಮತ್ತು ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಹಯೋಗದೊಂದಿಗೆ ಇಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮ ಆಯೋಜಿಸಿ ಅವರು ಮಾತನಾಡಿದರು.

**ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮ**

ಕ್ಷಯ ರೋಗವು ಅತ್ಯಂತ ಹಳೆಯ ಸಾಂಕ್ರಾಮಿಕ ರೋಗ, 1882 ರಲ್ಲಿ ರಾಬರ್ಟ್ ಕೋಚ್ ಎಂಬ ವಿಜ್ಞಾನಿಯು ಕ್ಷಯ ರೋಗವು ಮೈಕೋ ಬ್ಯಾಕ್ಟೀರಿಯಾ ಟ್ಯೂಬರ್ ಕ್ಯುಲೋಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಬರುತ್ತದೆ ಎಂದು ಕಂಡುಹಿಡಿದರು ಅದರ ಪ್ರಯುಕ್ತ ಪ್ರತಿ ವರ್ಷ ಮಾರ್ಚ್ 24ರಂದು ವಿಶ್ವ



ಉದಯವಾಹಿನಿ ಚಿತ್ರ

> ಕ್ಷಯ ರೋಗವು ಭಾರತದ ಸಾರ್ವಜನಿಕ ಆರೋಗ್ಯಕ್ಕೆ ಅತಿ ದೊಡ್ಡ ತೊಂದರೆಗಳಲ್ಲಿ ಒಂದಾಗಿರುತ್ತದೆ. ಪ್ರತಿ ವರ್ಷ ವಿಶ್ವದಲ್ಲೇ ಅತಿ ಹೆಚ್ಚು ಜನ ಕ್ಷಯರೋಗಕ್ಕೆ ತುತ್ತಾಗುತ್ತಾರೆ, ಈ ಹಿನ್ನಲೆಯಲ್ಲಿ ಭಾರತವನ್ನು ಕ್ಷಯ ಮುಕ್ತಗೊಳಿಸಲು ಸಮುದಾಯವು ಒಗ್ಗೂಡಿ ಸಹಕಾರದೊಂದಿಗೆ ಕೆಲಸ ಮಾಡಬೇಕಾಗಿದೆ. ಕ್ಷಯ ರೋಗವು ಕ್ಷಯರೋಗಿಯು ಕೆಮ್ಮಿದಾಗ ಅಥವಾ ಸೀನಿದಾಗ ಹೊರಬರುವ ತುಂತುರು ರೋಗಾಣುಗಳು ಗಾಳಿಯ ಮೂಲಕ ಆರೋಗ್ಯವಂತ ವ್ಯಕ್ತಿಯ ಶ್ವಾಸಕೋಶ ಸೇರಿ ಸೋಂಕು ಉಂಟುಮಾಡುತ್ತದೆ , ಕ್ಷಯ ರೋಗಿಗಳು ಕೆಮ್ಮುವಾಗ ಹಾಗೂ ಸೇರುವಾಗ ಬಾಯಿ ಮತ್ತು ಮೂಗಿನ ಹತ್ತಿರ ಕರವಸ್ತ್ರ ಇಟ್ಟುಕೊಳ್ಳಬೇಕು, ರೋಗಿಯ ಕಫವನ್ನು ಮನಸ್ಸಿಗೆ ಬಂದ ಕಡೆ ಉಗಿಯಬಾರದು, ಕಫವನ್ನು ಡಬ್ಬಿಯಲ್ಲಿ ಶೇಖರಿಸಿ ಗುಂಡಿ ತೋಡಿ ಮುಚ್ಚಬೇಕು, ನವಜಾತ ಶಿಶುಗಳಿಗೆ ಬಿಸಿಜಿ ಲಸಿಕೆ ಹಾಕಿಸಬೇಕು, ಕ್ಷಯ ರೋಗ ನಿಯಂತ್ರಣ ಸಾರ್ವಜನಿಕ ಕಾಳಜಿ ಅಗಬೇಕು. -ಮಹೇಶ್, ಆರೋಗ್ಯ ನೀರಿಕ್ಷಣಾಧಿಕಾರಿ

ಕ್ಷಯರೋಗ ದಿನಾಚರಣೆಯನ್ನು ಆಚರಿಸುತ್ತಾ, ನವೀನ ಆವಿಷ್ಕಾರಗಳನ್ನು ಗೌರವಿಸಲು ಕ್ಷಯರೋಗದ ವಿರುದ್ಧದ ಹೋರಾಟದಲ್ಲಿ ಜಗತ್ತನ್ನು ಒಂದುಗೂಡಿಸಲು ಕ್ಷಯ ರೋಗ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದರು. ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಕಫ, ಕಫದಲ್ಲಿ ರಕ್ತ ಬರುವುದು, ಸಂಜೆ ವೇಳೆ ಜ್ವರ, ಮೈ ಬೆವರುವುದು, ತೂಕ ಕಡಿಮೆಯಾಗುವುದು, ಹಸಿವಾಗದೆ ಇರುವುದು, ಇಂತಹ ಲಕ್ಷಣಗಳಿರುವವರು ಸಮೀಪದ ಸರ್ಕಾರಿ ಆಸ್ಪತ್ರೆಗಳಲ್ಲಿ ಕಫ ಪರೀಕ್ಷೆ ಮಾಡಿಸಿ, ರೋಗ ದೃಢಪಟ್ಟಲ್ಲಿ ನಿಗದಿತ ಚಿಕಿತ್ಸೆ ಉಚಿತವಾಗಿ ಸರ್ಕಾರದಿಂದ ಲಭ್ಯವಿದ್ದು ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆದು ಮುಂಜಾಗ್ರತಾ ಕ್ರಮ ಪಾಲಿಸಿ ರೋಗ ನಿರ್ಮೂಲನೆಗೆ ಸಹಕರಿಸಬೇಕೆಂದರು.

ನಿಮ್ಮ ಮನೆಯಲ್ಲಿ ಹಾಗೂ ಸುತ್ತಮುತ್ತಲಿನವರಲ್ಲಿ ಟಿಬಿ ರೋಗದ ಲಕ್ಷಣಗಳು ಕಂಡುಬಂದಲ್ಲಿ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಪರೀಕ್ಷೆಗಾಗಿ ಕಳುಹಿಸಬೇಕು ಟಿಬಿ ರೋಗವನ್ನು ಬೇಗ ಪತ್ತೆ ಹಚ್ಚಿ ಪೌಷ್ಟಿಕ ಆಹಾರ ಸೇವಿಸಿ ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ಪಡೆದುಕೊಂಡು ಕ್ಷಯಮುಕ್ತ ಭಾರತವಾಗಲು ಸಹಕರಿಸಿ ಎಂದರು.

ಕಾರ್ಯಕ್ರಮದಲ್ಲಿ ಅಂಗನವಾಡಿ ಮೇಲ್ವಿಚಾರಕರಾದ ವಿನೋದಮ್ಮ, ಪಿ.ಹೆಚ್.ಸಿ.ಓ. ನಿರ್ಮಲಾ, ಶುಭಶ್ರೀ, ಅಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಇತರರು ಉಪಸ್ಥಿತರಿದ್ದರು.

# ಮಿನಿ ನ್ಯೂಸ್

## ಅನುಭವ ಮಂಟಪಕ್ಕೆ ಹೆಚ್ಚುವರಿ ರೂ.50 ಕೋಟಿ ಬಿಡುಗಡೆ: ಈಶ್ವರ ಖಂಡ್ರೆ

• ಉದಯವಾಹಿನಿ ಬೀದರ್

ಬಸವಕಲ್ಯಾಣದ ನೂತನ ಅನುಭವ ಮಂಟಪ ಕಾಮಗಾರಿಗೆ ಪೂರಕ ಬಜೆಟ್‌ನಲ್ಲಿ ಹೆಚ್ಚುವರಿ ರೂ. 50 ಕೋಟಿ ನೀಡಲಾಗಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ. ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಲು ತಮ್ಮ ಕೋರಿಕೆಯ ಮೇರೆಗೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೆಚ್ಚುವರಿಯಾಗಿ 50 ಕೋಟಿ ಪೂರಕ ಬಜೆಟ್‌ನಲ್ಲಿ ನೀಡಿ, ಬಿಡುಗಡೆ ಮಾಡಿದ್ದಾರೆ ಎಂದು ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

2027ರ ಮಾರ್ಚ್ ತಿಂಗಳೊಳಗೆ ಆಧುನಿಕ ಅನುಭವ ಮಂಟಪ ಕಾಮಗಾರಿ ಪೂರ್ಣಗೊಳಿಸಲು ಸಂಕಲ್ಪ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕಾಮಗಾರಿಯ ವೇಗ ಹೆಚ್ಚಿಸಲು ಹೆಚ್ಚುವರಿಯಾಗಿ ರೂ.50 ಕೋಟಿ ಬಿಡುಗಡೆ ಮಾಡುವಂತೆ ಕೋರಿದ್ದೆ. ಅದಕ್ಕೆ ಮುಖ್ಯಮಂತ್ರಿಗಳು ಪೂರಕ ಬಜೆಟ್‌ನಲ್ಲಿ ಅವಕಾಶ ಮಾಡಿ, ಹಣ ಬಿಡುಗಡೆ ಮಾಡಿದ್ದಾರೆ. ನಾವು ನುಡಿದಂತೆ ನಡೆದಿದ್ದೇವೆ ಎಂದು ತಿಳಿಸಿದ್ದಾರೆ.

770 ಅಮರ ಗಣಂಗಳ ಹೆಸರಲ್ಲಿ ಅವರ ಚಿತ್ರವಿರುವ ಕಂಬಗಳಲ್ಲಿ 770 ವಚನಗಳನ್ನು ಕೆತ್ತಿಸಲಾಗಿದೆ. ವೈಜ್ಞಾನಿಕವಾಗಿ ಇಷ್ಟಲಿಂಗ ಪೂಜೆಯ ಪರಿಕಲ್ಪನೆಯನ್ನು ಈ ಆಧುನಿಕ ಅನುಭವ ಮಂಪಟದಲ್ಲಿ ಅಳವಡಿಸಲಾಗಿದೆ. ಕಾಮಗಾರಿ ಅತ್ಯಂತ ವೇಗವಾಗಿ ನಡೆಯುತ್ತಿದೆ. ಮುಂದಿನ ವರ್ಷ ಬಸವ ಜಯಂತಿಯೊಳಗೆ ಈ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವುದು ಸರ್ಕಾರದ ಸಂಕಲ್ಪವಾಗಿದೆ ಎಂದಿದ್ದಾರೆ.

## ಕ್ಲಬ್ ಮೇಲೆ ದಾಳಿ: 60 ಮಂದಿ ಸೆರೆ

• ಉದಯವಾಹಿನಿ ಬಳ್ಳಾರಿ

ಬಳ್ಳಾರಿ ನಗರದ ಖಾಸಗಿ ರಿಕ್ರಿಯೇಷನ್ ಕ್ಲಬ್ ಮೇಲೆ ಬ್ರೂಸ್‌ಪೇಟೆ ಪೊಲೀಸರು ರಾತ್ರಿ ದಾಳಿ ನಡೆಸಿ ಜೂಜಾಟದಲ್ಲಿ ತೊಡಗಿದ್ದ 60 ಮಂದಿಯನ್ನು ಬಂಧಿಸಿದ್ದಾರೆ. ಈ ವೇಳೆ ರೂ.1,77,820 ನಗದು, 810 ಕಾರ್ಡ್‌ಗಳು, ಎರಡು ಡಿವಿಆರ್‌ಗಳು, 303 ಟೋಕನ್‌ಗಳು ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಳ್ಳಾರಿ ನಗರದ ನಟರಾಜ್ ಸಿನಿಮಾ ಮಂದಿರ ಹತ್ತಿರದ ರಿಕ್ರಿಯೇಷನ್ ಪ್ರೈವೇಟ್ ಲಿಮಿಟೆಡ್ ಕ್ಲಬ್‌ನಲ್ಲಿ ಅಕ್ರಮ ಜೂಜಾಟ ನಡೆಯುತ್ತಿದೆ ಎಂಬ ಮಾಹಿತಿ ಸಿಕ್ಕಿತ್ತು. ಅದನ್ನು ಆಧರಿಸಿ ದಾಳಿ ನಡೆಸಲಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ. ಪೆನ್ನೇಕರ್ ತಿಳಿಸಿದ್ದಾರೆ. ಇದೇ ಕ್ಲಬ್ ಮೇಲೆ 2025ರ ಆಗಸ್ಟ್‌ನಲ್ಲಿ ಅಂದಿನ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರೂ ದಾಳಿ ನಡೆಸಿದ್ದರು.

## ಮೂರು ಪೋಕ್ಸೋ ಪ್ರಕರಣ ದಾಖಲು

• ಉದಯವಾಹಿನಿ ಕಂಪ್ಲಿ

ಇಲ್ಲಿನ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆಯಲ್ಲಿ ಮಹಿಳೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಚರ್ಚಿಸಲಾಯಿತು.

ತಹಶೀಲ್ದಾರ್ ಜೂಗಲ ಮಂಜುನಾಯಕ ಮಾತನಾಡಿ, ಮೂರು ತಿಂಗಳಲ್ಲಿ ಮಕ್ಕಳ ಸಹಾಯವಾಣಿಯ ನಾಲ್ಕು ಕರೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 3 ಸುಳ್ಳು ಕರೆಗಳಾಗಿದ್ದವು. ಒಂದು ಬಾಲ್ಯ ವಿವಾಹ ತಡೆಗಟ್ಟಿದೆ. 3 ಪೋಕ್ಸೋ ಪ್ರಕರಣ ದಾಖಲಾಗಿವೆ ಎಂದು ವಿವರಿಸಿದರು. ಸರ್ಕಾರಿ, ಖಾಸಗಿ ಶಾಲೆ, ವಸತಿ ನಿಲಯಗಳಲ್ಲಿನ ಬೋಧಕ, ಬೋಧಕೇತರ ಸಿಬ್ಬಂದಿಗೆ ಪೋಕ್ಸೋ ಕಾಯ್ದೆ ಕುರಿತು ತರಬೇತಿ ನೀಡಬೇಕು. ಅವರು ಪೊಲೀಸ್ ಇಲಾಖೆಯಿಂದ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಪ್ರಮಾಣಪತ್ರಗಳನ್ನು ತಪ್ಪದೆ ಪಡೆಯುವಂತೆ ಸೂಚಿಸಲಾಗಿದೆ. ಏಳು ದಿನಗಳಿಗಿಂತ ಹೆಚ್ಚು ಗೈರಾದ ಮಕ್ಕಳ ಪಟ್ಟಿಯನ್ನು ಪಿಡಿಒಗಳಿಗೆ ಸಂಬಂಧಿಸಿದವರು ನೀಡಬೇಕು ಎಂದು ತಿಳಿಸಿದರು.

ತಾಲ್ಲೂಕಿನ ಅಪ್ರಾಪ್ತಯೊಬ್ಬರು ಬೇರೆ ತಾಲ್ಲೂಕಿನಲ್ಲಿ ಅಭ್ಯಾಸ ಮಾಡುವಾಗ ಗರ್ಭಿಣಿಯಾಗಿರುವುದು ವರದಿಯಾಗಿದೆ. ಈ ಮಧ್ಯೆ ಬಾಲಕಿ ಪೋಷಕರು ವಿಳಾಸ ಬದಲಿಸಿದ್ದಾರೆ. ಸದ್ಯ ಬಾಲಕಿಯ ವಿವರ ಅರಿಯಬೇಕಾದರೆ ವಿಳಾಸ ಪತ್ತೆ ಮಾಡಬೇಕಿದ್ದು, ಈ ಕುರಿತು ಸಭೆಯಲ್ಲಿ ಅಧಿಕಾರಿಗಳು ಗಂಭೀರ ಚರ್ಚೆ ನಡೆಸಿದರು.

## ಆತಂಕ ಸೃಷ್ಟಿಸಿದ ವಿಮಾನ ಹಾರಾಟ

• ಉದಯವಾಹಿನಿ ನರಸಿಂಹರಾಜಪುರ

ತಾಲ್ಲೂಕಿನ ಸೀತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಮ್ಮನೆ, ಬೆಳ್ಳೂರು, ಹಾತೂರು, ಮಲ್ಲಂದೂರು ಭಾಗದಲ್ಲಿ ತಳ ಮಟ್ಟದಲ್ಲಿ ವಿಮಾನವೊಂದು ಹಾರಿದ್ದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತು. ಬೆಳಿಗ್ಗೆ 8.30ರಿಂದ ಬೆಮ್ಮನೆ, ಬೆಳ್ಳೂರು, ಹಾತೂರು, ಮಲ್ಲಂದೂರು ಭಾಗದಲ್ಲಿ ನೆಲ ಮಟ್ಟದಿಂದ ಕೇವಲ 300 ಅಡಿ ಎತ್ತರದಲ್ಲಿ 3 ಬಾರಿ ವಿಮಾನ ಹಾರಾಟ ನಡೆಸಿದೆ. ಬೆಳ್ಳೂರಿನ ಬಿಎಸ್‌ಎನ್‌ಎಲ್ ಟವರ್ ಮೇಲ್ಭಾಗದಲ್ಲೇ ವಿಮಾನ ಹಾರಾಡಿರುವುದನ್ನು ಗ್ರಾಮಸ್ಥರು ಅಚ್ಚರಿ ಹಾಗೂ ಗಾಬರಿಯಿಂದ ವೀಕ್ಷಣೆ ಮಾಡಿದರು. ಬೆಳಿಗ್ಗೆ 9.30 ರವೇಳೆಗೆ ಇದೇ ಊರಿನ ಮತ್ತೊಂದು ದಿಕ್ಕಿನಲ್ಲಿ ಕೆಳ ಭಾಗದಲ್ಲಿ ವಿಮಾನ ಹಾರುತ್ತಿರುವುದನ್ನು ಗ್ರಾಮಸ್ಥರು ವೀಕ್ಷಣೆ ಮಾಡಿದರು. ಮತ್ತೆ 11 ಗಂಟೆಗೆ ಮತ್ತೊಂದು ಬಾರಿ ವಿಮಾನ ಹಾರಿದೆ. ಪ್ರಸ್ತುತ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿರುವುದರಿಂದ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿ ಪೊಲೀಸರು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

## ಶಿವಮೊಗ್ಗದಲ್ಲಿ ಸಿಲೆಂಡರ್ ಕೊರತೆ: ಬಾಗಿಲು ಮುಚ್ಚುವ ಸ್ಥಿತಿಯಲ್ಲಿ ಹೋಟೆಲ್‌ಗಳು

• ಉದಯವಾಹಿನಿ ಸಾಗರ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ತಲೆದೋರಿರುವ ಬಿಕ್ಕಟ್ಟಿನಿಂದ ವಾಣಿಜ್ಯ ಸಿಲಿಂಡರ್ ಪೂರೈಕೆ ನಿಂತಿರುವುದು ಇಲ್ಲಿನ ಹೋಟೆಲ್ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ. ಕೆಲವು ಹೋಟೆಲ್‌ಗಳು ಈಗಾಗಲೆ ಬಂದ್ ಆಗಿದ್ದರೆ, ಮತ್ತೆ ಕೆಲವು ಹೋಟೆಲ್‌ಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ ಸ್ಥಳಾವಕಾಶವಿರುವ ಹೋಟೆಲ್‌ಗಳ ಮಾಲೀಕರು ಸಿಲಿಂಡರ್ ಬಳಕೆ ಹೊರತಾಗಿ ಪರ್ಯಾಯ ಮಾರ್ಗಗಳ ಮೊರೆ ಹೋಗಿದ್ದಾರೆ. ಕಳೆದ ವಾರ ಮೂರು ದಿನ ಸಿಲಿಂಡರ್ ಕೊರತೆಯಿಂದ ಹೋಟೆಲ್ ಬಂದ್ ಮಾಡಿದ್ದೆವು. ಈಗ ಕಟ್ಟಿಗೆ ಒಲೆಯಲ್ಲಿ ಮನೆಯ ಬಳಿ ಅಡುಗೆ ತಯಾರಿಸಿ ಹೋಟೆಲ್‌ಗೆ ತಂದು ನಿಯಮಿತ ತಿಂಡಿ ತಿನಿಸು ಪೂರೈಸುವ ಮೂಲಕ ಗ್ರಾಹಕರಿಗೆ ಸೇವೆ ನೀಡುತ್ತಿದ್ದೇವೆ ಎನ್ನುತ್ತಾರೆ ಇಲ್ಲಿನ ಮೈಸೂರು ಕೆಫೆ ಹೋಟೆಲ್‌ನ ಮಾಲೀಕ ಭಾಸ್ಕರ ಶೆಟ್ಟಿ.

ಯುದ್ಧದ ಪರಿಸ್ಥಿತಿ ತಿಳಿಯಾಗುವ ಸಂದರ್ಭ ಕಾಣದೆ ಇರುವುದರಿಂದ ಪರ್ಯಾಯ ಮಾರ್ಗಗಳನ್ನು ಹುಡುಕುವುದು ಅನಿವಾರ್ಯವಾಗಿದೆ. ಹೀಗಾಗಿ ಬೆಂಗಳೂರಿನಿಂದ ಹೊಗೆರಹಿತ ದೇಸಿ ಒಲೆ ತರಿಸಲಾಗಿದೆ. ಕಟ್ಟಿಗೆ ಒಲೆಯಲ್ಲಿ ಅನ್ನ ಬೇಯಿಸಲಾಗುತ್ತಿದೆ. ಉತ್ತರ ಭಾರತದ ರೋಟಿ ತಯಾರಿಕೆಗೆ ಇಂಡಕ್ಷನ್ ಸ್ಟವ್ ಬಳಸಲಾಗುತ್ತಿದೆ ಎಂದು ಪವಿತ್ರ ಹೋಟೆಲ್ ಮಾಲೀಕ ಎಂ. ನಾಗರಾಜ್ ತಿಳಿಸಿದರು.

ಈ ನಡುವೆ 80ರ ದಶಕದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದ್ದ ಸೀಮೆಎಣ್ಣೆ ಪಂಪ್ ಸ್ಟವ್ ಮತ್ತೆ ಚಾಲ್ತಿಗೆ ಬಂದಿದೆ. ಸೀಮೆಎಣ್ಣೆ ಲಭ್ಯವಿಲ್ಲದೆ ಇರುವುದರಿಂದ ಕೆಲವು ಹೋಟೆಲ್‌ನವರು ಈ ಸ್ಟವ್‌ಗಳಿಗೆ ಡೀಸೆಲ್ ಬಳಸಿ ಕಾಫಿ, ಟೀ ತಯಾರಿಸುತ್ತಿದ್ದಾರೆ.

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು.

**ವೃಷಭ** ಯಾವುದೇ ಆಸ್ತಿಯಲ್ಲಿ ಹೂಡಿಕೆ ಮಾಡುವುದು ನಿಮಗೆ ಮಾರಕವಾಗಬಹುದು, ಸಾಧ್ಯವಾದಷ್ಟು ಈ ವಿಷಯಗಳಲ್ಲಿ ಹೂಡಿಕೆ ಮಾಡುವುದನ್ನು ತಪ್ಪಿಸಿ. ಆರೋಗ್ಯ ಚೆನ್ನಾಗಿಲ್ಲದ ಒಬ್ಬ ಸಂಬಂಧಿಯನ್ನು ಭೇಟಿ ಮಾಡಿ.

**ಮಿಥುನ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಇಲ್ಲಿಯವರೆಗೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದವರು ಜೀವನದಲ್ಲಿ ಹಣದ ಪ್ರಾಮುಖ್ಯತೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

**ಕರ್ಕಾಟಕ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಸಿಂಹ** ಇಂದು ನೀವು ಲಾಭ ಪಡೆಯುತ್ತೀರಿ – ಕುಟುಂಬದ ಸದಸ್ಯರು ಸಕಾರಾತ್ಮಕ ರೀತಿಯಲ್ಲಿ ನಿಮಗೆ ಪ್ರತಿಕ್ರಿಯಿಸುತ್ತಾರೆ. ನೀವು ಇಂದು ಪ್ರೀತಿಯ ಸಮೃದ್ಧ ಚಾಕೊಲೇಟ್‌ನ ರುಚಿ ಸವಿಯುತ್ತೀರಿ.

**ಕನ್ಯಾ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ, ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು.

**ತುಲಾ** ನೀವು ಎಲ್ಲದರಲ್ಲೂ ಅದ್ಭುತವಾಗಿರುತ್ತೀರಿ. ಹೆಚ್ಚಿನ ವಿಷಯಗಳು ನೀವು ಬಯಸಿದಂತೆ ಅಗುವ ಒಂದು ಉಜ್ವಲವಾದ ಹಾಸ್ಯದಿಂದ ತುಂಬಿದ ದಿನ. ಇದು ಮದುವೆಯ ಉಜ್ವಲವಾದ ದಿನವನ್ನು ಅನುಭವಿಸುವ ದಿನವಾಗಿದೆ.

**ವೃಶ್ಚಿಕ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಧನಸ್ಸು** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ಮಕರ** ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ.

**ಕುಂಭ** ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ತರಬಹುದು. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ.

**ಮೀನ** ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ. ನಿಮ್ಮ ಪ್ರೀತಿಪಾತ್ರರಿಗೆ ಒರಟಾಗಿ ಏನೂ ಹೇಳಬೇಡಿ–ಇಲ್ಲದಿದ್ದರೆ ನೀವು ನಂತರ ಪಶ್ಚಾತ್ತಾಪಪಡಬಹುದು.

### ಪವನ, ಸೌರಶಕ್ತಿ ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ನಿಯಮ ಉಲ್ಲಂಘನೆ: ಪಾಲನೆಯಾಗದ ಸಿಇಒ ಆದೇಶ

# ತೆರಿಗೆ ವಂಚನೆ: ಗ್ರಾ.ಪಂ.ಗಳಿಗೆ ಕೋಟ್ಯಂತರ ಆದಾಯ ಖೋತಾ

• **ಉದಯವಾಹಿನಿ, ಜಗಳೂರು**

ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯ ತೊರೆಸಾಲು ಪ್ರದೇಶದಲ್ಲಿ ವಿವಿಧ ಕಂಪನಿಗಳು ವ್ಯಾಪಕವಾಗಿ ಪವನ ವಿದ್ಯುತ್ (ವಿಂಡ್ ಪವರ್) ಹಾಗೂ ಸೌರಶಕ್ತಿ (ಸೋಲಾರ್) ವಿದ್ಯುತ್ ಉತ್ಪಾದನಾ ಘಟಕಗಳನ್ನು ಅಳವಡಿಸಿದ್ದು, ಸರ್ಕಾರದ ವಿವಿಧ ಇಲಾಖೆಗಳ ನಡುವಿನ ಸಮನ್ವಯ ಕೊರತೆಯಿಂದ ಗ್ರಾಮ ಪಂಚಾಯಿತಿಗಳು ಹಾಗೂ ಸರ್ಕಾರಕ್ಕೆ ಕೋಟಿಗಟ್ಟಲೆ ಆದಾಯ ನಷ್ಟವಾಗುತ್ತಿದೆ.



ಕಂಪನಿಗಳ ತೆರಿಗೆ ವಂಚನೆ ಕುರಿತ ದೂರುಗಳ ಮೇರೆಗೆ ಜಿಲ್ಲಾ ಪಂಚಾಯಿತಿ ಸಿಇಒ ಗಿತ್ತೆ ಮಾಧವ ವಿಠಲರಾವ್ ಅವರು ಜ. 9ರಂದು ಮುನ್ನೂರು, ಹನುಮಂತಾಪುರ ಹಾಗೂ ಹಿರೇಮಲ್ಲನಹೊಳೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಿಡಿಒ ಮತ್ತು ಕ್ಲೀನ್ ಮ್ಯಾಕ್ಸ್ ಕಂಪನಿ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ್ದರು. ಕಂಪನಿಗಳು ಪ್ರತಿ ಘಟಕಕ್ಕೆ ಇ–ಸ್ವತ್ತು ಖಾತೆಯನ್ನು ಪಡೆಯಲು 8 ದಿನಗಳೊಳಗಾಗಿ ಪಂಚಾಯಿತಿಗಳಿಗೆ ದಾಖಲೆ ಸಲ್ಲಿಸಬೇಕು ಎಂದು ಆದೇಶಿಸಿದ್ದರು.

ಕಂಪನಿಯು ಪಂಚಾಯಿತಿಗಳಿಗೆ ಇದುವರೆಗೂ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಸಿಇಒ ಆದೇಶವನ್ನು ಗಾಳಿಗೆ ತೂರಿದೆ. ಕರ್ನಾಟಕ ಗ್ರಾಮ ಪಂಚಾಯತ್ ರಾಜ್ ತೆರಿಗೆ ಮತ್ತು ಶುಲ್ಕಗಳ ನಿಯಮಗಳು– 2025ರ ಅನ್ವಯ ಹಿರೇಮಲ್ಲನಹೊಳೆ ಪಂಚಾಯಿತಿಗೆ ರೂ. 20.30 ಕೋಟಿ ತೆರಿಗೆ ಪಾವತಿಸುವಂತೆ ಕ್ಲೀನ್ ಮ್ಯಾಕ್ಸ್ ಕಂಪನಿಗೆ ನೋಟಿಸ್ ನೀಡಲಾಗಿದೆ.

ಆದರೆ, ಸರ್ಕಾರದ ಹೊಸ ತೆರಿಗೆ ನೀತಿಯ ವಿರುದ್ಧ ಕ್ಲೀನ್ ಮ್ಯಾಕ್ಸ್ ಕಂಪನಿ ಹೈಕೋರ್ಟ್ ಮೆಟ್ಟಿಲೇರಿದೆ. ತಾಲ್ಲೂಕಿನಲ್ಲಿ ನೂರಾರು ಪವನ ವಿದ್ಯುತ್ ಹಾಗೂ ಸೌರಶಕ್ತಿ ವಿದ್ಯುತ್ ಉತ್ಪಾದನಾ ಘಟಕಗಳು ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರಕ್ಕೆ ಕೋಟಿಗಟ್ಟಲೆ ಆದಾಯ ನಷ್ಟವಾಗುತ್ತಿದೆ. ಅಂದಾಜು 1,000 ಎಕರೆಗೂ ಅಧಿಕ ಭೂಪ್ರದೇಶದಲ್ಲಿ ಸೌರಶಕ್ತಿ ಘಟಕಗಳಿದ್ದು, 300 ಎಕರೆ ಭೂಮಿಯನ್ನು ಮಾತ್ರ ಪರಿವರ್ತನೆ ಮಾಡಿಸಲಾಗಿದೆ. ಯಾವುದೇ ಘಟಕಕ್ಕೂ ಇ–ಖಾತೆ ಮಾಡದೇ ಹಲವು ವರ್ಷಗಳಿಂದ ಕೋಟಿಗಟ್ಟಲೆ ತೆರಿಗೆ ವಂಚಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ ಮತ್ತು ಸಿಇಒಗೆ ದೂರು ನೀಡಲಾಗಿದೆ ಎಂದು ದೊಣೆಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜ್ ಎಚ್.ಟಿ. ತಿಳಿಸಿದರು.





ಉದಯವಾಹಿನಿ ಚಿತ್ರ

**ಜಿಲ್ಲಾಧಿಕಾರಿ ಮತ್ತು ಸಿಇಒಗೆ ದೂರು**

ತಾಲ್ಲೂಕಿನಲ್ಲಿ ಹಿಂದೆಂದೂ ಕಂಡರಿಯದಂತೆ ಪವನ ಹಾಗೂ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸಲಾಗಿದ್ದರೂ ಸ್ಥಳೀಯ ಗ್ರಾಮ ಪಂಚಾಯಿತಿಗಳು ಹಾಗೂ ಸರ್ಕಾರಕ್ಕೆ ಕಂದಾಯ ಹಾಗೂ ಭೂಪರಿವರ್ತನೆಯಿಂದ ಬರುವ ಕೋಟಿಗಟ್ಟಲೆ ಆದಾಯ ಸೋರಿ ಹೋಗುತ್ತಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಇದ್ದು, ಈ ಬಗ್ಗೆ ಕೇಳುವವರೇ ಇಲ್ಲವಾಗಿದೆ' ಎಂದು ದೂರಿದರು.

ತಾಲ್ಲೂಕಿನ ಹಿರೇಮಲ್ಲನಹೊಳೆ ಹಾಗೂ ಮುನ್ನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಕ್ಲೀನ್ ಮ್ಯಾಕ್ಸ್ ಕಂಪನಿಯು ಸೋಲಾರ್ ಘಟಕಗಳನ್ನು ಅಳವಡಿಸಿದ್ದು, ರಾಜ್ಯದಲ್ಲಿ ಪಾವಗಡದ ನಂತರದ ಅತಿದೊಡ್ಡ ಸೋಲಾರ್ ಘಟಕ ಇದಾಗಿದೆ.

ತಾಲ್ಲೂಕಿನಲ್ಲಿ 200ಕ್ಕೂ ಹೆಚ್ಚು ಪವನ ವಿದ್ಯುತ್ ಘಟಕಗಳನ್ನು ಅಳವಡಿಸಲಾಗಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚು ಘಟಕಗಳು ತಲೆ ಎತ್ತುತ್ತಿವೆ. ತೆರಿಗೆ ವಂಚನೆ ಮುಂದುವರಿದಿದೆ. ಈ ಬಗ್ಗೆ ಕ್ಲೀನ್ ಮ್ಯಾಕ್ಸ್ ಕಂಪನಿ ಕ್ಲಸ್ಟರ್ ಮುಖ್ಯಸ್ಥ ಉಮಾ ಮಹೇಶ್ವರನ್ ಅವರನ್ನು ಸಂಪರ್ಕಿಸಿದಾಗ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

**ಯಾವುದೇ ಘಟಕಕ್ಕೂ ಇ–ಖಾತೆ ಇಲ್ಲ**

**ಹಿರೇಮಲ್ಲನಹೊಳೆ ಹಾಗೂ ದೊಣೆಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ 26 ಪವನ ವಿದ್ಯುತ್ ಘಟಕ ಅಳವಡಿಸಿದ್ದು ಯಾವುದೇ ಘಟಕಕ್ಕೆ ಇ–ಖಾತೆ ಮಾಡಿಸಿಕೊಂಡಿಲ್ಲ. ಭೂ– ಪರಿವರ್ತನೆಯಾಗಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ಕಂಪನಿ ಸಲ್ಲಿಸಿಲ್ಲ ಎಂದು ಪಿಡಿಒ ಕೊಟ್ರೇಶ್ ಮಾಹಿತಿ ನೀಡಿದರು.**

**ಕೋಟಿಗೂ ಹೆಚ್ಚು ಕಂದಾಯ ಬಾಕಿ**

**ಪಂಚಾಯತ್ ರಾಜ್ ಕಾಯ್ದೆಯ ಹೊಸದರಪಟ್ಟಿ ಅನ್ವಯ ಹಿರೇಮಲ್ಲನಹೊಳೆ ಪಂಚಾಯಿತಿ ಒಂದರಲ್ಲೇ ಕ್ಲೀನ್ ಮ್ಯಾಕ್ಸ್ ಕಂಪನಿ ರೂ. 20 ಕೋಟಿಗೂ ಹೆಚ್ಚು ಕಂದಾಯ ಬಾಕಿ ಉಳಿಸಿಕೊಂಡಿದೆ. ಈ ಬಗ್ಗೆ ಯಾವುದೇ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿಲ್ಲ. ಮಾರ್ಚ್ 31ರೊಳಗಾಗಿ ಬಾಕಿ ಹಣ ಕಟ್ಟುವಂತೆ ನೋಟಿಸ್ ನೀಡಲಾಗುವುದು. ವಿಂಡ್ ಮಿಲ್ ಜಮೀನಿನ ಜಾಗಕ್ಕೆ ಸಂಬಂಧಿಸಿದಂತೆ ಕಂದಾಯ ಕಟ್ಟಿಲ್ಲ. ಟವರ್‌ಗಳಿಗೆ ಮಾತ್ರ ಹಳೆಯ ದರದಂತೆ ಸ್ವಲ್ಪ ಪಾವತಿಯಾಗಿದೆ. ಕಂಪನಿಗಳು ಇ–ಸ್ವತ್ತು ಖಾತೆ ಮಾಡಿಕೊಂಡಿಲ್ಲ. ತೆರಿಗೆ ಪಾವತಿಸುವಂತೆ ಪಿಡಿಒ ಕೇಳಲು ಹೋದಾಗ ಕ್ಲೀನ್ ಮ್ಯಾಕ್ಸ್ ಕಂಪನಿಯವರೇ ದಬ್ಬಾಳಿಕೆ ಮಾಡಿ ಪಿಡಿಒ ಮೇಲೆ ಮೊಕದ್ದಮೆ ದಾಖಲಿಸಿದ್ದಾರೆ.**

## ಈರುಳ್ಳಿ ಬೀಜೋತ್ಪಾದನೆ ಬೆಳೆಯಲ್ಲಿ ತೆನೆ ಕಾಳು ಕಟ್ಟದಿರುವುದು ರೈತ ಕಂಗಾಲು

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಾದ್ಯಂತ ತೋಟಗಾರಿಕೆ ಬೆಳೆಗಾರರು ರೈತರು ಬೆಳೆದಿರುವ ಈರುಳ್ಳಿ ಬೀಜೋತ್ಪಾದನ ಬೆಳೆಯ ತೆನೆಯಲ್ಲಿ ಕಾಳು ಕಟ್ಟದೆ ಇರುವುದರಿಂದ ರೈತರು ಕಂಗಾಲಾಗಿದ್ದಾರೆ.

ತಾಲ್ಲೂಕಿನ ಐನೋಳ್ಳಿ, ಸಾಲೇಬಿರನಳ್ಳಿ, ಸುಲೇಪೇಟ, ದಸ್ತಾಪೂರ, ಅಣವಾರ, ಚಂದ್ರಂಪಳ್ಳಿ, ದೇಗಲಮಡಿ, ಕೊಳ್ಳೂರ, ನಾಗಾಯಿದ್ಲಾಯಿ, ಗಾರಂಪಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬೆಳೆದ ರೈತರು ಈರುಳ್ಳಿ ಬೀಜೋತ್ಪಾದನ ಬೆಳೆಯ ತೆನೆಯಲ್ಲಿ ಕಾಳು ಕಟ್ಟದೆ ಇರುವುದರಿಂದ ಇಳುವರಿ ಬಾರದೆ ರೈತರು ಮಾಡಿದ ಖರ್ಚು ಕೂಡ ಬರುವುದು ಕಷ್ಟವಾಗಲಿದೆ.

ಈರುಳ್ಳಿ ಬೀಜ ಉತ್ಪಾದಕ ರೈತರು ಹವಾಮಾನ ವೈಪಾರಿತ್ಯದ ಹಾಗೂ ಜೇನುನೊಣಗಳ ಕೊರತೆಯಿಂದ ಚನ್ನಾಗಿ ಬೆಳೆದ ಫಸಲು ತೆನೆಬಿಟ್ಟರು ಸಮರ್ಪಕವಾಗಿ ಕಾಳುಕಟ್ಟದೆ ಇರುವುದರಿಂದ ರೈತರು ಸಂಕಷ್ಟಕೆ ಸಿಲುಕಿದ್ದಾರೆ,ಈರುಳ್ಳಿ ಬೀಜೋತ್ಪಾನ ಬೆಳೆಯು ಚನ್ನಾಗಿ ಬಂದರೆ ಏಕರೆಗೆ 6–8 ಚೀಲ ಬೆಳೆ ಬೇಳೆಯಬಹುದು ಆದರೆ ಈವರ್ಷ ಈರುಳ್ಳಿ ಬೀಜೋತ್ಪಾದನ ಬೆಳೆಯ ತೆನೆಯಲ್ಲಿ ಕಾಳುಕಟ್ಟದೆ ತೆನೆಯಲ್ಲಿ ಶೇಕಡಾ 40ರಷ್ಟು ಕಾಳು ತುಂಬದೆಯಿರುವುದು ರೈತರು ಕಂಗಾಲಾಗಿದ್ದಾರೆ ಹಾಗಾಗಿ ತೋಟಗಾರಿಕೆ ಇಲಾಖೆಗೆ ರಾಜ್ಯ ಸರ್ಕಾರವು ರೈತರು ಬೆಳೆದ ಈರುಳ್ಳಿ ಬೀಜೋತ್ಪಾದನ ಬೆಳೆನಷ್ಟ ಸರ್ವೆ ನಡೆಸಲು ನಿರ್ದೇಶನ ನೀಡಿ ಪರಿಹಾರ ನೀಡಬೇಕೆಂದು ರೈತ ಹೋರಾಟಗಾರ ಗೋಪಾಲ ಗಾರಂಪಳ್ಳಿ ಒತ್ತಾಯಿಸಿದ್ದಾರೆ.



ಉದಯವಾಹಿನಿ ಚಿತ್ರ

> **ಸಮರ್ಪಕವಾಗಿ ಪರಾಗಸ್ಪರ್ಶ ಆಗದೆ ಈರುಳ್ಳಿ ಬೀಜೋತ್ಪಾದನ ಬೆಳೆಯು ತೆನೆಯಲ್ಲಿ ಕಾಳು ಕಟ್ಟದೆ ಇರುವುದು ಕಂಡುಬರುತ್ತಿದಂತೆ ಮಹಾರಾಷ್ಟ್ರಕ್ಕೆ ಹೋಗಿ 27ಸಾವಿರ ಖರ್ಚು ಮಾಡಿ 06ಡಬ್ಬಿ ಜೇನುನೋಣ ತಂದು ಬೆಳೆಯಲ್ಲಿ ಬೀಡಲಾಗಿತ್ತು ಪರಾಗಸ್ಪರ್ಶ ಚನ್ನಾಗಿಯಾಗಿದೆ ಇದರಿಂದ ಅಲ್ಪಸಲ್ಪ ಬೆಳೆಯ ತೆನೆಯಲ್ಲಿ ಕಾಳು ಹಿಡಿದಿದೆ ಶೇಕಡಾ 30ರಷ್ಟು ತೆನೆಯಲ್ಲಿ ಕಾಳು ಹಿಡಿದಿಲ್ಲ ಇದರಿಂದ ನಮಗೆ ರೈತರಿಗೆ ತುಂಬಾ ನಷ್ಟವಾಗುತ್ತಿದೆ, ಸರ್ಕಾರ ರೈತರ ನೇರವಿಗೆ ಧಾವಿಸಬೇಕು.**
>
> **–ಮಶಾಕ್ ಲಕಪತಿ**

## ಎಂಡಿಎಂಎ ಮಾರಾಟ: ಮೂವರ ಬಂಧನ



• **ಉದಯವಾಹಿನಿ, ಮಂಗಳೂರು**

ನಗರದ ಪಂಪ್ವೆಲ್ ಹಾಗೂ ಎಕ್ಕೂರು ಪರಿಸರದಲ್ಲಿ ಆಟೋರಿಕ್ಷಾದಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನಿಷೇಧಿತ ಮಾದಕ ವಸ್ತುವಾದ ಎಂಡಿಎಂಎ ಮಾರಾಟ ಮಾಡುತ್ತಿದ್ದ ಜಾಲವನ್ನು ಮಂಗಳೂರು ಸಿಸಿಬಿ ಪೊಲೀಸರು ಭೇದಿಸಿದ್ದಾರೆ. ಮಾ.22ರಂದು ನಡೆದ ಈ ಕಾರ್ಯಾಚರಣೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ಆರೋಪಿಗಳಾದ ಹೈದರ್ ಅಲಿಯಾಸ್ ಹೈದರ್ ಆಲಿ(53) ತೊಕ್ಕೊಟ್ಟು,ಮೊಹಮ್ಮದ್ ಸಜಾದ್ (29) ತೊಕ್ಕೊಟ್ಟು ಮತ್ತು ಜೈಸನ್ ಮೆನೆಜಸ್ (26) ಮೂಲತಃ ಉಡುಪಿ ಜಿಲ್ಲೆಯ ಶಿರ್ವದವನಾಗಿದ್ದು, ಪ್ರಸ್ತುತ ಉಜ್ಜೋಡಿಯ ಫ್ಲ್ಯಾಟ್‌ನಲ್ಲಿ ವಾಸವಾಗಿದ್ದಾನೆ.

ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಪೊಲೀಸರು, ಆರೋಪಿಗಳು ಆಟೋ ರಿಕ್ಷಾದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದಾಗ ವಶಕ್ಕೆ ಪಡೆದಿದ್ದಾರೆ. ಬಂಧಿತರಿಂದ 2,50,000 ರೂ. ಮೌಲ್ಯದ 26 ಗ್ರಾಂ ಎಂಡಿಎಂಎ , ನಗದು 37,000 ರೂ., 5 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

## ಜೂಜಾಟ: 9 ಜನರ ಬಂಧನ

• **ಉದಯವಾಹಿನಿ, ಕಲಬುರಗಿ**

ತಾಲ್ಲೂಕಿನ ಭೀಮಳ್ಳಿ ಗ್ರಾಮದ ಸೀಮಾಂತರದಲ್ಲಿರುವ ಬಾವನ ತೆಗ್ಗಾದ ಹತ್ತಿರವಿರುವ ಬೇವಿನ ಮರದ ಕೆಳಗೆ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಬ್–ಅರ್ಬನ್ ಪೊಲೀಸ್ ಠಾಣೆ ಪಿಐ ನಟರಾಜ ಲಾಡೆ, ಸಿಬ್ಬಂದಿಗಳಾದ ಪುಂಡಲೀಕ, ಜಗದೀಶ, ಗುಂಡೇರಾಯ ಮತ್ತು ಶಶಿಕಾಂತ ಅವರು ದಾಳಿ ನಡೆಸಿ 9 ಜನರನ್ನು ಬಂಧಿಸಿದ್ದಾರೆ. ಸಾಗರ ಗುತ್ತೇದಾರ, ಈಶ್ವರ ಚೆನ್ನಶೆಟ್ಟಿ, ಮೋಯಿನ್ ಶೇಖ್, ನಂದಕುಮಾರ ಬಿರಾದಾರ, ರವೀಂದ್ರ ಪಾಟೀಲ, ನಾಗಪ್ಪ ಪ್ಯಾಡಸಂಗಿ, ಸಾಗರ ಜೀವನ, ರಾಜಕುಮಾರ ಹಡಪದ ಮತ್ತು ರಮೇಶ ಜೀವನ ಎಂಬುವವರನ್ನು ಬಂಧಿಸಿ 12 ಸಾವಿರ ರೂ.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಬ್ಬಿನ ಬಾಕಿ ಬಿಲ್ ಪಾವತಿಗೆ ಆಗ್ರಹ

• **ಉದಯವಾಹಿನಿ, ಅಫಜಲಪುರ**

ಇತ್ತೀಚಿಗೆ ಸರಬರಾಜು ಆದ ಕಬ್ಬಿನ ಬಾಕಿ ಬಿಲ್ ಪಾವತಿ ಮಾಡುವಂತೆ ಸ್ವಾಭಿಮಾನಿ ಕಬ್ಬು ಬೆಳೆಗಾರರ ಐಕ್ಯ ಹೋರಾಟ ಸಮಿತಿ ಹಾಗೂ ಕರ್ನಾಟಕ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ರೈತ ಹೋರಾಟಗಾರರಾದ ಶ್ರೀಮಂತ ಬಿರಾದಾರ, ಗುರು ಚಾಂದಕವಟೆ ಮಾತನಾಡುತ್ತಾ ಕಾರ್ಖಾನೆಗಳಿಗೆ ಇತ್ತೀಚಿಗೆ ರೈತರು ಕಬ್ಬು ಸರಬರಾಜು ಮಾಡಿದ್ದು ಕಾರ್ಖಾನೆಯ ವಂತಿಕೆ 50 ರೂಪಾಯಿ, ಮತ್ತು ಸರ್ಕಾರದ ವಂತಿಕೆ 50 ರೂಪಾಯಿ ಒಟ್ಟು 100 ರೂಪಾಯಿಯಂತೆ ರೈತರ ಖಾತೆಗೆ ಜಮಾ ಮಾಡಬೇಕಾಗಿತ್ತು. ಆದರೆ ಬಾಕಿ ಹಣ ಜಮಾ ಮಾಡದೆ ಸತಾಯಿಸಲಾಗುತ್ತಿದೆ. ಇದರಿಂದ ರೈತರಿಗೆ ಸಮಸ್ಯೆ ಆಗುತ್ತಿದೆ. ಹೀಗಾಗಿ ಕೂಡಲೇ ಬಾಕಿ ಹಣ ಪಾವತಿಗೆ ಜಿಲ್ಲಾಧಿಕಾರಿಗಳು ಕ್ರಮ ವಹಿಸಬೇಕೆಂದು ಒತ್ತಾಯಿಸಿದ ಅವರು ರೈತರ ಹೊಲಗಳಲ್ಲಿ ಪಂಪಸೇಟ್‌ಗಳಿಗೆ ಹಗಲಿನಲ್ಲಿ 7 ಗಂಟೆ ವಿದ್ಯುತ್ ನೀಡಬೇಕು.

ರಾತ್ರಿ ವೇಳೆ ಸಿಂಗಲ್ ಪೇಸ್ ವಿದ್ಯುತ್ ನೀಡಬೇಕು, ಭೀಮಾ ಏತನೀರಾವರಿ ಕಾಲುವೆಸ್ವಚ್ಛಗೊಳಿಸುವ ಕೆಲಸ ಕಳಪೆಯಾಗಿ ಆಗುತ್ತಿದ್ದು ಕೂಡಲೇ ಅದನ್ನು ತಡೆಗಟ್ಟಿ ಗುಣಮಟ್ಟದಲ್ಲಿ ಸ್ವಚ್ಛಗೊಳಿಸಬೇಕು, ಸಕ್ಕರೆ ಕಾರ್ಖಾನೆಯವರು ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಮಳ್ಳೀ ನೀರು ರಸ್ತೆಗೆ ಹಾಕುತ್ತಿರುವುದನ್ನು ತಪ್ಪಿಸಬೇಕು ಎಂದು ಮನವಿ ಮೂಲಕ ಆಗ್ರಹಿಸಿದರು. ಈ ಸಂದರ್ಭದಲ್ಲಿ ಶರಣಪ್ರಸಾದ್ ನೂಲಾ, ಬಸಯ್ಯ ಆಕಾಶಮಠ, ಯಲ್ಲಪ್ಪ ನೆಲ್ಲಗಿ, ಬಸವರಾಜ ಕಲಶೆಟ್ಟಿ, ಮುತ್ತಪ್ಪ ತೆಲ್ಲೂರ, ದತ್ತುಗೌಡ ಪಾಟೀಲ್, ಭೀಮಣ್ಣಗೌಡ, ಶರಣು ದೀವಾನಜೀ, ಬಸವರಾಜ ಹೇರೂರ ಸೇರಿದಂತೆ ಅನೇಕರು ಇದ್ದರು.

## ಮುಧೋಳ ಆಣಿಕಲ್ಲು ಸಹಿತ ಮಳೆ ವರ್ಷದ ಮೊದಲ ಮಳೆಗೆ ಜನರು ಖುಷ್

• **ಉದಯವಾಹಿನಿ ಯಲಬುರ್ಗಾ**

ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಿಗೆ ಆಣಿಕಲ್ಲು ಸಹಿತ ಮಳೆರಾಯ ತಂಪೆರೆದಿದೆ. ವರ್ಷದ ಮೊದಲ ಮಳೆಗೆ ಜನರು ಸಂತಸಗೊಂಡಿದ್ದಾರೆ.



ಉದಯವಾಹಿನಿ ಚಿತ್ರ

ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆ (ಡಿಚಿಟಿ) ಸುರಿದಿದೆ. ಸುಮಾರು ಅರ್ಧ ಗಂಟೆ ಕಾಲ ಸುರಿದ ಆಲಿಕಲ್ಲು ಸಹಿತ ಭಾರಿ ಮಳೆಗೆ ಮುಧೋಳ ಗ್ರಾಮದ ಜನರು ಫುಲ್ ಖುಷ್ ಆಗಿದ್ದಾರೆ. ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಿಗೆ ಮಳೆರಾಯ ತಂಪೆರೆದಿದೆ. ವರ್ಷದ ಮೊದಲ ಮಳೆಗೆ ತಾಲ್ಲೂಕಿನ ಜನರು ಸಂತಸಗೊಂಡಿದ್ದಾರೆ.

## ರೈತರಿಗೆ ವರದಾನವಾದ ಕೃಷಿಹೊಂಡಗಳು

• **ಉದಯವಾಹಿನಿ, ಲಕ್ಷ್ಮೀಶ್ವರ**

ಕೃಷಿ ಇಲಾಖೆ ವತಿಯಿಂದ ತಾಲ್ಲೂಕಿನಲ್ಲಿ ಕೃಷಿಹೊಂಡ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು ಕೃಷಿಹೊಂಡಗಳು ರೈತರಿಗೆ ವರದಾನಗಳಾಗಿವೆ. ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹಾಳಾಗುವ ನೀರನ್ನು ಸಂಗ್ರಹಿಸಿ ಅದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕೃಷಿ ಇಲಾಖೆ ಜಾಗೃತಿ ಮೂಡಿಸುತ್ತಿದ್ದು, ಈ ವರ್ಷ ಲಕ್ಷೇಶ್ವರ ತಾಲ್ಲೂಕಿನಲ್ಲಿ 40 ಕೃಷಿಹೊಂಡಗಳನ್ನು ನಿರ್ಮಿಸಲಾಗಿದೆ.

**ವಿವಿಧ ಅಳತೆಯ ಕೃಷಿಹೊಂಡಗಳು:** ಭೂಮಿಯ ಲಭ್ಯತೆ ಮೇರೆಗೆ ನಾಲ್ಕು ಅಳತೆಗಳಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಲಾಗುವುದು. 12 ಮೀ. ಉದ್ದ, 12 ಮೀ. ಅಗಲ ಮತ್ತು 3 ಮೀ. ಆಳ, 15 ಮೀ. ಉದ್ದ, 15 ಮೀ. ಅಗಲ, 3 ಮೀ. ಆಳ. 18 ಮೀ. ಉದ್ದ, 18 ಮೀ. ಅಗಲ, 3 ಮೀ. ಆಳ ಹಾಗೂ 21 ಮೀ. ಉದ್ದ, 21 ಮೀ. ಅಗಲ, 3 ಮೀ. ಆಳ ಹೀಗೆ ವಿವಿಧ ಆಕಾರದ ಅಳತೆಯ ಕೃಷಿಹೊಂಡಗಳನ್ನು ನಿರ್ಮಿಸಲು ಇಲಾಖೆಯಲ್ಲಿ ಅವಕಾಶ ಇದೆ. ಸದ್ಯ ಲಕ್ಷ್ಮೀಶ್ವರ ತಾಲ್ಲೂಕಿನ ರೈತರು 21 ಮೀ. ಉದ್ದ, 21 ಮೀ. ಅಗಲ, 3 ಮೀ. ಆಳದ ಕೃಷಿ ಹೊಂಡಗಳನ್ನು ಮಾತ್ರ ನಿರ್ಮಿಸಿಕೊಂಡಿದ್ದಾರೆ.

**ನೀರಿನ ಸಂಗ್ರಹ ಸಾಮರ್ಥ್ಯ:** ಅಳತೆಗೆ ತಕ್ಕಂತೆ ಒಂದೊಂದು ಕೃಷಿಹೊಂಡ ಮೂರು ಲಕ್ಷದಿಂದ 12 ಲಕ್ಷ ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿವೆ. ಮಳೆಗಾಲದಲ್ಲಿ ಇಷ್ಟು ಪ್ರಮಾಣದ ನೀರು ವ್ಯರ್ಥವಾಗಿ ಹರಿದು ಹೋಗುತ್ತಿತ್ತು. ಆದರೆ ಕೃಷಿಹೊಂಡ ನಿರ್ಮಾಣ ಮಾಡುವುದರಿಂದ ನೀರನ್ನು ಸಂಗ್ರಹಿಸಿ ಅದನ್ನು ಸದ್ಬಳಕೆ ಮಾಡಿಕೊಳ್ಳಲು ರೈತರಿಗೆ ಉತ್ತಮ ಅವಕಾಶ ಇದೆ.



ಉದಯವಾಹಿನಿ ಚಿತ್ರ

> **ಕೃಷಿಹೊಂಡ ನಿರ್ಮಿಸಿಕೊಳ್ಳುವುದರಿಂದ ಮಳೆ ಕೈಕೊಟ್ಟಾಗ ಸಂಗ್ರಹಗೊಂಡ ನೀರಿನಿಂದ ಒಂದು ಬೆಳೆಯನ್ನಾದರೂ ರೈತರು ಬೆಳೆಯಲು ಸಾಧ್ಯವಾಗುತ್ತದೆ.**
>
> **–ಚಂದ್ರಶೇಖರ ನರಸಮ್ಮನವರ, ಲಕ್ಷ್ಮೀಶ್ವರದ ರೈತ ಸಂಪರ್ಕ ಕೇಂದ್ರದ ಅಧಿಕಾರಿ**

ಲಕ್ಷೇಶ್ವರ ತಾಲ್ಲೂಕಿನ ರೈತರು ನಿರ್ಮಿಸಿಕೊಂಡಿರುವ 21 ಮೀ. ಉದ್ದ, 21 ಮೀ. ಅಗಲ, 3 ಮೀ. ಆಳದ ಕೃಷಿಹೊಂಡಗಳು ಮೂರು ಲಕ್ಷ ಲೀಟರ್ ನೀರು ಸಂಗ್ರಹಿಸುವ ಸಾಮರ್ಥ್ಯ ಹೊಂದಿವೆ. ಖರ್ಚು ವೆಚ್ಚ: 21 ಮೀ. ಉದ್ದ, 21 ಮೀ. ಅಗಲ, 3 ಮೀ. ಆಳದ ಕೃಷಿಹೊಂಡ ನಿರ್ಮಿಸಲು ಎಸ್‌ಸಿ, ಎಸ್‌ಟಿ ರೈತರಿಗೆ ರೂ.1.25 ಲಕ್ಷ ಮತ್ತು ಇತರೆ ರೈತರಿಗೆ ರೂ.1.05 ಲಕ್ಷವನ್ನು ಸರ್ಕಾರ ಇಲಾಖೆ ಮೂಲಕ ಖರ್ಚು ಮಾಡುತ್ತದೆ. ತಾಡಪತ್ರಿ ಮತ್ತು ಸ್ಪಿಂಕ್ಲರ್ ಸೆಟ್‌ಗಳನ್ನೂ ಸಹ ಇಲಾಖೆ ರಿಯಾಯಿತಿ ದರದಲ್ಲಿ ರೈತರಿಗೆ ಕೊಡುತ್ತಿದೆ. ರೈತರು ಕೃಷಿಹೊಂಡಗಳಿಗೆ ತಾಡಪತ್ರಿ ಹಾಕುವುದು ಹೆಚ್ಚು ಉಪಯುಕ್ತ. ಇದರಿಂದ ನೀರು ಬೇಗನೆ ಇಂಗುವುದಿಲ್ಲ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

## ಕೆಪಿಸಿಎಲ್ ನಿಂದ ಹುದ್ದೆ ಭರ್ತಿಯಲ್ಲಿ ಅನ್ಯಾಯ

• **ಉದಯವಾಹಿನಿ, ಬಳ್ಳಾರಿ**



ಕರ್ನಾಟಕ ವಿದ್ಯತ್ ನಿಗಮನಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡುವಲ್ಲಿ ಅನ್ಯಾಯವಾಗಿದೆ ಎಂದು ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿ ಕೀರ್ತಿ ಕಿಶೋರ ಆರೋಪಿಸಿದ್ದಾರೆ. ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಇವರು. ಕೆಪಿಸಿಎಲ್‌ನಿಂದ ಖಾಲಿ ಹುದ್ದೆಗಳಿಗೆ 2017ರಲ್ಲಿ ನೋಟಿಫಿಕೇಷನ್ ಮಾಡಿ, 2018 ಪರೀಕ್ಷೆ ನಡೆದು ಫಲಿತಾಂಶ ತಡೆಹಿಡಿದರು ಇಒ ಬಗ್ಗೆ ಎರಡು ಪ್ರಕರಣ ದಾಖಲಾಗಿತ್ತು. ನ್ಯಾಯಾಲಯ ಮರು ಪರೀಕ್ಷೆ ಮಾಡಲು ಸೂಚಿಸಿತ್ತು. ಮತ್ತೆ 2023 ನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ). ನೆಗಟಿವ್ ಮಾರ್ಕ್ ನಲ್ಲಿ ಫಲಿತಾಂಶ ಪ್ರಕಟಿಸಿತ್ತು. ಆದರೆ ನೋಟಿಫಿಕೇಷನ್ ನಲ್ಲಿ ನೆಗಟಿವ್ ಮಾರ್ಕ್ ಎಂದು ಹೇಳಿರಲಿಲ್ಲ, ಇದರ ವಿರುದ್ಧ ನ್ಯಾಯಾಲಯದ ಮೊರೆ ಹೋದಾಗ ಸಿಂಗಲ್ ಮತ್ತು ಡಬಲ್ ಬೆಂಚ್‌ನಲ್ಲಿ ಪರೀಕ್ಷೆ ಸರಿಯಾಗಿದೆ ಎಂದು ಹೇಳಿತು. ಇದರ ವಿರುದ್ಧ ಮತ್ತೆ ಒಂಬತ್ತು ಜನ ಪ್ರಕರಣ ದಾಖಲಿಸಿದ್ದರು. ಅದಕ್ಕೆ 602 ಜನರು ನ್ಯಾಯಾಲಯದ ಮೊರೆ ಹೋಗಿ. ತೀರ್ಪನ್ನು ಕಾಯ್ದಿರಿಸಿ ನೇಮಕಾತಿಗೆ ಆದೇಶ ಕೋರಿದ್ದರು. ನ್ಯಾಯಾಲಯ 2024ರ ಮಾರ್ಚ್‌ನಲ್ಲಿ ಸಮ್ಮತಿಸಿತ್ತು. ಆದರೂ ನೇಮಕಾತಿ ಆದೇಶ ನೀಡಲಿಲ್ಲ, ನಂತರ ಮೇ ನಲ್ಲಿ ತೀರ್ಪು ಮರು ಪರೀಕ್ಷೆಗೆ ಆದೇಶ ನೀಡಿತು. ಅದರ ವಿರುದ್ಧ ಕೆಪಿಸಿಎಲ್ ನ್ಯಾಯಾಲಯದ ಮೊರೆ ಹೋಗಿತ್ತು. ಇದರ ವಿರುದ್ಧ ಆಯ್ಕೆ ಬಯಸಿದ್ದ ಅಭ್ಯರ್ಥಿಗಳು ಸುಪ್ರೀಂ ಮೊರೆ ಹೋಗಿದ್ದರು. ಅಲ್ಲಿ ಪಾಸಿಟಿವ್ ಮತ್ತು ನೆಗಟಿವ್ ಬಂದವರಿಗೆ ಕೊಡಲಿದೆ ಎಂದು ಕೆಪಿಸಿಎಲ್ ಹೇಳಿತು. ಹೀಗೆ ಸ್ಪಷ್ಟತೆ ಇಲ್ಲದೆ ಪರೀಕ್ಷೆಗಳನ್ನು ನಡೆಸಿ ಅನೇಕರಿಗೆ ಅನ್ಯಾಯ ಮಾಡಿದೆ ಎಂದು ತಿಳಿಸಿದರು.

## ನಕಲಿ ಬಂಗಾರ ನೀಡಿ ವಂಚನೆ: ಮಹಿಳೆ ಬಂಧನ

• **ಉದಯವಾಹಿನಿ, ಉಡುಪಿ**

ನಕಲಿ ಬಂಗಾರ ತೋರಿಸಿ ಮಹಿಳೆಯನ್ನು ವಂಚಿಸಿದ ಪ್ರಕರಣದಲ್ಲಿ ಆರೋಪಿಯನ್ನು ಪಡುಬಿದ್ರಿ ಪೊಲೀಸರು ಬಂಧಿಸಿದ್ದಾರೆ. ದಿನಾಂಕ 13–01–2026 ರಂದು ಮಧ್ಯಾಹ್ನ 2:30ರ ಸುಮಾರಿಗೆ ಕಾಪು ತಾಲ್ಲೂಕಿನ ನಡ್ಸಾಲು ಗ್ರಾಮದ ಪಡುಬಿದ್ರಿ, ಹಳೆ ಅಂಚೆ ಕಚೇರಿ ಬಳಿ ಬಸ್ಸಮ್ಮ ಎಂಬ ಮಹಿಳೆ ನಡೆದುಕೊಂಡು ಹೋಗುತ್ತಿದ್ದಾಗ, ಅಪರಿಚಿತ ಮಹಿಳೆ ಮತ್ತು ಗಂಡಸು ಚಿನ್ನದಂತೆ ಕಾಣುವ 9 ಲಕ್ಷ್ಮಿ ಪೆಂಡೆಂಟ್ ಹೊಂದಿದ ಸರವನ್ನು ತೋರಿಸಿ, ಅದು 6 ಪವನು ತೂಕದ ಚಿನ್ನದ ಸರವೆಂದು ನಂಬಿಸಿದರು. ತುರ್ತು ಹಣದ ಅಗತ್ಯವಿದೆ ಎಂದು ಹೇಳಿ, ಬಸ್ಸಮ್ಮ ಅವರಿಂದ ಸುಮಾರು 2 ಪವನು ತೂಕದ, ಸುಮಾರು ರೂ.1.5 ಲಕ್ಷ ಮೌಲ್ಯದ ಬಂಗಾರದ ಒಡವೆಗಳು ಹಾಗೂ ರೂ.6,000 ನಗದು ಪಡೆದು ಪರಾರಿಯಾದರು. ನಂತರ ಬಸ್ಸಮ್ಮ ಅವರು ಸರವನ್ನು ಪರಿಶೀಲಿಸಲು ಹತ್ತಿರದ ಚಿನ್ನದ ಅಂಗಡಿಗೆ ಹೋದಾಗ ಅದು ನಕಲಿ ಎಂದು ತಿಳಿದುಬಂದಿತು. ಈ ಬಗ್ಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರಿಯಿತು.

### ಅರ್ಥಪೂರ್ಣವಾಗಿ ಡಾ.ಬಾಬು ಜಗಜೀವನ್ ರಾಮ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ: ಟಿ. ವೆಂಕಟೇಶ್

# ಮಹನೀಯರ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ

• **ಉದಯವಾಹಿನಿ ಚಿತ್ರದುರ್ಗ**

ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯನ್ನು ಕೇವಲ ಸರ್ಕಾರಿ ಕಾರ್ಯಕ್ರಮವನ್ನಾಗಿ ನೋಡದೆ, ನಮ್ಮ ಜವಾಬ್ದಾರಿ ಎಂದು ಭಾವಿಸಿ ಅತ್ಯಂತ ಅರ್ಥಪೂರ್ಣವಾಗಿ ಮತ್ತು ಅಚ್ಚುಕಟ್ಟಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಉಭಯ ಮಹನೀಯರ ಜಯಂತಿ ಆಚರಣೆ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಏ.5 ರಂದು ಲಿಡ್ಕರ್ ಭವನದ ಶಿವಶರಣ ಮಾದಾರ ಚನ್ನಯ್ಯ ಸಭಾಭವನದಲ್ಲಿ ಡಾ.ಬಾಬು ಜಗಜೀವನ್ ರಾಮ್ ಅವರ ಜಯಂತಿ ಆಚರಿಸಲಾಗುವುದು. ತರಾಸು ರಂಗಮಂದಿರ ನವೀಕರಣ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರ ಪೂರ್ಣಗೊಳ್ಳಲಿದೆ. ಏ.14 ರಂದು ನವೀಕರಣಗೊಂಡ ತರಾಸು ರಂಗಮಂದಿರ ಉದ್ಘಾಟನೆಯ ಜೊತೆಗೆ ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆಯನ್ನು ಸಹ ಆಚರಿಸಲಾಗುವುದು. ಅವಕಾಶ ವಂಚಿತರಿಗೆ ಪ್ರಾತಿನಿಧ್ಯ ಕಲ್ಪಿಸುವಲ್ಲಿ ಈ ಇಬ್ಬರು ಮಹನೀಯರ ಕೊಡುಗೆ ಮಹತ್ವವಾದುದು. ಸಮಾಜದ ಪ್ರತಿಯೊಂದು ವರ್ಗದವರು ಸಹ ಸಂತಸದಿಂದ ಜಯಂತಿಯಲ್ಲಿ ಪಾಲ್ಗೊಳ್ಳಬೇಕು.



ಉದಯವಾಹಿನಿ ಚಿತ್ರ

**ಸಾಧಕರು ವಿದ್ಯಾರ್ಥಿಗಳನ್ನು ಸನ್ಮಾನಿಸಬೇಕು**

ಜಯಂತಿ ದಿನಗಳಂದು ಪೊಲೀಸ್ ಇಲಾಖೆಯ ಸಲಹೆಯ ಮೇರೆಗೆ ಮೆರವಣಿಗೆ ಮಾರ್ಗವನ್ನು ನಿಗದಿಗೊಳಿಸಲಾಗುವುದು.

ಜಯಂತಿಗಳ ಯಶಸ್ಸಿಗೆ ವಿವಿಧ ಸಮಿತಿಗಳನ್ನು ರಚಿಸಲಾಗುತ್ತದೆ. ವಿವಿಧ ಇಲಾಖೆಗಳಿಂದ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಇಬ್ಬರೂ ಮಹನೀಯರ ಜೀವನ ಸಾಧನೆ ಕುರಿತು ಕರ ಪತ್ರಗಳನ್ನು ಜಯಂತಿ ದಿನಗಳಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಉಪನ್ಯಾಸಕ್ಕಾಗಿ ಸಮುದಾಯದ ಮುಖಂಡರು ಸೂಚಿಸಿದ ಸಂಪನ್ಮೂಲ ವ್ಯಕ್ತಿಗಳನ್ನು ಸಂಪರ್ಕಿಸಿ, ಲಭ್ಯ ಇರುವವರನ್ನು ಆಯ್ಕೆ ಮಾಡಲಾಗುವುದು. ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಎಂದು ಪೌರ ಕಾರ್ಮಿಕರಿಗೆ ಸನ್ಮಾನಿಸಲಾಗುವುದು. ಕಳೆದ ವರ್ಷದಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಗಣ್ಯರನ್ನು ಗುರುತಿಸಿ ಗೌರವಿಸುವ ಪರಂಪರೆ ಜಯಂತಿಯಲ್ಲಿ ಅಳವಡಿಸಲಾಗಿದೆ. ಈ ವರ್ಷವು ಕೂಡ ಕಳೆದ ಬಾರಿ ಗೌರವ ಪಡೆದವರನ್ನು ಹೊರತುಪಡಿಸಿ, ಈ ಬಾರಿ ಹೊಸದಾಗಿ, ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಾಯಕರು ಹಾಗೂ ಉದಯೋನ್ಮುಖ ಸಾಧಕರನ್ನು ಆಯ್ಕೆ ಮಾಡಲಾಗುವುದು. ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸುವ ಮೂಲಕ ಅವರಲ್ಲಿ ಮತ್ತಷ್ಟು ಉತ್ಸಾಹ ತುಂಬುವ ಕೆಲಸ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಹೇಳಿದರು. ಸಭೆಯಲ್ಲಿ ಜಿ.ಪಂ. ಸಿಇಓ ಡಾ.ಆಕಾಶ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ದಲಿತ ಪರ ಸಂಘಟನೆಗಳ ಮುಖಂಡರುಗಳಾದ ಕೆ.ರಾಜಪ್ಪ, ದುರ್ಗ ಹನುಮಂತಪ್ಪ, ತಿಪ್ಪೇಸ್ವಾಮಿ, ಅವಿನಾಶ್, ಡಿ.ಓ.ಮೊರಾರ್ಜಿ, ಅರುಣ್‌ಕುಮಾರ್, ವಿಶ್ವನಾರಾಯಣ ಮೂರ್ತಿ, ಗುರುಮೂರ್ತಿ ಸೇರಿದಂತೆ ಹಲವು ಮುಖಂಡರುಗಳು, ವಕೀಲರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಎಲ್ಲಾ ಸಮುದಾಯಗಳ ಮಠಗಳ ಸ್ವಾಮೀಜಿಗಳನ್ನು ಜಯಂತಿಗೆ ಆಹ್ವಾನಿಸಬೇಕು**

**ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಕೇವಲ ನಿಮ್ಮ ಹಾಗೂ ಶೋಷಿತರ ವರ್ಗಕ್ಕೆ ಸೀಮಿತಗೊಳಿಸುವ ಮನೋಭಾವ ಬದಲಾಗಬೇಕು. ಜಿಲ್ಲೆಯಲ್ಲಿ ಇರುವ ಎಲ್ಲಾ ಸಮುದಾಯಗಳ ಮಠಗಳ ಸ್ವಾಮೀಜಿಗಳನ್ನು ಜಯಂತಿಗೆ ಆಹ್ವಾನಿಸಬೇಕು. ಐತಿಹಾಸಿಕ ಕೋಟೆ ಮುಂಭಾಗದಿಂದ ಮೆರವಣಿಗೆಯನ್ನು ಆಯೋಜಿಸಬೇಕು. ಸಚಿವರು ಹಾಗೂ ಶಾಸಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾಧಕರು ವಿದ್ಯಾರ್ಥಿಗಳನ್ನು ಸನ್ಮಾನಿಸಬೇಕು. ಜನಪ್ರತಿನಿಧಿಗಳು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸರ್ಕಾರಿ ನೌಕರರು, ತಪ್ಪದೇ ಜಯಂತಿಗಳಲ್ಲಿ ಪಾಲ್ಗೊಳ್ಳಬೇಕು. ವೃತ್ತಿಪರ ಕಲಾ ಸಂಘಗಳ ಕಲಾವಿದರನ್ನು ಆಹ್ವಾನಿಸಿ ನಾಡಗೀತೆ ಹಾಗೂ ಗೀತ ಗಾಯನ ಕಾರ್ಯಕ್ರಮ ಆಯೋಜಿಸಬೇಕು. ನಗರದ ರಸ್ತೆಗೆ ಡಾ.ಬಾಬು ಜಗಜೀವನ್ ರಾಮ್ ಅವರ ಹೆಸರು ಇಡುವಂತೆ ಮತ್ತು ನಗರದಲ್ಲಿ ಬಾಬು ಜಗಜೀವನರಾಂ ಅವರ ಪುತ್ಥಳಿ ಸ್ಥಾಪಿಸುವಂತೆ ದಲಿತ ಮುಖಂಡರುಗಳು ಜಿಲ್ಲಾಧಿಕಾರಿಗಳಲ್ಲಿ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಕಾನೂನು ಹಾಗೂ ನಿಯಮಗಳ ಚೌಕಟ್ಟಿನಲ್ಲಿ ಈ ಕುರಿತಂತೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.**

● ಯುದ್ಧ ಭೂಮಿಯಿಂದ ಅಮೆರಿಕ ಪ್ಯಾಕಪ್: ಪುಟಿನ್–ಕ್ಸಿ ಪ್ಲ್ಯಾನ್‌ಗೆ ರೋಸಿ ಹೋದ ಟ್ರಂಪ್

# ಇರಾನ್‌ಗೆ ರಷ್ಯಾ-ಚೀನಾ ಬ್ಯಾಕಪ್: ಟ್ರಂಪ್ ನಿದ್ದೆಗೆ ಭಂಗ

**ವಾಷಿಂಗ್ಟನ್ ಡಿಸಿ:** ಮಧ್ಯಪ್ರಾಚ್ಯದಲ್ಲಿ ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವೆ ಭೀಕರ ಯುದ್ಧ ನಡೆಯುತ್ತಿದೆ. ಮೇಲ್ನೋಟಕ್ಕೆ ಇದು ಕೇವಲ ಮೂರು ದೇಶಗಳ ನಡುವಿನ ಕಾದಾಟದಂತೆ ಕಾಣಿಸಬಹುದು. ಕ್ಷಿಪಣಿಗಳ ಅಬ್ಬರ, ಡ್ರೋನ್‌ಗಳ ಆರ್ಭಟದ ನಡುವೆ ಇಡೀ ಜಗತ್ತು ಬೆಚ್ಚಿಬಿದ್ದಿದೆ. ಆದರೆ, ಈ ಯುದ್ಧದ ಹಿಂದಿರುವ ಅಸಲಿ ಆಟಗಾರರು ಬೇರೆಯೇ ಇದ್ದಾರೆ. ಹೌದು, ಅಮೆರಿಕ ಮತ್ತು ಇಸ್ರೇಲ್‌ನಂತಹ ಅತ್ಯಂತ ಬಲಿಷ್ಠ ರಾಷ್ಟ್ರಗಳ ಜಂಟಿ ದಾಳಿಯನ್ನು ಇರಾನ್ ಇಷ್ಟು ಪ್ರಬಲವಾಗಿ ಎದುರಿಸುತ್ತಿರುವುದರ ಹಿಂದೆ ಎರಡು ದೈತ್ಯ ರಾಷ್ಟ್ರಗಳ ಅದೃಶ್ಯ ಕೈಗಳು ನಿರಂತರವಾಗಿ ಕೆಲಸ ಮಾಡುತ್ತಿವೆ. ಆ ರಾಷ್ಟ್ರಗಳೇ ರಷ್ಯಾ ಮತ್ತು ಚೀನಾ.

ಟೆಹ್ರಾನ್‌ಗೆ ಕೇವಲ ನೈತಿಕ ಬೆಂಬಲವನ್ನಷ್ಟೇ ನೀಡದೆ, ಅತ್ಯಾಧುನಿಕ ಗುಪ್ತಚರ ಮಾಹಿತಿ, ಶಸ್ತ್ರಾಸ್ತ್ರ ತಂತ್ರಜ್ಞಾನ ಮತ್ತು ಕ್ಷಿಪಣಿಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುವ ಮೂಲಕ, ಮಾಸ್ಕೋ ಮತ್ತು ಬೀಜಿಂಗ್ ವಾಷಿಂಗ್ಟನ್ ಡಿಸಿಯ ನಿದ್ದೆಗೆಡಿಸಿವೆ. ನೇರವಾಗಿ ಯುದ್ಧಭೂಮಿಗೆ ಇಳಿಯದಿದ್ದರೂ, ಇರಾನ್‌ನ ಯುದ್ಧ ಯಂತ್ರಕ್ಕೆ ಹಿಂದಿನಿಂದ ಬಲ ತುಂಬುತ್ತಿರುವುದು ಇದೇ ರಷ್ಯಾ ಮತ್ತು ಚೀನಾ. ಅಮೆರಿಕ-ಇಸ್ರೇಲ್ ಮೈತ್ರಿಯನ್ನು ಮಣಿಸಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೆಣೆದಿರುವ ಈ ಮಾಸ್ಟರ್ ಪ್ಲಾನ್ ಹೇಗಿದೆ? ರಷ್ಯಾ-ಚೀನಾ ನೆರವಿನಿಂದ ಇರಾನ್ ಯುದ್ಧಭೂಮಿಯಲ್ಲಿ ಅಮೆರಿಕವನ್ನು ಹೇಗೆ ಎದುರಿಸುತ್ತಿದೆ? ನೋಡೋಣ ಬನ್ನಿ.

**ಅಮೆರಿಕದ ಯುದ್ಧನೌಕೆಗಳು ಎಲ್ಲಿವೆ?** ಇಸ್ರೇಲ್‌ನ ಫೈಟರ್ ಜೆಟ್‌ಗಳು ಎಲ್ಲಿಂದ ಹಾರಾಟ ನಡೆಸುತ್ತಿವೆ? ಪರ್ಷಿಯನ್ ಕೊಲ್ಲಿಯಲ್ಲಿ ಅಮೆರಿಕದ ಸೇನಾ ನೆಲೆಗಳ ನಿಖರ ಸ್ಥಳ ಯಾವುದು? ಈ ಎಲ್ಲಾ ಗುಪ್ತಚರ ಮಾಹಿತಿಯನ್ನು ರಷ್ಯಾ ಕ್ಷಣಕ್ಷಣಕ್ಕೂ ಇರಾನ್‌ಗೆ ರವಾನಿಸುತ್ತಿದೆ. ಇದಕ್ಕಾಗಿ ರಷ್ಯಾ ತನ್ನ ಅತ್ಯಾಧುನಿಕ 'ಕನೋಪಸ್-ವಿ' ಅಥವಾ 'ಖಯ್ಯಾಮ್' ಉಪಗ್ರಹದ ಮಾಹಿತಿಯನ್ನು ಇರಾನ್ ಜೊತೆಗೆ ಹಂಚಿಕೊಳ್ಳುಯತ್ತಿದೆ. ಈ ಉಪಗ್ರಹದ ಮೂಲಕ ಅಮೆರಿಕದ ಪ್ರತಿಯೊಂದು ಸೇನಾ ಚಲನವಲನಗಳನ್ನು ಟ್ರ್ಯಾಕ್ ಮಾಡಿ, ಆ ಮಾಹಿತಿಯನ್ನು ಇರಾನ್‌ಗೆ ನೀಡಲಾಗುತ್ತಿದೆ. ರಷ್ಯಾ ನೀಡುತ್ತಿರುವ ಈ ನೈಜ ಸಮಯದ ಗುಪ್ತಚರ ಮಾಹಿತಿ ಆಧರಿಸಿ, ಇರಾನ್ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ಮಾಡುತ್ತಿದೆ. ಇದು ಆಧುನಿಕ ಯುದ್ಧದ ಹೊಸ ಮುಖ. ಇಲ್ಲಿ ಗುಂಡುಗಳಿಗಿಂತ, ಎದುರಾಳಿ ಎಲ್ಲಿದ್ದಾನೆ ಎಂಬ ನಿಖರ ಮಾಹಿತಿಯೇ ಅತ್ಯಂತ ಅಪಾಯಕಾರಿ ಅಸ್ತ್ರ. ರಷ್ಯಾ ಈಗ ಅದೇ ಅಸ್ತ್ರವನ್ನು ಇರಾನ್ ಕೈಗಿಟ್ಟಿದೆ. ಕೇವಲ ಮಾಹಿತಿ ಮಾತ್ರವಲ್ಲದೇ ಡ್ರೋನ್ ತಂತ್ರಜ್ಞಾನದಲ್ಲಿಯೂ ಇರಾನ್‌ಗೆ ರಷ್ಯಾ ಭಾರೀ ನೆರವು ನೀಡುತ್ತಿದೆ. ಕ್ಯಾಸ್ಪಿಯನ್ ಸಮುದ್ರದ ಮಾರ್ಗವಾಗಿ ಅಮೆರಿಕದ ಕಣ್ತಪ್ಪಿಸಿ, ಡ್ರೋನ್ ಬಿಡಿಭಾಗಗಳು ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ರಷ್ಯಾ ನಿರಂತರವಾಗಿ ಇರಾನ್‌ಗೆ ತಲುಪಿಸುತ್ತಿದೆ. ಮಧ್ಯಪ್ರಾಚ್ಯ ಯುದ್ಧದಿಂದ ರಷ್ಯಾಗೆ ಆರ್ಥಿಕ ಲಾಭ ಆಗುತ್ತಿದ್ದು, ತನ್ನ ಕಚ್ಚಾತೈಲ ಮಾರಾಟ ಪ್ರಮಾಣವನ್ನು ಅದು ಹೆಚ್ಚಿಸಿಕೊಂಡಿದೆ.

ಮಾರ್ಚ್ 2026ರ ಆರಂಭದಲ್ಲಿ ಚೀನಾದ ಝುಹೈನಲ್ಲಿರುವ ಗಾವೋಲನ್ ಬಂದರಿನಿಂದ, ಇರಾನ್‌ನ ಎರಡು ಸರ್ಕಾರಿ ಸ್ವಾಮ್ಯದ ಹಡಗುಗಳು ಸಾವಿರಾರು ಟನ್ ಸೋಡಿಯಂ ಪರ್ಕ್ಲೋರೇಟ್ ತುಂಬಿಕೊಂಡು ಇರಾನ್‌ನತ್ತ ಪ್ರಯಾಣ ಬೆಳೆಸಿವೆ. ಈ ಪ್ರಮಾಣದ ಕಚ್ಚಾವಸ್ತು ಬಳಸಿ ಇರಾನ್ ನೂರಾರು ಹೊಸ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಅತ್ಯಂತ ವೇಗವಾಗಿ ತಯಾರಿಸಿದೆ. ಅಂದರೆ ಇಸ್ರೇಲ್ ದಾಳಿಯಲ್ಲಿ ನಾಶವಾದ ತನ್ನ ಶಸ್ತ್ರಾಸ್ತ್ರಗಳ ಕೊರತೆಯನ್ನು ಚೀನಾದ ನೆರವಿನಿಂದ ಕ್ಷಿಪ್ರವಾಗಿ ತುಂಬಿಕೊಳ್ಳುತ್ತಿದೆ ಇರಾನ್. ಅಷ್ಟೇ ಅಲ್ಲದೇ ಚೀನಾ ತನ್ನ ಬೈಡೌ ಸ್ಯಾಟಲೈಟ್ ನ್ಯಾವಿಗೇಷನ್ ಸಿಸ್ಟಮ್‌ನ್ನು ಇರಾನ್ ಸೇನೆಗೆ ಮುಕ್ತವಾಗಿ ಬಳಸಲು ಅವಕಾಶ ನೀಡಿದೆ. ಅಮೆರಿಕದ ಜಿಪಿಎಸ್ ವ್ಯವಸ್ಥೆಗೆ ಪರ್ಯಾಯವಾಗಿರುವ ಈ ಅತ್ಯಾಧುನಿಕ ಚೀನೀ ನ್ಯಾವಿಗೇಷನ್ ಸಿಸ್ಟಮ್ ಬಳಸಿ, ಇರಾನ್ ತನ್ನ ಡ್ರೋನ್ ಮತ್ತು ಕ್ಷಿಪಣಿಗಳನ್ನು ಅತ್ಯಂತ ನಿಖರವಾಗಿ ಅಮೆರಿಕ ಮತ್ತು ಇಸ್ರೇಲ್ ಗುರಿಗಳ ಮೇಲೆ ಉಡಾಯಿಸುತ್ತಿದೆ. ಜೊತೆಗೆ ಅಮೆರಿಕನ್ ನಿರ್ಬಂಧಗಳನ್ನು ಮೀರಿ ಇರಾನ್‌ನ ತೈಲವನ್ನು ಖರೀದಿಸುವ ಮೂಲಕ, ಚೀನಾ ಇರಾನ್‌ನ ಕುಸಿಯುತ್ತಿರುವ ಆರ್ಥಿಕತೆಗೆ ಆಕ್ಸಿಜನ್ ಒದಗಿಸುತ್ತಿದೆ. ಇದರಿಂದ ಯುದ್ಧದ ಬೃಹತ್ ಆರ್ಥಿಕ ಹೊರೆಯನ್ನು ನಿಭಾಯಿಸಲು ಇರಾನ್‌ಗೆ ಭಾರೀ ಅನುಕೂಲವಾಗಿದೆ. ಚೀನಾ ಬ್ಯಾಂಕ್‌ಗಳು ಮತ್ತು ಶೆಲ್ ಕಂಪನಿಗಳ ಮೂಲಕ ಇರಾನ್ ತನ್ನ ವಹಿವಾಟುಗಳನ್ನು ನಿರಾತಂಕವಾಗಿ ನಡೆಸುತ್ತಿದೆ.



- ಅಮೆರಿಕದ ಮಧ್ಯಪ್ರಾಚ್ಯ ಯುದ್ಧನೀತಿಗೆ ರಷ್ಯಾ-ಚೀನಾ ಚೆಕ್‌ಮೇಟ್.
- ಇರಾನ್ ಬೆಂಬಲಕ್ಕೆ ನಿಂತ ವ್ಲಾಡಿಮಿರ್ ಪುಟಿನ್-ಕ್ಸಿ ಜಿನ್‌ಪಿಂಗ್ ಜೋಡಿ.
- ರಷ್ಯಾ-ಚೀನಾ ರಣನೀತಿಯಿಂದ ಡೊನಾಲ್ಡ್ ಟ್ರಂಪ್ ನಿದ್ದೆಗೆ ಭಂಗ.



### ಚೀನಾದಿಂದ ಇರಾನ್‌ಗೆ ಮಿಸ್ಸೈಲ್ ಬೂಸ್ಟರ್

ಒಂದೆಡೆ ಇರಾನ್‌ಗೆ ರಷ್ಯಾ ಕಣ್ಣಾದರೆ, ಮತ್ತೊಂದೆಡೆ ಇರಾನ್‌ನ ಯುದ್ಧ ತಂತ್ರಕ್ಕೆ ಚೀನಾ ಜೀವ ತುಂಬುತ್ತಿದೆ. ಇರಾನ್‌ನ ಪ್ರಬಲ ಕ್ಷಿಪಣಿ ದಾಳಿಗಳ ಹಿಂದೆ ಚೀನಾದ ಅಗಾಧವಾದ ತಾಂತ್ರಿಕ ಮತ್ತು ಆರ್ಥಿಕ ಬೆಂಬಲ ಅಡಗಿದೆ. ಯುದ್ಧ ಆರಂಭವಾದಾಗಿನಿಂದ ಇರಾನ್ ತನ್ನ ನೂರಾರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಇಸ್ರೇಲ್ ಮತ್ತು ಅಮೆರಿಕದ ನೆಲೆಗಳತ್ತ ಉಡಾವಣೆ ಮಾಡಿದೆ. ಆದರೆ ಈ ಕ್ಷಿಪಣಿಗಳಿಗೆ ಬೇಕಾದ ಘನ ಇಂಧನವನ್ನು ಟೆಹ್ರಾನ್‌ಗೆ ಒದಗಿಸುತ್ತಿರುವುದೇ ಬೀಜಿಂಗ್. ಇತ್ತೀಚಿನ ಅಮೆರಿಕನ್ ಕಾಂಗ್ರೆಸ್ ಮತ್ತು ಗುಪ್ತಚರ ವರದಿಗಳ ಪ್ರಕಾರ, ಡ್ರ್ಯಾಗನ್ ರಾಷ್ಟ್ರ ಅಪಾರ ಪ್ರಮಾಣದ ಸೋಡಿಯಂ ಪರ್ಕ್ಲೋರೇಟ್ ಎಂಬ ರಾಸಾಯನಿಕವನ್ನು ಟೆಹ್ರಾನ್‌ಗೆ ಪೂರೈಸುತ್ತಿದೆ. ಇದು ಬ್ಯಾಲಿಸ್ಟಿಕ್ ಕ್ಷಿಪಣಿಗಳ ಘನ ಇಂಧನ ತಯಾರಿಕೆಯಲ್ಲಿ ಬಳಸುವ ಅತ್ಯಂತ ಪ್ರಮುಖ ಕಚ್ಚಾವಸ್ತು.

### ರಷ್ಯಾದ ಗುಪ್ತಚರ ಜಾಲ; ಖಮೇನಿಗೆ ಕಣ್ಣಾದ ಪುಟಿನ್

ಇರಾನ್ ಮತ್ತು ಇಸ್ರೇಲ್-ಅಮೆರಿಕ ನಡುವೆ ಫೆಬ್ರವರಿ 28ರಂದು ಯುದ್ಧ ಆರಂಭವಾದಾಗಿನಿಂದ, ರಷ್ಯಾ ಇರಾನ್‌ನ ಪಾಲಿಗೆ ಕಣ್ಣು ಮತ್ತು ಕಿವಿಯಾಗಿ ಕೆಲಸ ಮಾಡುತ್ತಿದೆ. ಉಕ್ರೇನ್ ಯುದ್ಧದಲ್ಲಿ ತನಗೆ ನಿರಂತರವಾಗಿ ಆತಂಕ ತಂದೊಡ್ಡಿದ ಅಮೆರಿಕದ ವಿರುದ್ಧ ಸೇಡು ತೀರಿಸಿಕೊಳ್ಳಲು ವ್ಲಾಡಿಮಿರ್ ಪುಟಿನ್‌ಗೆ ಇದೊಂದು ಸುವರ್ಣಾವಕಾಶ. ಹೀಗಾಗಿ, ಯಾವುದೇ ಮುಲಾಜಿಲ್ಲದೆ ರಷ್ಯಾ ತನ್ನ ಅತ್ಯಾಧುನಿಕ ಉಪಗ್ರಹ ಮತ್ತು ಗುಪ್ತಚರ ಜಾಲವನ್ನು ಇರಾನ್ ಸೇನೆಯ ಬಳಕೆಗೆ ಮುಕ್ತಗೊಳಿಸಿದೆ. ಇರಾನ್‌ಗೆ ಯುದ್ಧ ಮುಗಿಸುವ ಅಂತಿಮ ನಿರ್ಧಾರದ ಬಲ ಬಂದಿರುವುದು ಇದೇ ಕಾರಣಕ್ಕೆ ಎಂದು ಅನೇಕ ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

**ಪಾಶ್ಚಿಮಾತ್ಯರ ವಿರುದ್ಧ ಚಕ್ರವ್ಯೂಹ**

---

## ದೆಹಲಿ ವಿಧಾನಸಭೆ ಸ್ಫೋಟಿಸುವ ಬೆದರಿಕೆ

**ನವದೆಹಲಿ:** ದೆಹಲಿ ವಿಧಾನಸಭೆ ಮತ್ತು ಅದರ ಸ್ಪೀಕರ್ ವಿಜೇಂದರ್ ಗುಪ್ತಾ ಅವರಿಗೆ ಮತ್ತೊಮ್ಮೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿರುವುದು ರಾಷ್ಟ್ರ ರಾಜಧಾನಿಯಲ್ಲಿ ಭದ್ರತಾ ಕಳವಳಗಳನ್ನು ಹೆಚ್ಚಿಸಿದೆ.

ದೆಹಲಿ ಬಜೆಟ್ ಮಂಡಿಸಲು ನಿಗದಿಯಾಗಿರುವ ದಿನದಂದು ಈ ಬೆಳವಣಿಗೆ ನಡೆದಿದೆ. ಮೂಲಗಳ ಪ್ರಕಾರ, ಬೆಳಿಗ್ಗೆ 7:28 ರ ಸುಮಾರಿಗೆ ವಿಧಾನಸಭೆಗೆ ಬೆದರಿಕೆ ಇಮೇಲ್ ಕಳುಹಿಸಲಾಗಿದ್ದು, ಸಂಭಾವ್ಯ ಬಾಂಬ್ ದಾಳಿಯ ಬಗ್ಗೆ ಎಚ್ಚರಿಕೆ ನೀಡಲಾಗಿದೆ. ಬೆಳಿಗ್ಗೆ 7:49 ಕ್ಕೆ ಸ್ಪೀಕರ್ ವಿಜೇಂದರ್ ಗುಪ್ತಾ ಅವರ ಅಧಿಕೃತ ಇಮೇಲ್ ಐಡಿಗೆ ಪ್ರತ್ಯೇಕ ಇಮೇಲ್ ಬಂದಿತ್ತು.ವಿಧಾನಸಭೆ ಸಂಕೀರ್ಣದ ಆಚೆಗೂ ಬೆದರಿಕೆ ಹರಡಿದ್ದು, ಹತ್ತಿರದ ವಿಧಾನಸೌಧ ಮೆಟ್ರೋ ನಿಲ್ದಾಣವನ್ನು ಸ್ಫೋಟದ ಸಂಭಾವ್ಯ ಗುರಿ ಎಂದು ಉಲ್ಲೇಖಿಸಲಾಗಿದೆ.

ಆತಂಕಕಾರಿ ಬೆಳವಣಿಗೆಯಲ್ಲಿ, ಇಮೇಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್ ಜೈಶಂಕರ್ ಮತ್ತು ದೆಹಲಿ ಲೆಫ್ಟಿನೆಂಟ್ ಗವರ್ನರ್ ತರಂಜಿತ್ ಸಿಂಗ್ ಸಂಧು ಸೇರಿದಂತೆ ಹಲವಾರು ಉನ್ನತ ನಾಯಕರ ಹೆಸರುಗಳನ್ನು ಉಲ್ಲೇಖಿಸಲಾಗಿದೆ ಎಂದು ವರದಿಯಾಗಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಕ್ಯಾಬಿನೆಟ್ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ ಅವರನ್ನೂ ನಿರ್ದಿಷ್ಟವಾಗಿ ಹೆಸರಿಸಲಾಗಿದೆ.ಇಮೇಲ್‌ನ ವಿಷಯವು ಬೆದರಿಕೆ ಮತ್ತು ಪ್ರಚೋದನಕಾರಿ ಭಾಷೆಯನ್ನು ಒಳಗೊಂಡಿತ್ತು, ನಾಯಕರು ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದಾರೆ ಮತ್ತು ಖಲಿಸ್ತಾನ್ ಜನಾಭಿಪ್ರಾಯ ಸಂಗ್ರಹಣೆಗೆ ಬೆಂಬಲವನ್ನು ಉಲ್ಲೇಖಿಸಿದ್ದಾರೆ ಎಂದು ಆರೋಪಿಸಲಾಗಿದೆ. ಖಲಿಸ್ತಾನಿ ರಾಷ್ಟ್ರೀಯ ಸೇನೆ ಎಂದು ಗುರುತಿಸಿಕೊಳ್ಳುವ ಗುಂಪೊಂದು ದೆಹಲಿ ಮುಖ್ಯಮಂತ್ರಿ, ಪ್ರಸ್ತುತ ಸಚಿವ ಸಂಪುಟ ಮತ್ತು ಲೆಫ್ಟಿನೆಂಟ್ ಗವರ್ನರ್ ವಿರುದ್ಧ ಬೆದರಿಕೆ ಹಾಕಿದೆ ಎಂದು ವರದಿಯಾಗಿದೆ.




## ಜ್ಯೋತಿಷಿ ಪೆನ್‌ಡ್ರೈವ್‌ನಲ್ಲಿತ್ತು 58 ಮಹಿಳೆಯರ ಅಶ್ಲೀಲ ವಿಡಿಯೋಗಳು

**ನಾಸಿಕ್:** ರಾಜಕೀಯ ದಿಗ್ಗಜರಿಗೆ ಜ್ಯೋತಿಷ್ಯ ಹೇಳುತ್ತಿದ್ದ ಖ್ಯಾತ ಜ್ಯೋತಿಷಿಯೊಬ್ಬರನ್ನು ಅತ್ಯಾಚಾರದ ಆರೋಪದ ಮೇಲೆ ಮಹಾರಾಷ್ಟ್ರದಲ್ಲಿ ಬಂಧಿಸಲಾಗಿದೆ. ಬಂಧಿತ ಜ್ಯೋತಿಷಿಯನ್ನು ಅಶೋಕ್ ಖರತ್ ಎಂದು ಗುರುತಿಸಲಾಗಿದೆ. ಅವರ ಬಳಿ ದೊರೆತ ಪೆನ್‌ಡ್ರೈವ್‌ನಲ್ಲಿ 58 ಮಹಿಳೆಯರ ಅಶ್ಲೀಲ ವಿಡಿಯೋ ಲಭ್ಯವಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನೌಕಾಪಡೆಯ ನಿವೃತ್ತ ಅಧಿಕಾರಿ ಎಂದು ಹೇಳಿಕೊಂಡು ಜ್ಯೋತಿಷಿಯಾಗಿದ್ದ ಖರತ್ ಮಹಿಳೆಯರನ್ನು ತನ್ನ ಕಚೇರಿಗೆ ಕರೆಸಿ ಅವರ ಸಮಸ್ಯೆಗಳನ್ನು ಆಲಿಸುವುದಾಗಿ ನಂಬಿಸಿ ಮಾದಕ ದ್ರವ್ಯ ನೀಡುವ ಮೂಲಕ ಅತ್ಯಾಚಾರವೆಸಗುತ್ತಿದ್ದ ಎಂದು ಆರೋಪಿಸಲಾಗಿದೆ. ನವೆಂಬರ್ 2022 ರಿಂದ ಡಿಸೆಂಬರ್ 2025 ರ ನಡುವೆ ಜ್ಯೋತಿಷಿ ತನ್ನ ಮೇಲೆ ಹಲವಾರು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಎಫ್‌ಐಆರ್‌ನಲ್ಲಿ ಮಹಿಳೆಯೊಬ್ಬರು ಆರೋಪಿಸಿದ್ದಾರೆ. ಜ್ಯೋತಿಷಿ ನಾಸಿಕ್‌ನ ಕೆನಡಾ ಕಾರ್ನರ್ ಪ್ರದೇಶದಲ್ಲಿರುವ ತನ್ನ ಕಚೇರಿಗೆ ಕರೆಸುತ್ತಿದ್ದ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.ಖರತ್ ಅವರು ನಾಸಿಕ್ ಜಿಲ್ಲೆಯ ಸಿನ್ನಾರ್ ತಾಲ್ಲೂಕಿನ ಮಿರ್ಗಾಂವ್‌ನಲ್ಲಿರುವ ಶ್ರೀ ಈಶೇಶ್ವರ ಮಹಾದೇವ ದೇವಾಲಯ ಟ್ರಸ್ಟ್‌ನ ಅಧ್ಯಕ್ಷರಾಗಿದ್ದಾರೆ.

ಈ ಹಿಂದೆ ಅನೇಕ ರಾಜಕಾರಣಿಗಳು ಮತ್ತು ಪ್ರಮುಖ ವ್ಯಕ್ತಿಗಳು ಈ ಜ್ಯೋತಿಷಿಯನ್ನು ಭೇಟಿ ಮಾಡಿದ್ದರು ಎಂದು ವರದಿಯಾಗಿದೆ.

ಕಳೆದ ನವೆಂಬರ್ 2022 ರಲ್ಲಿ, ಆಗಿನ ಮುಖ್ಯಮಂತ್ರಿ ಏಕನಾಥ್ ಶಿಂಧೆ, ಅವರ ಸಂಪುಟ ಸಹೋದ್ಯೋಗಿಗಳಾದ ರಾಧಾಕೃಷ್ಣ ವಿಖೆ ಪಾಟೀಲ್ ಮತ್ತು ದೀಪಕ್ ಕೇಸರ್ಕರ್ ಅವರೊಂದಿಗೆ ಮಿರ್ಗಾಂವ್ ದೇವಸ್ಥಾನದಲ್ಲಿ ಖರತ್ ಅವರನ್ನು ಭೇಟಿಯಾಗಿದ್ದರು.



### ಮಾಟಮಂತ್ರದ ಭಯವನ್ನು ತುಂಬಿ ಅತ್ಯಾಚಾರ

**ತಮ್ಮ ಬಳಿಗೆ ಬರುವ ಮಹಿಳೆಯರಿಗೆ ಸಹಕರಿಸದಿದ್ದರೆ ನಿಮ್ಮ ಗಂಡಂದಿರನ್ನು ಕೊಲ್ಲುವುದಾಗಿ ಬೆದರಿಕೆ ಹಾಕುವ ಮೂಲಕ ಅಥವಾ ಮಾಟಮಂತ್ರದ ಭಯವನ್ನು ಅವರಲ್ಲಿ ತುಂಬಿ ಅತ್ಯಾಚಾರವೆಸಗುತ್ತಿದ್ದ ಎನ್ನಲಾಗಿದೆ. ಖರತ್ ತನ್ನ ಕಚೇರಿಯಲ್ಲಿ ಗುಪ್ತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದನೆಂದು ತನಿಖೆಯಿಂದ ತಿಳಿದುಬಂದಿದೆ.ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ಐಪಿಎಸ್ ಅಧಿಕಾರಿ ತೇಜಸ್ವಿನಿ ಸತ್ಪುಟೆ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ**


---

## ಅಮೆರಿಕ-ಇರಾನ್ ಸಂಘರ್ಷ ಬಗೆಹರಿಸಲು ಮಧ್ಯಸ್ಥಿಕೆ ವಹಿಸಲು ಮುಂದಾದ 'ಉಗ್ರ'ರಾಷ್ಟ್ರ ಪಾಕಿಸ್ತಾನ

**ವಾಷಿಂಗ್ಟನ್:** ಅಮೆರಿಕ-ಇರಾನ್ ನಡುವಿನ ಸಂಘರ್ಷ ಬಗೆಹರಿಸಲು ಪಾಕಿಸ್ತಾನವು ಮಧ್ಯಸ್ಥಿಕೆವಹಿಸಲು ಮುಂದೆ ಬಂದಿದೆ. ಅಮೆರಿಕ ಮತ್ತು ಇರಾನ್ ನಡುವಿನ ಸಂಭಾವ್ಯ ಮಾತು ಕತೆಗಳ ಕುರಿತಾದ ವರದಿಗಳಿಂದ ಯಾವುದೇ ಅಂತಿಮ ನಿರ್ಧಾರಕ್ಕೆ ಬರಬಾರದು ಎಂದು ಇದೇ ಸಂದರ್ಭದಲ್ಲಿ ಶ್ವೇತಭವನ ಹೇಳಿ ಕೊಂಡಿದೆ. ರಾಜತಾಂತ್ರಿಕ ಪ್ರಯತ್ನಗಳು ಸೂಕ್ಷ್ಮವಾಗಿರುತ್ತವೆ ಎಂದು ಹೇಳಿದ್ದು,

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ನಡುವಿನ ಮಾತುಕತೆಗಳನ್ನು ದೃಢಪಡಿಸಿದೆ.ಅಮೆರಿಕದ ಹಿರಿಯ ಅಧಿಕಾರಿಗಳು ಇಸ್ಲಾಮಾಬಾದ್‌ನಲ್ಲಿ ಇರಾನಿನ ಪ್ರತಿನಿಧಿಗಳನ್ನು ಭೇಟಿ ಮಾಡಬಹುದು ಎಂಬ ವರದಿಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಅವರು ಸಭೆ ಕುರಿತಾದ ಊಹಾಪೋಹಗಳನ್ನು ನಾವು ಔಪಚಾರಿಕವಾಗಿ ಘೋಷಿಸುವವರೆಗೆ ಅದು ಸತ್ಯವೆಂದು ಪರಿಗಣಿಸಬಾರದು ಎಂದು ಹೇಳಿದ್ದಾರೆ. ಮೂಲಗಳ ಪ್ರಕಾರ ಪಾಕಿಸ್ತಾನದ ಅಧಿಕಾರಿಯೊಬ್ಬರು ಮತ್ತು ಎರಡನೇ ಮೂಲವೊಂದು ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ನೇರ ಮಾತುಕತೆಗಳು ಈ ವಾರದ ಆರಂಭದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆಯಬಹುದು ಎಂದು ಹೇಳಿವೆ.

ಟ್ರಂಪ್ ಹಾಗೂ ಮುನೀರ್ ನಡುವಿನ ಮಾತುಕತೆ ಬಳಿಕ, ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಶಾಂತಿ ಕಾರ್ಯಾಚರಣೆಗಳ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಉದ್ಯಮಿ ಜೇರೆಡ್ ಕುಶ್ನರ್ ಅವರು ಪಾಕಿಸ್ತಾನದ ರಾಜಧಾನಿಯಲ್ಲಿ ಇರಾನಿನ ಅಧಿಕಾರಿಗಳನ್ನು ಭೇಟಿ ಮಾಡುವ ನಿರೀಕ್ಷೆಯಿದೆ ಎಂದು ವರದಿ ತಿಳಿಸಿದೆ. ಮಧ್ಯಸ್ಥಿಕೆ ವಹಿಸುತ್ತಿರುವ ರಾಷ್ಟ್ರಗಳು ಇಸ್ಲಾಮಾಬಾದಿನಲ್ಲಿ ಅಮೆರಿಕ ಮತ್ತು ಇರಾನಿನ ನಡುವೆ ಸಭೆ ನಡೆಸಲು ಪ್ರಯತ್ನಿಸುತ್ತಿವೆ, ಈ ವಾರದ ಕೊನೆಯಲ್ಲಿ ಇದು ನಡೆಯಬಹುದು ಎಂದು ಹೇಳಿದೆ. ಅಮೆರಿಕ ಹಾಗೂ ಇರಾನ್ ನಡುವೆ ಉತ್ತಮ ಮಾತುಕತೆಗಳು ನಡೆದಿವೆ. ಕೆಲವು ವಿಷಯಗಳಲ್ಲಿ ಒಪ್ಪಂದವಾಗುವ ಸಾಧ್ಯತೆ ಕೂಡ ಇದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಕಾರಣದಿಂದಲೇ ದಾಳಿಗಳನ್ನು ಐದು ದಿನಗಳ ಕಾಲ ನಿಲ್ಲಿಸುವ ನಿರ್ಧಾರ ಮಾಡಿದ್ದೇವೆ. ಮಾತುಕತೆಗಳು ವಿಫಲವಾದರೆ ದಾಳಿಗಳು ಮತ್ತೆ ಆರಂಭವಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.



**ಸಭೆ ನಡೆಸಲು ಪ್ರಯತ್ನ**

## ಯುದ್ಧ ನಿಲ್ಲಲಿ, ಶಾಂತಿ ನೆಲೆಸಲಿ : ಲೇಯೆನ್

**ಕ್ಯಾನ್ಬೆರಾ:** ಇರಾನ್ ಯುದ್ಧ ಕೊನೆಗೊಳ್ಳಲು ಮಾತುಕತೆಯ ಮೂಲಕ ಶಾಂತಿಯುತ ಪರಿಹಾರ ಕಂಡುಹಿಡಿಯುವುದು ಅತ್ಯಂತ ಅಗತ್ಯ ಎಂದು ಯುರೋಪಿಯನ್ ಯೂನಿಯನ್ ಮುಖ್ಯಸ್ಥೆ ಉರ್ಸುಲಾ ವಾನ್ ಡೆರ್ ಲೇಯೆನ್ ಹೇಳಿದ್ದಾರೆ.

ಕ್ಯಾನ್‌ಬೆರಾದಲ್ಲಿ ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೊಂದಿಗೆ ಮಾತುಕತೆ ನಂತರ ಲೇಯೆನ್ ಅವರು ನೀಡಿರುವ ಈ ಹೇಳಿಕೆ ಭಾರೀ ಮಹತ್ವ ಪಡೆದಿದೆ. ಇರಾನ್ ಯುದ್ಧವನ್ನು ಕೊನೆಗೊಳಿಸಲು ಮಾತುಕತೆಯ ಮೂಲಕ ಶಾಂತಿ ಸ್ಥಾಪನೆಯ ಅಗತ್ಯವನ್ನು ಒತ್ತಿ ಹೇಳಿ, ಸಂಘರ್ಷದಿಂದ ವಿಶ್ವದಲ್ಲಿ ಎದುರಾಗಿರುವ ಪರಿಸ್ಥಿತಿಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ನಾವು ಮಾತುಕತೆಯ ಮೂಲಕ ಪರಿಹಾರಕ್ಕೆ ಬರುವುದು ಅತ್ಯಂತ ಮಹತ್ವದ್ದಾಗಿದೆ ಮತ್ತು ಇದು ಮಧ್ಯಪ್ರಾಚ್ಯದಲ್ಲಿ ನಾವು ನೋಡುವ ಹಗೆತನವನ್ನು ಕೊನೆಗೊಳಿಸುತ್ತದೆ ಎಂದು ವಾನ್ ಡೆರ್ ಲೇಯೆನ್ ಕ್ಯಾನ್ ಪ್ರತಿಪಾದಿಸಿದರು. ಯುದ್ಧ ಮುಗಿದ ನಂತರ ಹಾರ್ಮುಜ್ ಜಲಸಂಧಿಯನ್ನು ರಕ್ಷಿಸುವ ಧ್ಯೇಯದಲ್ಲಿ ಸಹಾಯ ಮಾಡಲು ಕೆಲವು ದೇಶಗಳು ತಯಾರಿ ನಡೆಸುತ್ತಿವೆ ಎಂದರು. ಅನಿಲ ಮತ್ತು ತೈಲ ಬೆಲೆಗಳು, ನಮ್ಮ ವ್ಯವಹಾರಗಳು ಮತ್ತು ನಮ್ಮ ಸಮಾಜಗಳ ಮೇಲೆ ಪರಿಣಾಮಗಳನ್ನು ನಾವೆಲ್ಲರೂ ಅನುಭವಿಸುತ್ತೇವೆ ಎಂದು ಹೇಳಿದರು. ವಿಶ್ವದಾದ್ಯಂತ ಇಂಧನ ಪೂರೈಕೆ ಮಾರ್ಗಗಳಿಗೆ ಯುದ್ಧ ನಿಲ್ಲುವುದು ನಿರ್ಣಾಯಕವಾಗಿದೆ ಎಂದರು. ಡೊನಾಲ್ಡ್ ಟ್ರಂಪ್ ಅವರು ಎರಡೂ ದೇಶಗಳು ರಚನಾತ್ಮಕ ಮಾತುಕತೆಗಳನ್ನು ನಡೆಸಿವೆ ಎಂದು ಹೇಳಿದ ಮೇಲೂ, ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗಳ ಬಗ್ಗೆ ಇನ್ನೂ ಗೊಂದಲವಿದೆ. ಇರಾನಿನ ಅಧಿಕಾರಿಗಳು ಎರಡೂ ರಾಷ್ಟ್ರಗಳ ನಡುವೆ ಯಾವುದೇ ಮಹತ್ವದ ಮಾತುಕತೆಗಳನ್ನು ನಿರಾಕರಿಸಿದರು ನಂತರ ಶ್ವೇತಭವನವು ಪರಿಸ್ಥಿತಿ ದುರ್ಬಲ ಎಂದು ಹೇಳಿದೆ.



---

# 114 ರಫೇಲ್ ಯುದ್ಧ ವಿಮಾನ ಖರೀದಿಗೆ ಒಪ್ಪಂದ ಅಂತಿಮ

### 2025–26ರ ಬಜೆಟ್ ಅಂದಾಜುಗಳಿಗೆ ಹೋಲಿಸಿದರೆ ಐಎಎಫ್ ನ ಬಂಡವಾಳ ಬಜೆಟ್‌ನಲ್ಲಿ ಶೇ.37.03ರಷ್ಟು ಹೆಚ್ಚಳವಾಗಿದೆ

**ನವದೆಹಲಿ:** ಐಎಎಫ್‌ನ ಶಕ್ತಿಯನ್ನು ಹೆಚ್ಚಿಸಲು ಭಾರತವು 2026–27ರ ಆರ್ಥಿಕ ವರ್ಷದಲ್ಲಿ 114 ರಫೇಲ್ ಫೈಟರ್ ಜೆಟ್ ಗಳು, 60 ಮಧ್ಯಮ ಸಾರಿಗೆ ವಿಮಾನಗಳು (ಎಂಟಿಎ) ಮತ್ತು ಹೆಚ್ಚುವರಿ ವಾಯುಗಾಮಿ ಆರಂಭಿಕ ಎಚ್ಚರಿಕೆ ಮತ್ತು ನಿಯಂತ್ರಣ (ಎಇಡಬ್ಲ್ಯು ಮತ್ತು ಸಿ) ವ್ಯವಸ್ಥೆಗಳನ್ನು ಖರೀದಿಸುವ ಒಪ್ಪಂದಗಳು ಸೇರಿದಂತೆ ಹಲವಾರು ದೊಡ್ಡ ಒಪ್ಪಂದಗಳನ್ನು ಅಂತಿಮಗೊಳಿಸಲು ಸಜ್ಜಾಗಿದೆ ಎಂದು ರಕ್ಷಣಾ ಸಚಿವಾಲಯ ಸಂಸದೀಯ ಸಮಿತಿಗೆ ತಿಳಿಸಿದೆ. 2025–26ರ ಬಜೆಟ್ ಅಂದಾಜುಗಳಿಗೆ ಹೋಲಿಸಿದರೆ ಐಎಎಫ್ ನ ಬಂಡವಾಳ ಬಜೆಟ್‌ನಲ್ಲಿ ಶೇ.37.03ರಷ್ಟು ಹೆಚ್ಚಳವಾಗಿದೆ. ಮಲ್ಟಿ-ರೋಲ್ ಫೈಟರ್ ಏರ್‌ಕ್ರಾಫ್ಟ್ (ಉದ್ದೇಶಿತ ರಫೇಲ್ ಒಪ್ಪಂದವನ್ನು ಉಲ್ಲೇಖಿಸಿ), ಯುದ್ಧ ಸಕ್ರಿಯಗೊಳಿಸುವವರು (ಎಇಡಬ್ಲ್ಯು ಮತ್ತು ಸಿ, ತೇಜಸ್ ಎಂಕೆ 1 ಎ), ಮಧ್ಯಮ ಸಾರಿಗೆ ವಿಮಾನ (ಎಂಟಿಎ) ಮತ್ತು ಮಧ್ಯಮ-ಎತ್ತರದ ದೀರ್ಘ-ಸಹಿಷ್ಣುತೆ ಆರ್ ಪಿಎ (ರಿಮೋಟ್ ಪೈಲಟ್ ವಿಮಾನ) ಮುಂತಾದ ಕೆಲವು ಪ್ರಮುಖ ಹೊಸ ಯೋಜನೆಗಳಿಗೆ ಹಂಚಿಕೆಯಾದ ಹಣವನ್ನು ಬಳಸಲು ಯೋಜಿಸಲಾಗಿದೆ'' ಎಂದು ಸಚಿವಾಲಯ ರಕ್ಷಣಾ ಸಂಸದೀಯ ಸ್ಥಾಯಿ ಸಮಿತಿಗೆ ತಿಳಿಸಿದೆ. ಇದು ಕಳೆದ ವಾರ ಲೋಕಸಭೆಯಲ್ಲಿ ತನ್ನ ಇತ್ತೀಚಿನ ವರದಿಯನ್ನು ಸಲ್ಲಿಸಿತು.

ಈ ವರ್ಷದ ಫೆಬ್ರವರಿಯಲ್ಲಿ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) ಮಲ್ಟಿ-ರೋಲ್ ಫೈಟರ್ ಏರ್ ಕ್ರಾಫ್ಟ್ ಕಾರ್ಯಕ್ರಮದಡಿ 114 ರಫೇಲ್ ಜೆಟ್ ಗಳ ಖರೀದಿಗೆ ಅನುಮೋದನೆ ನೀಡಿತ್ತು. ಮಿಲಿಟರಿ ಯಂತ್ರಾಂಶದೊಂದಿಗೆ ಜೆಟ್ ಗಳ ಉದ್ದೇಶಿತ ಒಪ್ಪಂದಕ್ಕೆ ಸುಮಾರು 3. 25 ಲಕ್ಷ ಕೋಟಿ ರೂ. ವೆಚ್ಚವಾಗುವ ನಿರೀಕ್ಷೆಯಿದೆ. ಎಂಆರ್ ಒಫ್ಎ ಮಾದರಿಯಲ್ಲಿ, ಹೊಸ ರಫೇಲ್ ಅನ್ನು ಫ್ರೆಂಚ್ ಕಂಪನಿ ಡಸಾಲ್ಟ್ ಏವಿಯೇಷನ್ ಭಾರತೀಯ ಪಾಲುದಾರ ಸಹಯೋಗದೊಂದಿಗೆ ಭಾರತದಲ್ಲಿ ತಯಾರಿಸಲಿದೆ. ''ಸಶಸ್ತ್ರ ಪಡೆಗಳ ಆಧುನೀಕರಣವನ್ನು ಗಮನದಲ್ಲಿಟ್ಟುಕೊಂಡು, ವಿಶೇಷವಾಗಿ ಪ್ರಸ್ತುತ ಭೌಗೋಳಿಕ-ರಾಜಕೀಯ ಸನ್ನಿವೇಶದಲ್ಲಿ, ಶಸ್ತ್ರಾಸ್ತ್ರಗಳ ಆಧುನೀಕರಣ ಮತ್ತು ತಾಂತ್ರಿಕ ಉನ್ನತೀಕರಣಕ್ಕಾಗಿ ಮತ್ತು ಇತರ ಪ್ರಮುಖ ವೇದಿಕೆಗಳ ಸಂಗ್ರಹಣೆಯಲ್ಲಿ ಹಂಚಿಕೆಯಾದ ಹಣವನ್ನು ಲಾಭದಾಯಕವಾಗಿ ಬಳಸಿಕೊಳ್ಳುವಂತೆ ಸಮಿತಿಯು ವಾಯುಪಡೆಯನ್ನು ಒತ್ತಾಯಿಸುತ್ತದೆ ಎಂದು ವರದಿ ಹೇಳಿದೆ.

ಈ ಎಲ್ಲಾ ಯುದ್ಧ ಗುಪ್ತಚರ ವ್ಯವಸ್ಥೆಗಳು ಎಲ್ಲಾ ಮೂರು ಸೇವೆಗಳ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸಲು ಅತ್ಯಂತ ಪರಿಣಾಮಕಾರಿ ವೇದಿಕೆಗಳಾಗಿವೆ'' ಎಂದು ಸಚಿವಾಲಯ ಸಮಿತಿಗೆ ತಿಳಿಸಿದೆ.

ಐಎಎಫ್ ಸ್ವಾವಲಂಬನೆಗೆ ಬದ್ಧವಾಗಿದೆ ಮತ್ತು ರಾಷ್ಟ್ರೀಯ ಉದ್ದೇಶಗಳಿಗೆ ಪೂರ್ಣ ಪ್ರಮಾಣದ ಬೆಂಬಲವನ್ನು ನೀಡುತ್ತಿದೆ ಎಂದು ಸಮಿತಿಗೆ ತಿಳಿಸಲಾಯಿತು. ''ನಾವೀನ್ಯತೆ ಮತ್ತು ಸ್ವದೇಶೀಕರಣವನ್ನು ಮುನ್ನಡೆಸುವ ಸಲುವಾಗಿ, ಐಎಎಫ್ ಡೈರೆಕ್ಟರೇಟ್ ಆಫ್ ಏರೋಸ್ಪೇಸ್ ಡಿಸೈನ್ ಎಂಬ ಹೊಸ ನಿರ್ದೇಶನಾಲಯವನ್ನು ರಚಿಸಿದೆ.

ಈ ನಿರ್ದೇಶನಾಲಯವು ಕೈಗಾರಿಕೆಗಳು, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಏರೋಸ್ಪೇಸ್ ಡೊಮೇನ್ ನಲ್ಲಿ ಸ್ಥಾಪಿತ ತಂತ್ರಜ್ಞಾನಗಳನ್ನು ಕಂಡುಹಿಡಿಯಲು ಸಕ್ರಿಯವಾಗಿ ಸಂವಹನ ನಡೆಸುತ್ತದೆ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಅವುಗಳನ್ನು ಯುದ್ಧತಂತ್ರ ಮತ್ತು ಕಾರ್ಯತಂತ್ರದ ಯುದ್ಧ ಹೋರಾಟದ ಪರಿಹಾರಗಳಾಗಿ ಪರಿವರ್ತಿಸುವ ವಿಧಾನವನ್ನು ವಿಕಸನಗೊಳಿಸುತ್ತದೆ'' ಎಂದು ವರದಿ ಹೇಳಿದೆ.



### ನಿರ್ಣಾಯಕ ಯುದ್ಧಕ್ಕೆ ಮುಖ್ಯ

**ಎಇಡಬ್ಲ್ಯುಎಸಿಗಳು, ಫ್ಲೈಟ್ ರಿಫ್ಯೂಲರ್‌ಗಳು ಮತ್ತು ವಿಶೇಷ ಎಲೆಕ್ಟ್ರಾನಿಕ್ ಇಂಟೆಲಿಜೆನ್ಸ್ ಮತ್ತು ಕಣ್ಗಾವಲು ವೇದಿಕೆಗಳಂತಹ ನಿರ್ಣಾಯಕ ಯುದ್ಧ ಸಕ್ರಿಯಗೊಳಿಸುವವರು ಮುಖ್ಯ. ಈ ವ್ಯವಸ್ಥೆಗಳು ನಮ್ಮ ಗುಪ್ತಚರ ಮತ್ತು ಯುದ್ಧಭೂಮಿ ಪ್ರಸರಣವನ್ನು ಹೆಚ್ಚಿಸುವುದಲ್ಲದೆ ಆಧುನಿಕ ಯುದ್ಧದ ಎಲೆಕ್ಟ್ರಾನಿಕ್ ಕ್ರಮವನ್ನು ಕಮಾಂಡರ್ ಗಳಿಗೆ ಒದಗಿಸುತ್ತವೆ.**

### ಖರೀದಿಸುವ ಯೋಜನೆಗೆ ಅನುಮೋದನೆ

**ರಕ್ಷಣಾ ಸ್ವಾಧೀನ ಮಂಡಳಿ ಇತ್ತೀಚೆಗೆ ಭಾರತೀಯ ವಾಯುಪಡೆಗೆ 60 ಮಧ್ಯಮ ಸಾರಿಗೆ ವಿಮಾನಗಳನ್ನು (ಎಂಟಿಎ) ಖರೀದಿಸುವ ಯೋಜನೆಗೆ ಅನುಮೋದನೆ ನೀಡಿದೆ. ಇದರ ಅಂದಾಜು ವೆಚ್ಚ 1 ಲಕ್ಷ ಕೋಟಿ ರೂ. ಈ ಕಾರ್ಯಕ್ರಮವು ಹಳೆಯ ಎಎನ್ -32 ಫ್ಲೀಟ್ ಅನ್ನು ಬದಲಾಯಿಸುವ ಗುರಿಯನ್ನು ಹೊಂದಿದೆ. 12 ವಿಮಾನಗಳು ಹಾರಾಟದ ಸ್ಥಿತಿಯಲ್ಲಿವೆ ಮತ್ತು 48 ಅನ್ನು ಸ್ಥಳೀಯವಾಗಿ ತಯಾರಿಸಬೇಕಾಗುತ್ತದೆ. ಪ್ರಮುಖ ಸ್ಪರ್ಧಿಗಳಲ್ಲಿ ಎಂಬ್ರೇರ್ ಸಿ -390 ಮಿಲೇನಿಯಮ್, ಲಾಕ್ಹೀಡ್ ಮಾರ್ಟಿನ್ ಸಿ -130 ಜೆ ಸೂಪರ್ ಹಕ್ಯುಲಸ್ ಮತ್ತು ಯುರೋಪಿಯನ್ ಏರ್ ಬಸ್ ಡಿಫೆನ್ಸ್ ಮತ್ತು ಸ್ಪೇಸ್ ಅದರ ಎ -400 ಎಂ ಸೇರಿವೆ.**

---

## ಮಿನಿ ನ್ಯೂಸ್

### ಹತ್ತು ವರ್ಷದ ಬಾಲಕಿ ಮೇಲೆ 58 ವರ್ಷದ ಕಾಮುಕನಿಂದ ಅತ್ಯಾಚಾರ

**ಥಾಣೆ:** ಹತ್ತು ವರ್ಷದ ಬಾಲಕಿ ಮೇಲೆ 58 ವರ್ಷದ ಕಾಮುಕನೊಬ್ಬ ಅತ್ಯಾಚಾರ ನಡೆಸಿರುವ ಘಟನೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ನಡೆದಿದೆ. 10 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ 58 ವರ್ಷದ ವ್ಯಕ್ತಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಡಿಸೆಂಬರ್ 2025 ರಿಂದ ಈ ವರ್ಷದ ಫೆಬ್ರವರಿ ನಡುವೆ ಆರೋಪಿಯು ಭಿವಂಡಿ ಪ್ರದೇಶದ ನಿಜಾಮ್‌ಪುರದಲ್ಲಿರುವ ತನ್ನ ಮನೆಗೆ ಬಲಿಪಶುವನ್ನು ಕರೆತಂದು ಯಾವುದೋ ನೆಪದಲ್ಲಿ ಆಮಿಷವೊಡ್ಡಿದ ನಂತರ ಈ ಅಪರಾಧ ಎಸಗಿದ್ದಾನೆ ಎಂದು ಭೋಯಿವಾಡಾ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂತ್ರಸ್ತೆಯ ಕುಟುಂಬದ ದೂರಿನ ಆಧಾರದ ಮೇಲೆ, ಪೊಲೀಸರು ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸೆಕ್ಷನ್ 64 (ಅತ್ಯಾಚಾರ) ಮತ್ತು 74 (ಮಹಿಳೆಯ ಮೇಲೆ ಹಲ್ಲೆ ಅಥವಾ ಕ್ರಿಮಿನಲ್ ಬಲವಂತ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಅವರು ಹೇಳಿದರು.ಸಂತ್ರಸ್ತೆಯ ಕುಟುಂಬದಿಂದ ದೂರು ದಾಖಲಿಸುವಲ್ಲಿ ವಿಳಂಬಕ್ಕೆ ಯಾವುದೇ ಕಾರಣವನ್ನು ನಿರ್ದಿಷ್ಟಪಡಿಸಲಾಗಿಲ್ಲ.

### ಟೆಕ್ಸಾಸ್ ಬಂದರಿನ ಬಳಿ ಇರುವ ತೈಲ ಸಂಸ್ಕರಣಾಗಾರದಲ್ಲಿ ಭಾರೀ ಸ್ಫೋಟ

**ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧದ ನಡುವೆಯೇ ಅಮೆರಿಕದ ಟೆಕ್ಸಾಸ್ ಬಂದರು ಬಳಿ ಇರುವ ವ್ಯಾಲೆರೊ ಕಚ್ಚಾ ತೈಲ ಸಂಸ್ಕರಣಾಗಾರದಲ್ಲಿ ಭಾರೀ ಸ್ಫೋಟ ಸಂಭವಿಸಿದೆ. ಸ್ಫೋಟದಿಂದ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡುತ್ತಿದೆ. ಸ್ಫೋಟಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಪ್ರತ್ಯಕ್ಷದರ್ಶಿಗಳ ಪ್ರಕಾರ ಜೋರಾದ ಸ್ಫೋಟದ ಸದ್ದಿನ ನಂತರ ಬೆಂಕಿ ಜ್ವಾಲೆ ಜೊತೆಗೆ ದಟ್ಟವಾದ ಕಪ್ಪು ಹೊಗೆ ಆಕಾಶಕ್ಕೆ ಏರಿತು ಎಂದು ಹೇಳಿದ್ದಾರೆ. ಕೈಗಾರಿಕಾ ಹೀಟರ್‌ನಿಂದ ಸ್ಫೋಟ ಸಂಭವಿಸಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಟೆಕ್ಸಾಸ್‌ನ ಕರಾವಳಿಯ ಉದ್ದಕ್ಕೂ ಸುಮಾರು 4 ಸಾವಿರ ಎಕರೆಗಳಲ್ಲಿ ವ್ಯಾಲೆರೊ ಸಂಸ್ಕರಣಾಗಾರ ನಿರ್ಮಾಣವಾಗಿದ್ದು ಪ್ರತಿದಿನ 3.80 ಲಕ್ಷದಿಂದ 4.30 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. ಘಟನೆಯಲ್ಲಿ ಕಾರ್ಮಿಕರ ಪರಿಸ್ಥಿತಿ ಬಗ್ಗೆ ಯಾವುದೇ ಮಾಹಿತಿ ವರದಿಯಾಗಿಲ್ಲ. ಆದರೆ ಭಾರೀ ಪ್ರಮಾಣದ ಕಚ್ಚಾತೈಲ ಹರಿದುಹೋಗಿದೆ.

### ಕೊಲಂಬಿಯಾ ವಿಮಾನ ಪತನ ದುರಂತದಲ್ಲಿ 70 ಮಂದಿ ಬಲಿ

**ಬೊಗೋಟಾ:** ಕೊಲಂಬಿಯಾ ಮಿಲಿಟರಿ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 66 ಕ್ಕೆ ತಲುಪಿದೆ ಎಂದು ಕೊಲಂಬಿಯಾದ ಸಶಸ್ತ್ರ ಪಡೆಗಳ ಮುಖ್ಯಸ್ಥರು ತಿಳಿಸಿದ್ದಾರೆ. ದುಃಖಕರವೆಂದರೆ, ಈ ದುರಂತ ಅಪಘಾತದ ಪರಿಣಾಮವಾಗಿ, ನಮ್ಮ ಮಿಲಿಟರಿಯ 66 ಜನರು ಸಾವನ್ನಪ್ಪಿದ್ದಾರೆ ಎಂದು ಜನರಲ್ ಹ್ಯೂಗೋ ಅಲೆಜಾಂಡ್ರೊ ಲೋಪೆಜ್ ಬ್ಯಾರೆಟೊ ಹೇಳಿದರು. ನಾಲ್ಕು ಮಿಲಿಟರಿ ಸಿಬ್ಬಂದಿ ಇನ್ನೂ ಕಾಣೆಯಾಗಿದ್ದಾರೆ ಎಂದು ಅವರು ಹೇಳಿದರು. ಪಟ್ಟಣದ ಉಪ ಮೇಯರ್ ಪ್ರಕಾರ, ಕೊಲಂಬಿಯಾದ ಪೋರ್ಟೊ ಲೆಗುಯಿಜಾಮೊದಲ್ಲಿ ಸೋಮವಾರ ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ ಹರ್ಕ್ಯುಲಸ್ ಸಿ -130 ಅಪಘಾತಕ್ಕೀಡಾಯಿತು.


ಇದುವರೆಗೂ 66 ಮೃತದೇಹಗಳನ್ನು ಪತ್ತೆ ಹಚ್ಚಲಾಗಿದ್ದು, ಕಾಣೆಯಾಗಿರುವ ನಾಲ್ವರ ಪತ್ತೆಗೆ ಕಾರ್ಯಾಚರಣೆ ಮುಂದುವರೆದಿದೆ. ನಾಲ್ವರು ಸಾವನ್ನಪ್ಪಿರುವ ಸಾಧ್ಯತೆ ಇದ್ದು ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 70ಕ್ಕೇ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಬ್ಯಾರೆಟೋ ಹೇಳಿದ್ದಾರೆ.

### ಪೆಟ್ರೋಲ್ ಖರೀದಿಗೆ ಮುಗಿ ಬಿದ್ದ ಜನ


**ಅಹಮದಾಬಾದ್:** ಗುಜರಾತ್‌ನ ವಿವಿಧೆಡೆ ಇಂಧನ ಕೊರತೆಯ ವದಂತಿ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ನಗರಗಳಲ್ಲಿ ಪೆಟ್ರೋಲ್ ಪಂಪ್‌ಗಳ ಮುಂದೆ ಸಾವಿರಾರು ವಾಹನ ಸವಾರರು ಪರದಾಡುವಂತೆ ಮಾಡಿದ ಘಟನೆ ನಡೆದಿದೆ. ಪೆಟ್ರೋಲ್, ಡೀಸೆಲ್ ಹಾಕಿಸಿಕೊಳ್ಳಲು ವಾಹನ ಸವಾರರು ಕಿಲೋ ಮೀಟರ್‌ಗಟ್ಟಲೆ ಪೆಟ್ರೋಲ್ ಬಂಕ್ ಮುಂದೆ ನಿಂತಿದ್ದ ದೃಶ್ಯ ಪೆಟ್ರೋಲ್ ,ಡೀಸೆಲ್ ಅಭಾವ ಎಷ್ಟಿದೆ ಎನ್ನುವುದಕ್ಕೆ ಉದಾಹರಣೆಯಾಗಿದೆ. ಉದ್ದನೆಯ ಸರತಿ ಸಾಲುಗಳು, ಸಂಚಾರ ದಟ್ಟಣೆ ಮತ್ತು ಉದ್ವಿಗ್ನ ವಾತಾವರಣ ಸೃಷ್ಟಿಗೂ ಕಾರಣವಾಗಿತ್ತು. ಶಿವರಂಜನಿ, ಎಸ್‌ಜಿ ಹೆದ್ದಾರಿ, ಬೋಡಕ್ ದೇವ್, ಥಲ್ತೇಜ್, ಗುಲ್ಬಾಯಿ ಟೆಕ್ರಾ ಮತ್ತು ಪಾಲ್ಡಿಗಳಲ್ಲಿನ ಪಂಪ್‌ಗಳಲ್ಲಿ ಅಸ್ತವ್ಯಸ್ತವಾಗಿರುವ ದೃಶ್ಯಗಳು ಕಂಡುಬಂದರೂ, ಗುಜರಾತ್‌ನಾದ್ಯಂತ ಹೆಚ್ಚು ಸಂಕೀರ್ಣವಾದ ಇಂಧನ ವಿತರಣಾ ಅಡಚಣೆ ರಾಜ್ಯದ ಜನರಿಗೆ ತೊಂದರೆ ಉಂಟು ಮಾಡಿದೆ. ವಿತರಕರು ಮತ್ತು ಅಧಿಕಾರಿಗಳು ಇಂಧನದ ಕೊರತೆಯಿಲ್ಲ ಎಂದು ಹೇಳಿದರೂ ವಾಹನ ಸವಾರರು ನಂಬುವ ಸ್ಥಿತಿಯಲ್ಲಿ ಇರಲಿಲ್ಲ ಗುಜರಾತ್ ಸರ್ಕಾರವೂ ಕೂಡ ನಾಗರಿಕರು ವದಂತಿಗಳಿಗೆ ಕಿವಿಗೊಡದಂತೆ ಮನವಿ ಮಾಡಿದೆ. ಒಂದು ಹಂತದಲ್ಲಿ, ಕುಟುಂಬದ ಸದಸ್ಯರು ತಮ್ಮ ಸಂಬಂಧಿಕರಿಗೆ ಕರೆ ಮಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಟ್ಯಾಂಕ್ ತುಂಬಿಸಿಕೊಳ್ಳಲು ಪೆಟ್ರೋಲ್ ಬಂಕ್ ಮುಂದೆ ಕಿಲೋಮೀಟರ್ ಗಟ್ಟಲೆ ಸವಾರುರು ನಿಂತಿದ್ದ ದೃಶ್ಯ ಸಾಮಾನ್ಯವಾಗಿತ್ತು.

### ಬಿಜೆಪಿ ನಾಯಕರಿಂದ ಅವಮಾನ: ಡಿಎಂಕೆ ಸೇರಿದ ಮೇಲೆ ಖುಷಿಯಾಗಿದ್ದೇನೆ; ಸೆಲ್ವಂ

**ಚೆನ್ನೈ:** ನವದೆಹಲಿಯಲ್ಲಿ ಬಿಜೆಪಿ ನಾಯಕರು ನನ್ನ ಅವಮಾನಿಸಿದರು, ಆದರೆ ಫೆಬ್ರವರಿ 27 ರಂದು ಡಿಎಂಕೆ ಸೇರಿದ ನಂತರ ಸಂತೋಷ ಕಂಡುಕೊಂಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಪನ್ನೀರ್ ಸೆಲ್ವಂ ಹೇಳಿದ್ದಾರೆ. ಕಂಬಮ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಪನ್ನೀರ್‌ಸೆಲ್ವಂ, ಕೇಂದ್ರ ಸಚಿವರ ಕಚೇರಿಗೆ ಆಹ್ವಾನಿಸಲಾಗಿತ್ತು ಆದರೆ, ಸಭೆ ನಡೆಸಲು ನಿರಾಕರಿಸಲಾಯಿತು .ಕೆಲವು ತಿಂಗಳ ಹಿಂದೆ ಬಿಜೆಪಿ ನಾಯಕರು ಅವಮಾನಿಸಿದರು ಎಂದು ಹೇಳಿದರು. ತಾಳ್ಮೆಗೂ ಮಿತಿಗಳಿವೆ. ನಾನು ಅಂತಿಮವಾಗಿ ಡಿಎಂಕೆ ಸೇರಲು ಆಯ್ಕೆ ಮಾಡಿಕೊಂಡೆ. ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಮರಣದ ನಂತರ ನಾನು ತೀವ್ರ ಕಷ್ಟಗಳು ಮತ್ತು ಅನೇಕ ಸವಾಲುಗಳನ್ನು ಎದುರಿಸಿದೆ. ಫೆಬ್ರವರಿ 27 ರಂದು ಸಿಎಂ ಎಂ ಕೆ ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಸೇರಿದಾಗ ನನ್ನ ಸಂತೋಷ ಅನುಭವಿಸಿದೆ. ಸಿ ಎನ್ ಅಣ್ಣಾದೊರೈ ಸ್ಥಾಪಿಸಿದ ಚಳವಳಿಗೆ ನನ್ನನ್ನು ಸ್ವಾಗತಿಸಿದ್ದಕ್ಕಾಗಿ ನಾನು ಅವರಿಗೆ ಋಣಿಯಾಗಿರುತ್ತೇನೆ ಎಂದಿದ್ದಾರೆ.



# ನಾನು ತಪ್ಪು ಮಾಡಿದೆ!



ಕಳೆದ ಸುಮಾರು ವರ್ಷಗಳಿಂದ ಮಲಯಾಳಂ ಚಿತ್ರರಂಗದಲ್ಲಿ ನಟಿಯಾಗಿ ಗುರುತಿಸಿಕೊಂಡಿರುವ ಮೀರಾ ವಾಸುದೇವನ್ ಕೇವಲ ಮಲಯಾಳಂ ಮಾತ್ರವಲ್ಲ, ಬಾಲಿವುಡ್, ಟಾಲಿವುಡ್, ಕಾಲಿವುಡ್‌ನಲ್ಲೂ ನಟಿಸುವ ಮೂಲಕ ಖ್ಯಾತಿಯನ್ನು ಪಡೆದಿದ್ದಾರೆ. ಇವರ ಸಿನಿ ಜೀವನ ಬಹಳ ಅದ್ಭುತವಾಗಿತ್ತು, ಆದ್ರೆ ನಟಿಯ ಖಾಸಗಿ ಜೀವನ ಮಾತ್ರ ಬಣ್ಣದ ಬದುಕಿನಂತೆ ವರ್ಣಮಯವಾಗಿರಲಿಲ್ಲ. ಹೌದು ನಟಿ ಮೀರಾ ವಾಸುದೇವನ್ ಒಂದಲ್ಲ, ಎರಡಲ್ಲ, ಮೂರು ಮದುವೆಯಾದರು. ಆದ್ರೂ ಕೂಡ ಯಾರೊಬ್ಬರ ಜೊತೆಯೂ ಹೆಚ್ಚು ಬದುಕಲು ಸಾಧ್ಯವಾಗಿಲ್ಲ.

ಇದೀಗ ನಟಿ ತಮ್ಮ ಮೂರನೇ ವಿಚ್ಛೇದನದ ಬಗ್ಗೆ ಮಾತನಾಡಿರುವ ಖ್ಯಾತ ನಟಿ, ನಾನು ತಪ್ಪು ಮಾಡಿದೆ. ಇನ್ನು ಮುಚ್ಚಿಡಲು ಏನೂ ಇಲ್ಲ ಎಂದು ಹೇಳಿದ್ದಾರೆ.

ಮೀರಾ ವಾಸುದೇವನ್ 2003 ರಲ್ಲಿ ತಮಿಳು ಚಿತ್ರರಂಗಕ್ಕೆ ನಟಿಯಾಗಿ ಪಾದಾರ್ಪಣೆ ಮಾಡಿದರು. ವೆಂಕಟ್ ಪ್ರಭು ನಟಿಸಿದ 'ಉನ್ನೈ ಸರನದಾಯಿನೇನ್' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದರು, ಇದನ್ನು ಸಮುತಿರಕಣಿ ನಿರ್ದೇಶಿಸಿದರು. ಅವರು ಮುರಳಿ ನಟಿಸಿದ 'ಅರಿವುಮಣಿ' ಚಿತ್ರದಲ್ಲಿ ನಟಿಸಿದ್ದರು. ಮೀರಾ ವಾಸುದೇವನ್ ತಮಿಳು ಚಿತ್ರಗಳಾದ 'ಜೆರ್ರಿ' ಮತ್ತು 'ಕಥಿ ಕಪಾಲ' ಗಳಲ್ಲಿಯೂ ನಟಿಸಿದ್ದರು.

ಮೀರಾ ವಾಸುದೇವನ್ ಅವರಿಗೆ ಮಲಯಾಳಂನಲ್ಲಿ ಸಿಕ್ಕಷ್ಟು ಖ್ಯಾತಿ ತಮಿಳು ಚಿತ್ರರಂಗದಲ್ಲಿ ಸಿಗಲಿಲ್ಲ. ಆದರೆ, ಶಕ್ತಿ ನಟಿಸಿದ 'ಆಟ ನಾಯಗನ್' ಚಿತ್ರದಲ್ಲಿ ಅವರು ನಟಿಸಿದ್ದರು. ಮೀರಾ ವಾಸುದೇವನ್ ಕೊನೆಯದಾಗಿ 2018ರಲ್ಲಿ ರವಿ ಮೋಹನ್ ನಟಿಸಿದ 'ಅಡಂಗ ಮರು' ಚಿತ್ರದಲ್ಲಿ ತಮಿಳಿನಲ್ಲಿ ನಟಿಸಿದ್ದರು. ಆ ನಂತರ ಅವರು ತಮಿಳಿನಲ್ಲಿ ನಟಿಸಲಿಲ್ಲ. ಅವರು 2024 ರಲ್ಲಿ ಛಾಯಾಗ್ರಾಹಕ ವಿಪುನ್ ಪುತ್ಯಗಂ ಅವರನ್ನು ವಿವಾಹವಾದರು. ಕಳೆದ ವರ್ಷ ಆಗಸ್ಟ್‌ನಲ್ಲಿ ಅವರು ವಿಚ್ಛೇದನ ಪಡೆದರು. ಈ ಸಂದರ್ಭದಲ್ಲಿ, ತಮ್ಮ ಮೂರನೇ ಮದುವೆ ಮತ್ತು ವಿಚ್ಛೇದನದ ಬಗ್ಗೆ ಮಾತನಾಡಿರುವ ಮೀರಾ ವಾಸುದೇವನ್, ನಾನು ತಪ್ಪುಗಳನ್ನು ಮಾಡಿದ್ದೇನೆ, ನನಗೆ ಮರೆಮಾಡಲು ಏನೂ ಇಲ್ಲ. ಈಗ ನಾನು ಜೀವನದಲ್ಲಿ ಮುಂದುವರಿಯಬೇಕು ಎಂದು ಹೇಳಿದರು. ತಪ್ಪು ಮಾಹಿತಿ ಹರಡುವುದನ್ನು ಮತ್ತು ಯಾವುದೇ ತಪ್ಪು ತಿಳುವಳಿಕೆಯನ್ನು ತಡೆಯಲು ನಾನು ಸಾಮಾಜಿಕ ಮಾಧ್ಯಮದ ಮೂಲಕ ವಿಚ್ಛೇದನವನ್ನು ಘೋಷಿಸಿದೆ.



# ಬರಲಿದೆಯಾ ಧುರಂಧರ್ 3



ಸಾಮಾನ್ಯ ಸಿನಿಮಾಗಳನ್ನು ಸಹ ಸೀಕ್ವೆಲ್ ಅಥವಾ ಫ್ರಾಂಚೈಸ್ ಸಿನಿಮಾ (ಸರಣಿ) ಮಾಡಲಾಗುತ್ತಿದೆ. ಹಾಲಿವುಡ್‌ನಲ್ಲಂತೂ ಈ ಸಿನಿಮಾ ಪ್ರಾಂಚೈಸ್ ಬಹಳ ಜನಪ್ರಿಯ. ಇದೀಗ 'ಧುರಂಧರ್' ಅನ್ನು ಸಹ ಸಿನಿಮಾ ಸರಣಿ ಮಾಡುವ ಬಗ್ಗೆ ಸುದ್ದಿಗಳು ಹರಿದಾಡುತ್ತಿವೆ. 'ಧುರಂಧರ್ 3' ಸಿನಿಮಾ ಜೂನ್ ತಿಂಗಳಲ್ಲಿ ಬಿಡುಗಡೆ ಆಗಲಿದೆ. ಅದು ಮಾತ್ರವೇ ಅಲ್ಲದೆ, 'ಧುರಂಧರ್' ಸಿನಿಮಾ ಸರಣಿ ಹಾಗೆಯೇ ಮುಂದುವರೆಯಲಿದೆ ಎನ್ನಲಾಗುತ್ತಿದೆ. ಇದೀಗ ಸಿನಿಮಾ ತಂಡದ ಪ್ರಮುಖ ಸದಸ್ಯರೊಬ್ಬರು ಈ ಬಗ್ಗೆ ಮಾತನಾಡಿದ್ದು, 'ಧುರಂಧರ್ 3' ಬರಲಿದೆಯೇ ಹಾಗೂ 'ಧುರಂಧರ್' ಒಂದು ಪ್ರಾಂಚೈಸ್ ಸಿನಿಮಾ ಸರಣಿಯಾಗಿ ಮುಂದುವರೆಯಲಿದೆಯೇ ಎಂಬ ಬಗ್ಗೆ ಮಾತನಾಡಿದ್ದಾರೆ.

'ಧುರಂಧರ್' ಮತ್ತು 'ಧುರಂಧರ್ 2' ಸಿನಿಮಾಕ್ಕೆ ಕಾಸ್ಟಿಂಗ್ ನಿರ್ದೇಶಕರಾಗಿ ಕೆಲಸ ಮಾಡಿರುವ ಮುಖೇಶ್ ಚಾಬ್ರಾ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮಾತನಾಡಿ, 'ಧುರಂಧರ್ 3' ಸಿನಿಮಾ ಬರುವುದಿಲ್ಲ ಎಂದು ಖಾತ್ರಿ ಪಡಿಸಿದ್ದಾರೆ. 'ಈ ಬಗ್ಗೆ ಸ್ಪಷ್ಟನೆ ನೀಡಲೇಬೇಕಾಗಿದೆ. ಅಂತಹದ್ದೇನೂ (ಧುರಂಧರ್ 3) ನಡೆಯುತ್ತಿಲ್ಲ. ಇವೆಲ್ಲಾ ಕೇವಲ ವದಂತಿಗಳು' ಎಂದು ಸ್ಪಷ್ಟಪಡಿಸಿದ್ದಾರೆ. 'ಒಂದು ವೇಳೆ ಅಧಿಕೃತ ಮಾಹಿತಿ ಇದ್ದರೆ ತಾವೇ ಅದನ್ನು ಸಾಮಾಜಿಕ ಜಾಲತಾಣ ದಲ್ಲಿ ಹಂಚಿಕೊಳ್ಳುವುದಾಗಿ ಅವರು ತಿಳಿಸಿದ್ದಾರೆ.

ನಿರ್ದೇಶಕ ಆದಿತ್ಯ ಧರ್ ಸಹ ಈ ಬಗ್ಗೆ ಸಂದರ್ಶನವೊಂದರಲ್ಲಿ ಮಾತನಾಡಿದ್ದು, 'ಧುರಂಧರ್ ಭಾಗ 1 ಮತ್ತು 2 ರ ಮೂಲಕ ನಾನು ಹೇಳಬೇಕಾದ ಕಥೆಯನ್ನು ಎಂಟು ಗಂಟೆಗಳ ಕಾಲಾವಧಿಯಲ್ಲಿ ಸಂಪೂರ್ಣವಾಗಿ ಹೇಳಿದ್ದೇನೆ. ಕೇವಲ ಹಣದ ಲಾಭಕ್ಕಾಗಿ ಕಥೆಯನ್ನು ಎಳೆಯಲು ನಾನು ಇಷ್ಟಪಡುವುದಿಲ್ಲ' ಎಂದಿದ್ದಾರೆ. ಆ ಮೂಲಕ ತಾವು 'ಧುರಂಧರ್ 3' ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕಾಸ್ಟಿಂಗ್ ನಿರ್ದೇಶಕ ಮುಖೇಶ್, ರಣ್ವೀರ್ ಸಿಂಗ್ ಬಗ್ಗೆ ಸಹ ಮಾತನಾಡಿದ್ದು, 'ಅವರೊಬ್ಬ ಅದ್ಭುತ ನಟ, ಸಿನಿಮಾಕ್ಕಾಗಿ ಬಹಳ ಕಷ್ಟ ಪಡುತ್ತಾರೆ. ರಣ್ವೀರ್ ಅವರ ಆರಂಭದ ದಿನಗಳಲ್ಲಿ ನಾನು ಅವರ ಸ್ಕ್ರೀನ್ ಟೆಸ್ಟ್‌ಗಳನ್ನು ಸಹ ಮಾಡಿದ್ದೆ. ಅವರ ನಟನೆಯ 'ಲುಟೇರಾ' ಸಿನಿಮಾನಲ್ಲಿ ಅವರೊಟ್ಟಿಗೆ ಕೆಲಸ ಮಾಡಿದ್ದೆ, ಬಳಿಕ '83' ಸಿನಿಮಾನಲ್ಲಿಯೂ ಕೆಲಸ ಮಾಡಿದ್ದೆ. ನಮ್ಮದು ಬಹಳ ಹಳೆಯ ಸ್ನೇಹ' ಎಂದು ಹೇಳಿಕೊಂಡಿದ್ದಾರೆ.


# ಬಾದ್‌ಶಾ ಮದುವೆಯಾದ ಇಶಾ ರಿಖಿ

ರ್ಯಾಪರ್ ಬಾದ್‌ಶಾ ಹಾಗೂ ಪಂಜಾಬಿ ನಟಿ ಇಶಾ ರಿಖಿ ಅವರನ್ನು ಆತ್ಮೀಯ ಸಮಾರಂಭದಲ್ಲಿ ವಿವಾಹವಾದರು. ಈ ಬಗ್ಗೆ ಹೆಚ್ಚಿನ ವಿವರಗಳು ಮತ್ತು ದಿನಾಂಕದ ಬಗ್ಗೆ ಯಾವುದೇ ಹೆಚ್ಚಿನ ವಿಷ್ಯ ಹೊರಬಾರದಿದ್ದರೂ , ಸಮಾರಂಭದ ಸಮಯದಲ್ಲಿ ಆಯೋಜಿಸಲಾದ ಆಚರಣೆಗಳ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಸಿಕ್ಕಾಪಟ್ಟೆ ವೈರಲ್ ಆಗುತ್ತಿವೆ. ಇಶಾ ಮತ್ತು ಬಾದ್‌ಶಾ ನಾಲ್ಕು ವರ್ಷಗಳ ಹಿಂದೆಯೇ ಡೇಟಿಂಗ್ ಮಾಡಲು ಪ್ರಾರಂಭಿಸಿದ್ದಾರೆಂದು ಹೇಳಲಾಗುತ್ತಿದೆ. ಆದಾಗ್ಯೂ, ಅವರು ತಮ್ಮ ಮದುವೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಅಧಿಕೃತವಾಗಿ ದೃಢಪಡಿಸಿಲ್ಲ.

ಬಾದ್‌ಶಾ ಅವರಂತೆಯೇ, ಇಶಾ ಕೂಡ ಮನರಂಜನಾ ಚಲನಚಿತ್ರೋದ್ಯಮದಲ್ಲಿ ಬಹಳ ಜನಪ್ರಿಯ ಹೆಸರು. ಅವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ.

ಇಶಾ ರಿಖಿ ಜೊತೆಗಿನ ಬಾದ್‌ಶಾ ಅವರ ಮದುವೆಯ ಫೋಟೋಗಳು ಸದ್ಯ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ. ಇಶಾ ರಿಖಿ ಒಬ್ಬ ಭಾರತೀಯ ನಟಿ ಮತ್ತು ರೂಪದರ್ಶಿ, ಅವರು ಮೊದಲಿಗೆ ಪಂಜಾಬಿ ಚಿತ್ರರಂಗದಲ್ಲಿ ಕೆಲಸ ಮಾಡಿದ್ದರು . ಬಳಿಕ ಇಶಾ 2013 ರಲ್ಲಿ ಜಾಟ್ ಬಾಯ್ಸ್ ಪುಟ್ ಜಟ್ಟನ್ ದೇ ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು, ಅಲ್ಲಿ ಅವರು ಸಿಪ್ಪಿ ಗಿಲ್ ಜೊತೆಗೆ ನಟಿಸಿದರು. ನಂತರ 2014ರಲ್ಲಿ ಅಮರಿಂದರ್ ಗಿಲ್ ಜೊತೆ ಹ್ಯಾಪಿ ಗೋ ಲಕ್ಕಿ ಚಿತ್ರದಲ್ಲಿ ನಟಿಸಿದರು, ಮತ್ತು ನಂತರ ಮುಂದಿನ ಎರಡು ವರ್ಷಗಳಲ್ಲಿ ಮೇರೆ ಯಾರ್ ಕಮಿನೇ ಮತ್ತು ವಾಟ್ ದಿ ಜಾಟ್ ಚಿತ್ರಗಳಲ್ಲಿ ಕಾಣಿಸಿಕೊಂಡರು. 2016 ರಲ್ಲಿ, ಅವರು ಅರ್ದಾಸ್ ಚಿತ್ರದಲ್ಲಿ ಉತ್ಸಾಹಭರಿತ ಯುವತಿಯ ಪಾತ್ರವನ್ನು ನಿರ್ವಹಿಸಿದರು, ಗಿಪ್ಪಿ ಗ್ರೆವಾಲ್ ಮತ್ತು ಆಮಿ ವಿರ್ಕ್ ಅವರೊಂದಿಗೆ ಪರದೆಯನ್ನು ಹಂಚಿಕೊಂಡರು. ನಂತರ ಇಶಾ ನವಾಬ್ಜಾದೆ ಚಿತ್ರದ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು, ಇದು ಹಿಂದಿ ಚಿತ್ರಗಳಿಗೆ ಅವರ ಪ್ರವೇಶವನ್ನು ಗುರುತಿಸಿತು. ಈ ಚಿತ್ರದಲ್ಲಿ ವರುಣ್ ಧವನ್, ರಾಘವ್ ಜುಯಾಲ್ ಮತ್ತು ಪುನೀತ್ ಪಾಠಕ್ ಕೂಡ ನಟಿಸಿದ್ದರು.

# ಆಮಿರ್ ಖಾನ್ ಪುತ್ರನ ಬಳಿ ಇಲ್ಲ ಕಾರು



ಬಾಲಿವುಡ್ ನಟ ಆಮಿರ್ ಖಾನ್ ತಮ್ಮ ಮಗ ಜುನೈದ್ ಖಾನ್ ಬಗ್ಗೆ ಹೆಮ್ಮೆಯಿಂದ ಮಾತನಾಡಿದ್ದಾರೆ. ಜುನೈದ್ ಸರಳ ಜೀವನ ನಡೆಸುತ್ತಿದ್ದು, ಐಷಾರಾಮಿ ಕಾರು ಬದಲು ಬಸ್, ಓಲಾ ಬಳಸುತ್ತಾರೆ ಎಂದಿದ್ದಾರೆ. ಕೇವಲ ಎರಡು ಸಿನಿಮಾಗಳನ್ನು ಮಾಡಿರುವ ಜುನೈದ್, ಸಾಮಾನ್ಯ ಜನರಂತೆ ರಾಜ್ಯ ಸಾರಿಗೆ ಬಸ್‌ನಲ್ಲಿಯೂ ಪ್ರಯಾಣಿಸುತ್ತಾರೆ. ಆಮಿರ್ ಖಾನ್ ಅವರು ಬಾಲಿವುಡ್‌ನ ಶ್ರೀಮಂತ ನಟರಲ್ಲಿ ಒಬ್ಬರು. ಅವರು ಬಾಲಿವುಡ್‌ನಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಅವರು ಸಿನಿಮಾ ಮಾಡುವುದರಲ್ಲಿ ಬ್ಯೂಸಿ ಆಗಿದ್ದಾರೆ. ಅವರು ಕುಟುಂಬಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಅವರು ಈಗ ತಮ್ಮ ಮಗ ಜುನೈದ್ ಖಾನ್ ಬಗ್ಗೆ ಮಾತನಾಡಿದ್ದಾರೆ. ಮಗ ಯಾವ ರೀತಿ ಎಂದು ಹೇಳಿದ್ದಾರೆ. ಕಾರಿನಲ್ಲಿ ಓಡಾಡುವುದೇ ಇಲ್ಲ ಎಂದು ಹೇಳಿದ್ದಾರೆ. ಅವರು ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಾರಂತೆ.

'ನನ್ನ ಮೂವರು ಮಕ್ಕಳೂ ತುಂಬಾ ಸೂಕ್ಷ್ಮ. ಕೊವಿಡ್ ಸಮಯದಲ್ಲಿ ರೀನಾಳ ಹೆತ್ತವರಿಬ್ಬರಿಗೂ ವೈರಸ್ ತಗುಲಿತು. ಆಗ ಜುನೈದ್ ತಕ್ಷಣ ಅವರೊಂದಿಗೆ ವಾಸಿಸಲು ಮುಂದಾದ. ಎರಡು ವಾರಗಳ ಕಾಲ ಅವನು ಚೆನ್ನಾಗಿರುವಂತೆ ನೋಡಿಕೊಂಡ. ಇದು ಜುನೈದ್ ಖಾನ್' ಎಂದು ಹೇಳಿದ್ದಾರೆ ಆಮಿರ್ ಖಾನ್. 'ಜುನೈದ್ ಖಾನ್ ಬಳಿ ಕಾರು ತೆಗೆದುಕೊಳ್ಳುವಂತೆ ನಾನು ಹೇಳಿ ಹೇಳಿ ಸಾಕಾಗಿದೆ. ಅವನು ಈವರೆಗೆ ಕಾರು ಖರೀದಿಸಿಲ್ಲ. ಎರಡು ಸಿನಿಮಾ ಮಾಡಿದ್ದಾನೆ. ಅವನು ಓಲಾದಲ್ಲಿ ಹೋಗುತ್ತಾನೆ ಅಥವಾ ಬಸ್‌ನಲ್ಲಿ ಓಡಾಡುತ್ತಾನೆ' ಎಂದು ಆಮಿರ್ ಖಾನ್ ಅವರು ಎಮ್ಮೆಯಿಂದ ಹೇಳಿದ್ದಾರೆ.

'ಅವನು ಒಮ್ಮೆ ಕೇರಳದಲ್ಲಿದ್ದ. ಬೆಂಗಳೂರಿನಲ್ಲಿ ಸ್ನೇಹಿತನ ಮದುವೆಗೆ ಹಾಜರಾಗ ಬೇಕಾಯಿತು. ನಾನು ಅವನ ಬಳಿ ಯಾವ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೀರಿ ಎಂದು ಕೇಳಿದೆ. ಅವನು ರಾಜ್ಯ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿರುವುದಾಗಿ ಹೇಳಿದ. ಅವನು ಅಸಾಮಾನ್ಯ ರೀತಿಯ ವ್ಯಕ್ತಿ. ಆದರೆ ಅವರನ್ನು ಎಂದಿಗೂ ಭೌತಿಕವಾದಿಗಳಾಗಿ ಬೆಳೆಸಲಾಗಿಲ್ಲ. ನನಗೆ ಹಣದ ಬಗ್ಗೆ ಹೆಚ್ಚು ಕಾಳಜಿ ಇಲ್ಲ' ಎಂದಿದ್ದಾನೆ ಆಮಿರ್ ಖಾನ್.

# ಮತ್ತೊಂದು ಸಿನಿಮಾ ಒಪ್ಪಿದ್ರಾ ಪವನ್

ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ರಾಜಕೀಯದ ನಡುವೆಯೂ ಮೂರು ಸಿನಿಮಾಗಳನ್ನು ಅವರು ಮುಗಿಸಿದ್ದಾರೆ. ಪವನ್ ಅವರು ಡಿಸಿಎಂ ಆದ ಬಳಿಕ 'ಹರಿ ಹರ ವೀರ ಮಲ್ಲು', 'ಓಜಿ' ಮತ್ತು ಇತ್ತೀಚೆಗಷ್ಟೆ ಅವರ ನಟನೆಯ 'ಉಸ್ತಾದ್ ಭಗತ್ ಸಿಂಗ್' ಸಿನಿಮಾಗಳು ಬಿಡುಗಡೆ ಆಗಿವೆ. ಅಸಲಿಗೆ ಈ ಮೂರೂ ಸಿನಿಮಾಗಳನ್ನು ಅವರು ಚುನಾವಣೆಗೆ ಧುಮುಕುವ ಮೊದಲೇ ಒಪ್ಪಿಕೊಂಡಿದ್ದರು. ಇದೀಗ ಪವನ್ ಕಲ್ಯಾಣ್ ಅವರು ಹೊಸದೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಜನಸೇನಾ ಪಕ್ಷದ ಮುಖ್ಯಸ್ಥ ಮತ್ತು ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಸದ್ಯ ರಾಜಕೀಯದಲ್ಲಿ ಬ್ಯುಸಿಯಾಗಿದ್ದಾರೆ. ಆದರೆ ರಾಜಕೀಯದ ನಡುವೆಯೂ ಮೂರು ಸಿನಿಮಾಗಳನ್ನು ಅವರು ಮುಗಿಸಿದ್ದಾರೆ. ಪವನ್ ಅವರು ಡಿಸಿಎಂ ಆದ ಬಳಿಕ 'ಹರಿ ಹರ ವೀರ ಮಲ್ಲು', 'ಓಜಿ' ಮತ್ತು ಇತ್ತೀಚೆಗಷ್ಟೆ ಅವರ ನಟನೆಯ 'ಉಸ್ತಾದ್ ಭಗತ್ ಸಿಂಗ್' ಸಿನಿಮಾಗಳು ಬಿಡುಗಡೆ ಆಗಿವೆ. ಅಸಲಿಗೆ ಈ ಮೂರೂ ಸಿನಿಮಾಗಳನ್ನು ಅವರು ಚುನಾವಣೆಗೆ ಧುಮುಕುವ ಮೊದಲೇ ಒಪ್ಪಿಕೊಂಡಿದ್ದರು.



ಇದೀಗ ಪವನ್ ಕಲ್ಯಾಣ್ ಅವರು ಹೊಸದೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ ಎನ್ನಲಾಗುತ್ತಿದೆ.

ಪವನ್ ಕಲ್ಯಾಣ್ ಅವರು ಡಿಸಿಎಂ ಆಗುವ ಮುಂಚೆ ಒಪ್ಪಿಕೊಂಡಿದ್ದ ಸಿನಿಮಾಗಳನ್ನು ಮುಗಿಸಿ ಆ ನಂತರ ಯಾವುದೂ ಸಿನಿಮಾಗಳಲ್ಲಿ ನಟಿಸುವುದಿಲ್ಲ ಎಂದಿದ್ದರು. ಆದರೆ ಈಗ ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ ಎಂಬ ಸುದ್ದಿಗಳು ಹರಿದಾಡಲು ಆರಂಭಿಸಿವೆ.

ಇದು ಅಭಿಮಾನಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಇದೀಗ ಪವನ್ ಕಲ್ಯಾಣ್ ತಂಡದವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಪವನ್ ಕಲ್ಯಾಣ್ ಅವರು ಯಾವುದೇ ಹೊಸ ಸಿನಿಮಾ ಒಪ್ಪಿಕೊಂಡಿಲ್ಲ ಎಂದಿದ್ದಾರೆ.

# ಐಪಿಎಲ್ ಆರಂಭಕ್ಕೂ ಮುನ್ನ ಶಾಕ್

ಮಾರ್ಚ್ 28ರಿಂದ ಐಪಿಎಲ್ ಹಬ್ಬ ಶುರುವಾಗಲಿದೆ. ಆದರೆ ಅದಕ್ಕೂ ಮೊದಲು ಆರ್‌ಸಿಬಿ ಅಭಿಮಾನಿಗಳಿಗೆ ಶಾಕ್ ಎದುರಾಗಿದೆ.

ಅದೇನೆಂದರೆ ಅತ್ಯಾಚಾರ ಆರೋಪ ಎದುರಿಸುತ್ತಿರುವ ವೇಗಿ ಯಶ್ ದಯಾಳ್ ಐಪಿಎಲ್ 2026ರ ಸೀಸನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡುವುದಿಲ್ಲ ಎಂದು ಆರ್‌ಸಿಬಿ ನಿರ್ದೇಶಕ ಮೋ ಬೋಬಾಟ್ ದೃಢಪಡಿಸಿದ್ದಾರೆ. ಆರ್‌ಸಿಬಿಯ ಸ್ಟಾರ್ ಬೌಲರ್ ಯಶ್ ದಯಾಳ್ ಅವರ ಮೇಲೆ ಎರಡೆರಡು ಅತ್ಯಾಚಾರದ ಆರೋಪಗಳಿವೆ. ಇತ್ತೀಚಿಗೆ ಹೊಸ ಸೀಸನ್ ಆರಂಭದ ಮುನ್ನ ನಡೆದ ತರಬೇತಿಯಲ್ಲೂ ಅವರು ಕಾಣಿಸಿಕೊಂಡಿರಲಿಲ್ಲ. ಹೀಗಾಗಿ ಆರ್‌ಸಿಬಿ ತಂಡದಿಂದ ಗೇಟ್‌ಪಾಸ್ ನೀಡಲಾಗಿದೆ ಎಂಬ ವದಂತಿಗಳು ಹಬ್ಬಿದ್ದವು. ಸದ್ಯ ಇದೆಲ್ಲದಕ್ಕೂ ಇದೀಗ ಉತ್ತರ ಸಿಕ್ಕಿದೆ. ಯಶ್ ದಯಾಳ್ ಈ ಬಾರಿ ಆರ್‌ಸಿಬಿ ತಂಡದಲ್ಲಿ ಇರುವುದಿಲ್ಲ ಎಂದು ಆರ್‌ಸಿಬಿ ನಿರ್ದೇಶಕ ಮೋ ಬೋಬಾಟ್ ದೃಢಪಡಿಸಿದ್ದಾರೆ.ಆರ್ ಸಿಬಿ ತಂಡದಲ್ಲಿ ಮಿಂಚಿರುವ ಸ್ಟಾರ್ ಬೌಲರ್ ಯಶ್ ದಯಾಳ್ ಕೋಟ್ಯಂತರ ಅಭಿಮಾನಿ ಬಳಗ ಹೊಂದಿದ್ದಾರೆ. 2025ರ ಐಪಿಎಲ್‌ನಲ್ಲಿ ಆರ್‌ಸಿಬಿ ಗೆಲುವಿಗೆ ಕಾರಣರಾಗಿದ್ದರು. ಆದರೆ ಈ ಬಾರಿ ಆರ್ ಸಿಬಿ ತಂಡದಲ್ಲಿ ಇರುವುದಿಲ್ಲ ಎಂಬುವುದು ಇದೀಗ ದೃಢವಾಗಿದೆ. ಹೀಗಾಗಿ ಇದು ಅವರ ಮತ್ತು ಆರ್‌ಸಿಬಿ ಅಭಿಮಾನಿಗಳಿಗೆ ದೊಡ್ಡ ಶಾಕ್ ನೀಡಿದೆ.

**ಆರ್‌ಸಿಬಿ ನಿರ್ದೇಶಕ ಮೋ ಬೋಬಾಟ್ ಹೇಳಿದ್ದಿಷ್ಟು**

ಇನ್ನು ಈ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಸಿಬಿ ನಿರ್ದೇಶಕ ಮೋ ಬೋಬಾಟ್, ಯಶ್ ದಯಾಳ್ ಈ ಬಾರಿ ಆರ್‌ಸಿಬಿ ತಂಡದಲ್ಲಿ ಇರುವುದಿಲ್ಲ, ಆದರೆ ಅವರಿಗೆ ಏನು ಸಹಕಾರ ನೀಡಬೇಕು ಅದನ್ನು ಆರ್‌ಸಿಬಿ ನೀಡುತ್ತದೆ. ಸದ್ಯ ಅವರು ತಮ್ಮ ವೈಯಕ್ತಿಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಯಶ್ ದಯಾಳ್‌ರನ್ನ ನಾವು ತಂಡದಲ್ಲಿ ಉಳಿಸಿಕೊಳ್ಳಲು ಬಯಸಿದ್ದು, ಅವರು ಇನ್ನೂ ಒಪ್ಪಂದದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಅದೇ ಒಪ್ಪಂದದಡಿ ಮುಂದುವರೆಯಲಿದ್ದಾರೆ. ನಾವು ಅವರೊಂದಿಗೆ ಸಂಪರ್ಕದಲ್ಲಿದ್ದೇವೆ. ಇಂದು ಸಹ ನಾನು ಅವರೊಂದಿಗೆ ಮಾತನಾಡಿದ್ದೇನೆ. ಆದರೆ ಈ ಸಮಯದಲ್ಲಿ ತಂಡಕ್ಕೆ ಸೇರದಿರುವುದು ಅವರ ಮತ್ತು ಫ್ರಾಂಚೈಸಿಯ ಹಿತಕ್ಕೂ ಸರಿಯಲ್ಲ ಎಂದು ನಿರ್ಧರಿಸಲಾಗಿದೆ ಎಂದು ಆರ್‌ಸಿಬಿ ನಿರ್ದೇಶಕ ಮೋ ಬೋಬಾಟ್ ತಿಳಿಸಿದ್ದಾರೆ. ರಾಜಸ್ಥಾನದ ಜೈಪುರದಲ್ಲಿ ಆರ್‌ಸಿಬಿ ವೇಗಿ ಯಶ್ ದಯಾಳ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. 19 ವರ್ಷದ ಕ್ರಿಕೆಟ್ ಆಟಗಾರ್ತಿಯಾಗಿದ್ದ ಸಂತ್ರಸ್ತೆ, ದಯಾಳ್ ವಿರುದ್ಧ ಪ್ರಕರಣ ದಾಖಲಿಸಿದ್ದರು.



# ನಮ್ಮ ಆರ್‌ಸಿಬಿಗೆ ಹೆಮ್ಮೆಯ ಕೆಎಂಎಫ್ ಸಾಥ್

ಕನ್ನಡಿಗರ ಹೆಮ್ಮೆಯ ಬ್ರ್ಯಾಂಡ್ ನಂದಿನಿ ಹಾಗೂ ನಾಡಿನ ಜನರ ಹೃದಯ ಸಿಂಹಾಸನದಲ್ಲಿ ರಾರಾಜಿಸುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎರಡು ಒಟ್ಟಾದರೆ ಹೇಗಿರಬೇಡ ಹೇಳಿ ಹೌದು, ಕ್ರಿಕೆಟ್ ಮೈದಾನದಲ್ಲಿ ಅಬ್ಬರಿಸಿ ಸಜ್ಜಾಗಿರುವ ಚಾಂಪಿಯನ್ ಆಫ್ ಚಾಂಪಿಯನ್ ಆರ್‌ಸಿಬಿಗೆ ಶಕ್ತಿ ತುಂಬಲು, ಕರುನಾಡಿನ ಹೆಮ್ಮೆಯ ನಂದಿನಿ ಸಾಥ್ ನೀಡಲು ಸಜ್ಜಾಗಿದೆ.

**ನಮ್ಮ ಆರ್‌ಸಿಬಿಗೆ ಹೆಮ್ಮೆಯ ಕೆಎಂಎಫ್ ಸಾಥ್:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಕನ್ನಡಿಗರ ಹೆಮ್ಮೆಯ ನಂದಿನಿ ಸಾಥ್ ನೀಡಲಿದೆ. ನಂದಿನಿ ಈಗ ಆರ್‌ಸಿಬಿಗೆ ಅಧಿಕೃತ ಡೈರಿ ಪಾರ್ಟ್ನರ್ ಆಗಿದೆ ಎಂದು ಸುದ್ದಿ ಹೊರಬಿದ್ದಿದೆ. ಅಷ್ಟೇ ಅಲ್ಲದೇ ವಿರಾಟ್ ಕೊಹ್ಲಿ, ರಜತ್ ಪಟಿದಾರ್, ದೇವದತ್ ಪಡಿಕಲ್ ಭಾವಚಿತ್ರದ ಪ್ರಾಡಕ್ಟ್‌ಗಳ ಅನಾವರಣ ಕೂಡ ಆಗಲಿದೆ ಎಂದು ಕೆಎಂಎಫ್ ಎಂ.ಡಿ ಬಿ ಶಿವಸ್ವಾಮಿ ತಿಳಿಸಿದ್ದಾರೆ.

ಇನ್ನು, ಈ ಕುರಿತು ಕೆಎಂಎಫ್ ಎಂ.ಡಿ ಬಿ ಶಿವಸ್ವಾಮಿ ಕಂಪ್ಲೀಟ್ ಮಾಹಿತಿ ನೀಡಿದರು. ನಂದಿನಿ ಉತ್ಪನ್ನವನ್ನು ದೇಶ ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ. ಆರ್‌ಸಿಬಿ ಜೊತೆಗೆ ನಮ್ಮ ಮಾರ್ಕೆಟ್ ವಿಸ್ತರಣೆಯಾಗಲಿದೆ. ಕಳೆದ 2024ರಿಂದ ಪ್ರಯತ್ನ ನಡೆಸಲಾಗಿತ್ತು. ಕ್ರೀಡೆಗಳಲ್ಲಿ ನಂದಿನಿ ಪ್ರಾಯೋಜಕತ್ವದಿಂದ ಯುವಜನರನ್ನು ಸೆಳೆಯಲಿದೆ. ಆರ್‌ಸಿಬಿ ಹಾಗೂ ನಂದಿನಿ ಎರಡು ಐಕಾನಿಕ್ ಬ್ರ್ಯಾಂಡ್‌ಗಳು. ಇವೆರಡು ಒಂದಾದರೆ ಯುವಜನರನ್ನು ಸೆಳೆಯಬಹುದು ಎಂದು ಎಂ.ಡಿ ಶಿವಸ್ವಾಮಿ ಹೇಳಿದರು.



**ಆಟಗಾರರ ಭಾವಚಿತ್ರದ ಪ್ರಾಡಕ್ಟ್ ಅನಾವರಣ:** ಆರ್‌ಸಿಬಿಯ ಡೈರಿ ಪಾರ್ಟ್ನರ್ ಆಗಿರುವ ಆರ್‌ಸಿಬಿ ವಿರಾಟ್ ಕೊಹ್ಲಿ, ರಜತ್ ಪಟಿದಾರ್, ದೇವದತ್ ಪಡಿಕಲ್ ಭಾವಚಿತ್ರದ ಪ್ರಾಡಕ್ಟ್ ಅನಾವರಣ ಮಾಡಲಿದೆ ಎಂದು ತಿಳಿಸಿದರು.

ಇನ್ನು ಟೆಂಡರ್‌ನಲ್ಲಿ ನಂದಿನಿ ಬರೋಬ್ಬರಿ 4 ಕೋಟಿ 80 ಲಕ್ಷ ನೀಡಿ ಒಂದು ವರ್ಷದವರೆಗೆ ಪ್ರಾಯೋಜಕತ್ವ ಪಡೆದಿದೆ ಎಂದು ಮಾಹಿತಿ ನೀಡಿದ ಎಂ.ಡಿ ಶಿವಸ್ವಾಮಿ, ಉತ್ತರ ಭಾರತದಲ್ಲಿ ನಂದಿನಿ ಉತ್ಪನ್ನಗಳ ಮಾರಾಟ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಅಮುಲ್‌ಗೆ ಕಾಂಪಿಟೇಶನ್ ನೀಡಲು ಕೆಎಂಎಫ್ ತೀರ್ಮಾನ:** ಇನ್ನು, ಕೇವಲ ಚಿನ್ನಸ್ವಾಮಿ ಅಷ್ಟೇ ಅಲ್ಲದೇ ಆರ್‌ಸಿಬಿ ಪಂದ್ಯ ಇದ್ದ ಮೈದಾನದಲ್ಲಿ ನಂದಿನಿ ಉತ್ಪನ್ನ ಮಾರಾಟ ಮಾಡಲಾಗುವುದು ಎಂದು ಕೆಎಂಎಫ್ ಎಂ.ಡಿ ಶಿವಸ್ವಾಮಿ ಮಾಹಿತಿ ನೀಡಿದರು.

ಈ ಮೂಲಕ ಅಮುಲ್‌ಗೆ ಕಾಂಪಿಟೇಶನ್ ನೀಡಲು ಕೆಎಂಎಫ್ ತೀರ್ಮಾನಿಸಿದ್ದು, ಕೇವಲ ದಕ್ಷಿಣ ಭಾರತ ಮಾತ್ರವಲ್ಲದೇ ಉತ್ತರ ಭಾರತದಲ್ಲೂ ತನ್ನ ಪ್ರಾಬಲ್ಯವನ್ನು ಹೆಚ್ಚಿಸಲು ನಿರ್ಧರಿಸಿದೆ. ಆದರೆ ಬೇಸರ ಸಂಗತಿಯೆಂದರೆ ಆಟಗಾರರ ಜೆರ್ಸಿ ಮೇಲೆ ಕೆಎಂಎಫ್ ಲೋಗೋ ಇರುವುದಿಲ್ಲ, ಮೈದಾನದಲ್ಲಿ ಉತ್ಪನ್ನ ಮಾರಾಟ ಮಾಡಲು ಅವಕಾಶ ಇದೆ ಎಂದು ಮಾಹಿತಿ ನೀಡಿದ್ದಾರೆ.


ಕೆಎಂಎಫ್ ಕಳೆದ ಕೆಲವು ವರ್ಷಗಳಿಂದ ಕ್ರೀಡಾ ಪ್ರಾಯೋಜಕತ್ವದ ಕಡೆಗೆ ಹೆಚ್ಚಿನ ಒಲವು ತೋರುತ್ತಿದೆ.

ಕಳೆದ ಟಿ20 ಕ್ರಿಕೆಟ್ ವಿಶ್ವಕಪ್ ಸಮಯದಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳನ್ನು ಪ್ರಾಯೋಜಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿತ್ತು.

# ವಿಶ್ವಕಪ್ ಗೆದ್ದ ರಿಂಕು ಸಿಂಗ್‌ಗೆ ಸರ್ಕಾರಿ ಉದ್ಯೋಗ!

ಟೀಮ್ ಇಂಡಿಯಾ ಸೆನ್ಸೇಷನ್ ರಿಂಕು ಸಿಂಗ್‌ಗೆ ಸರ್ಕಾರಿ ಉದ್ಯೋಗ ಪಡೆದುಕೊಂಡಿದ್ದಾರೆ. ಉತ್ತರ ಪ್ರದೇಶದ ಯೋಗಿ ನೇತೃತ್ವದ ಸರ್ಕಾರವು ರಿಂಕು ಸಿಂಗ್ ಅವರನ್ನು ಪ್ರಾದೇಶಿಕ ಕ್ರೀಡಾ ಅಧಿಕಾರಿಯಾಗಿ ನೇಮಿಸಲು ಸಿದ್ಧತೆ ನಡೆಸಿದೆ ಎಂದು ವರದಿಗಳಿಂದ ತಿಳಿದುಬಂದಿವೆ. ಇಂಡಿಯಾ ಟುಡೇ ಪ್ರಕಾರ, ಸೂರ್ಯಕುಮಾರ್ ಯಾದವ್ ನಾಯಕತ್ವದಲ್ಲಿ ಭಾರತ ತಂಡ ಗೆದ್ದ 2026ರ ಐಸಿಸಿ ಟಿ20 ವಿಶ್ವಕಪ್ ತಂಡದ ಭಾಗವಾಗಿದ್ದರು. ಹಾಗಾಗಿ ಅವರ ಸಾಧನೆಯನ್ನು ಗಮನಿಸಿ ಯುಪಿ ಸರ್ಕಾರ ಈ ಉದ್ಯೋಗ ನೀಡುತ್ತಿದೆ.

**ವಿಶ್ವಕಪ್ ಮಧ್ಯೆ ತಂದೆ ಕಳೆದುಕೊಂಡಿದ್ದ ರಿಂಕು:** ಈ ಮೆಗಾ-ಟೂರ್ನಮೆಂಟ್ ಸಮಯದಲ್ಲಿ ರಿಂಕು ಸಿಂಗ್ ಅವರ ತಂದೆ ನಿಧನರಾದರು ಎಂಬುದು ಎಲ್ಲಾರಿಗೂ ತಿಳಿದಿರುವ ಸಂಗತಿ. ಟಿ20 ವಿಶ್ವಕಪ್‌ನಲ್ಲಿ ಭಾರತೀಯ ತಂಡಕ್ಕಾಗಿ ಆಡುವಾಗ, ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿದ್ದ ತನ್ನ ತಂದೆಯನ್ನು ಭೇಟಿ ಮಾಡಲು ರಿಂಕು ಸಿಂಗ್ ಗ್ರೇಟರ್ ನೋಯ್ಡಾಗೆ ಟೂರ್ನಿ ಮಧ್ಯೆ ಪ್ರಯಾಣ ಬೆಳೆಸಬೇಕಾಯಿತು. ಅವರ ತಂದೆಯ ಕೊನೆಯ ನಿಧನದ ಹೊರತಾಗಿಯೂ, ಅಗತ್ಯ ವಿಧಿವಿಧಾನಗಳನ್ನು ಪೂರ್ಣಗೊಳಿಸಿದ ತಕ್ಷಣ ರಿಂಕು ಸಿಂಗ್ ತಂಡವನ್ನು ಸೇರಿಕೊಂಡರು. ಭಾರತ ತಂಡ ಚಾಂಪಿಯನ್ ಆಗಿತ್ತು. ಇದೀಗ ವಿಶ್ವಚಾಂಪಿಯನ್ಸ್ ತಂಡದ ಭಾಗವಾಗಿ ರಾಜ್ಯಕ್ಕೆ ಕೀರ್ತಿ ತಂದಿರುವ ರಿಂಕು ಸಿಂಗ್ ಅವರನ್ನು ಉತ್ತರ ಪ್ರದೇಶ ಸರ್ಕಾರ ಪ್ರಾದೇಶಿಕ ಕ್ರೀಡಾ ಅಧಿಕಾರಿ ಹುದ್ದೆ ನೀಡುತ್ತಿದೆ. ಇದು ಗ್ರೂಪ್-ಎ ವರ್ಗದ ಅಡಿಯಲ್ಲಿ ಬರುತ್ತದೆ. ಸಂಬಳ ಮತ್ತು ಭತ್ಯೆಗಳನ್ನು ಒಳಗೊಂಡಂತೆ, ಈ ಹುದ್ದೆಯ ಸಂಭಾವನೆ 56,100 ರಿಂದ 1,77,500 ವರೆಗೆ ಇರುತ್ತದೆ ಎಂದು ತಿಳಿದುಬಂದಿದೆ. ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗಗಳು, ನಗದು ಬಹುಮಾನಗಳು ಮತ್ತು ಪ್ರತಿಷ್ಠಿತ ಕ್ರೀಡಾ ಪ್ರಶಸ್ತಿಗಳನ್ನು ನೀಡುವುದಾಗಿ ಉತ್ತರ ಪ್ರದೇಶ ಸರ್ಕಾರ ಘೋಷಿಸಿದೆ. ಲೋಕ ಭವನದಲ್ಲಿ ನಡೆಯಲಿರುವ ಸನ್ಮಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ನೇಮಕಾತಿ ಪತ್ರಗಳನ್ನು ಪ್ರದಾನ ಮಾಡಲಿದ್ದಾರೆ.



# 15,286 ಕೋಟಿ ರೂ.ಗೆ ಮಾರಾಟವಾಯ್ತು ರಾಜಸ್ಥಾನ ರಾಯಲ್ಸ್!


ರಾಜಸ್ಥಾನ ರಾಯಲ್ಸ್ ತಂಡ 1.63 ಬಿಲಿಯನ್ (ಸುಮಾರು 15,286 ಕೋಟಿ ರೂ.) ಮೊತ್ತಕ್ಕೆ ಅಮೆರಿಕದ ಕಲ್ ಸೋಮನಿ ನೇತೃತ್ವದ ಒಕ್ಕೂಟಕ್ಕೆ ಮಾರಾಟವಾಗಿದ್ದು, ಐಪಿಎಲ್ ಇತಿಹಾಸದಲ್ಲೇ ಅತಿ ದುಬಾರಿ ಫ್ರಾಂಚೈಸಿಯಾಗಿದೆ. 2026ರ ಸೀಸನ್ ನಂತರ ಈ ಮಾಲೀಕತ್ವ ಬದಲಾವಣೆ ಅಧಿಕೃತವಾಗಲಿದೆ.

ಸ್ಯಾಮ್ ಕರನ್ ಗಾಯದಿಂದಾಗಿ ಐಪಿಎಲ್ 2026 ರಿಂದ ಹೊರಬಿದ್ದಿದ್ದು, ಅವರ ಬದಲಿಗೆ ಶ್ರೀಲಂಕಾದ ದಾಸುನ್ ಶಾನಕ 2 ಕೋಟಿ ರೂ.ಗೆ ಆರ್‌ಆರ್ ಸೇರಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮೊತ್ತದ ಡೀಲ್ ಒಂದು ನಡೆದಿದೆ.

ರಾಜಸ್ಥಾನ ರಾಯಲ್ಸ್ ತಂಡದ ಮಾಲೀಕತ್ವದ ರೇಸ್ ಕೊನೆಗೊಂಡಿದ್ದು, ಅಮೆರಿಕ ಮೂಲದ ಉದ್ಯಮಿ ಕಲ್ ಸೋಮನಿ ನೇತೃತ್ವದ ಒಕ್ಕೂಟವು ತಂಡವನ್ನು ಬರೋಬ್ಬರಿ 1.63 ಬಿಲಿಯನ್ ಡಾಲರ್ (ಸುಮಾರು 15,286 ಕೋಟಿ ರೂ.) ಮೌಲ್ಯಕ್ಕೆ ಖರೀದಿಸಿದೆ.ಈ ಒಪ್ಪಂದದೊಂದಿಗೆ ರಾಜಸ್ಥಾನ ರಾಯಲ್ಸ್ ಐಪಿಎಲ್ ಇತಿಹಾಸದಲ್ಲೇ ಅತ್ಯಂತ ದುಬಾರಿ ಫ್ರಾಂಚೈಸಿಯಾಗಿ ಹೊರಹೊಮ್ಮಿದೆ. ಸೋಮನಿ ಅವರಿಗೆ ವಾಲ್‌ಮಾರ್ಟ್ ಕುಟುಂಬದ ರಾಬ್ ವಾಲ್ಟನ್ ಮತ್ತು ಎನ್ ಎಫ್‌ಎಲ್ ತಂಡವಾದ 'ಡೆಟ್ರಾಯಿಟ್ ಲಯನ್ಸ್' ಮಾಲೀಕರಾದ ಹ್ಯಾಂಪ್ ಕುಟುಂಬ ಸಾಥ್ ನೀಡಿದೆ. ಫೋರ್ಡ್ ಮೋಟಾರ್ ಕಂಪನಿಯ ಸಹ-ಮಾಲೀಕರಾದ ಶೀಲಾ ಫೋರ್ಡ್ ಹ್ಯಾಂಪ್ ಕೂಡ ಈ ಒಕ್ಕೂಟದ ಭಾಗವಾಗಿದ್ದಾರೆ. ಈ ಮಾಲೀಕತ್ವದ ಬದಲಾವಣೆಯು ಐಪಿಎಲ್ 2026ರ ಸೀಸನ್ ನಂತರ ಅಧಿಕೃತವಾಗಿ ಜಾರಿಗೆ ಬರಲಿದೆ. ಗಾಯದ ಕಾರಣದಿಂದಾಗಿ ಇಂಗ್ಲೆಂಡ್‌ನ ಸ್ಟಾರ್ ಆಲ್‌ರೌಂಡರ್ ಸ್ಯಾಮ್ ಕರನ್ ಐಪಿಎಲ್ 2026 ರಿಂದ ಹೊರಬಿದ್ದಿದ್ದಾರೆ. ಇದು ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ಕರನ್ ಅವರ ಬದಲಿಗೆ ಶ್ರೀಲಂಕಾದ ಟಿ20 ನಾಯಕ ದಾಸುನ್ ಶಾನಕ ಅವರನ್ನು 2 ಕೋಟಿ ರೂ. ಮೊತ್ತಕ್ಕೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ದಾಸುನ್ ಶನಕ 6 ಟೆಸ್ಟ್, 71 ಏಕದಿನ ಮತ್ತು 131 ಟಿ20 ಶ್ರೀಲಂಕಾವನ್ನು ಪ್ರತಿನಿಧಿಸಿದ್ದಾರೆ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 3350 ಕ್ಕೂ ಹೆಚ್ಚು ಅಂತರರಾಷ್ಟ್ರೀಯ ರನ್ ಮತ್ತು 86 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಈ ಹಿಂದೆ ಇವರು ಗುಜರಾತ್ ಟೈಟಾನ್ಸ್ ಪರ ಆಡಿದ್ದರು.ಸ್ಯಾಮ್ ಕರನ್ ಅವರನ್ನು ಕಳೆದುಕೊಂಡಿರುವುದು ಬೇಸರದ ಸಂಗತಿ. ಆದರೆ ದಾಸುನ್ ಶಾನಕ ಅವರಂತಹ ಅನುಭವಿ ಫಿನಿಶರ್ ತಂಡದ ಸಮತೋಲನವನ್ನು ಕಾಪಾಡಲಿದ್ದಾರೆ,'' ಎಂದು ತಂಡದ ನಿರ್ದೇಶಕ ಕುಮಾರ್ ಸಂಗಕ್ಕಾರ ತಿಳಿಸಿದ್ದಾರೆ. ಐಪಿಎಲ್ 2025ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿದ್ದ ಸ್ಯಾಮ್ ಕರನ್ ಮತ್ತು ರವೀಂದ್ರ ಜಡೇಜಾ ಅವರನ್ನು ಆರ್‌ಆರ್ ತಂಡವು ಪಡೆದುಕೊಂಡಿತ್ತು.



ಐಪಿಎಲ್ ಇತಿಹಾಸದಲ್ಲೇ ದಾಖಲೆ

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966